"ಸಕಾಲ"ಬಗ್ಗೆ ನನಗೆ ಒಳ್ಳೆಯ ಅಭಿಪ್ರಾಯ ಇದೆ, ಸಕಾಲದಡಿ ರೇಷನ್ ಕಾರ್ಡ ನಿಗದಿತ ಸಮಯದಲ್ಲಿ ಪಡೆದುಕೊಂಡೆನು. ಸಕಾಲವನ್ನು ಅಳವಡಿಸಿ ನಮ್ಮ ರಾಜ್ಯ ಸರಕಾರವು ಒಂದು ಅವಿಷ್ಕಾರಿ ಪ್ರಯತ್ನವನ್ನು ಮಾಡಿರುವುದು ಶ್ಲಾಘನೀಯ ಈಗಿನ ಸಮಾಜಕ್ಕೆ ಕಾಲಮಿತಿ ಬಹಳ ಪ್ರಮುಖವಾದ ವಿಷಯ, ಸರಕಾರ ಇದನ್ನು ಮನಗಂಡಿರುವುದು ಸಂತಸದ ವಿಷಯ, ಸಮಾಜದ ಬದಲವಣೆಗೆ ಸಕಾಲ ಕಾರಣವಾಗುವುದು ಖಂಡಿತ ಎಲ್ಲಾ ಜಿಲ್ಲೆಗಳಲ್ಲಿ ಮಾಹಿತಿ ಕೇಂದ್ರವನ್ನು ತೆರೆಯುವ ಅವಶ್ಯಕತೆ ಇದೆ"

**ಪ್ರಾಂಕಿ ದೆಸ,**

**ಹೊಸನಗರ,**

**ಶಿವಮೊಗ್ಗ**

"ಒಡಳಿತ ಇಲಾಖೆಯಲ್ಲಿ ಎಫ್ ಐ ಆರ್ ಪಡೆದುಕೊಂಡೆ, ಸಕಾಲದಂತಹ ಯೋಜನೆ ಸರ್ಕಾರದಿಂದ ಜಾರಿ ಆಗಿರುವುದು ಸಂತೋಷದ ವಿಷಯ, ಅದರಲ್ಲೂ ಸಕಾಲ ಸಿಬ್ಬಂದಿ ಕರೆ ಮಾಡಿ ಮಾಹಿತಿ ನೀಡುತ್ತಿರುವುದು ಆಶ್ಚರ್ಯವೆ ಸರಿ. ಗ್ರಾಮದ ಜನತೆ ಹಳ್ಳಿಯಿಂದ ತಾಲ್ಲೂಕಿಗೆ ಓಡಾಡುವ ಪ್ರಮಾಯ ತಪ್ಪಿದೆ/ಕಡಿಮೆಯಾಗಿದೆ, ನಾಗರಿಕರ ಭವಣೆಗಳನ್ನು ಅರಿತು ನಡೆಯುತ್ತಿರುವ ಸರಕಾರದ ಈ ಪ್ರಯತ್ನಕ್ಕೆ ಧನ್ಯವಾದಗಳು ಹಾಗೂ ಶುಭಕಾಮನೆಗಳು"

**ಬಸವರಾಜ್ ಹೆಚ್ ಮನ್ನೂರ್,**

**ಬಿಜಾಪುರ,**

ಸಿಟಿ ಮುನಿಸಿಪಲ್ ನಲ್ಲಿ ವಾಣಿಜ್ಯ ಪರವಾನಿಗೆಗೆ ಕೋರಿದ್ದರು "ಈ ಸೇವೆಗೆ 500 ರೂ ಪಡೆದುಕೊಂಡಿದ್ದಾರೆ. ಯಾವ ಸೇವೆಗೆ ಎಷ್ಟು ಶುಲ್ಕ, ನಿಗದಿತ ನಮೂನೆ, ನಿಗದಿಪಡಿಸಿರುವ ದಾಖಲಾತಿ ಯಾವುದೆ ವಿವರಗಳು ಇಲ್ಲ, ಇದನ್ನು ಕಡ್ಡಾಯ ಮಾಡಿ ಎಂದು ಕೋರಿದ್ದಾರೆ"

ಶ್ರೀ ನಂಜುಡಪ್ಪ,

ಶಿವಮೊಗ್ಗ ಬಾಯ್ಲರ್ ಕಾರ್ಖಾನೆ ಸುರಕ್ಷತೆ ಇಲಾಖೆ ಯಲ್ಲಿ ಬಾಯ್ಲರ್ ಪ್ರಮಾಣ ಪತ್ರ ಕೋರಿದ್ದರು " ಈಗ ಸಕಾಲದಡಿ ಬರುವ ಸರಕಾರಿ ಸೇವೆಗಳ ಕಾರ್ಯನಿರ್ವಹಣೆ ಅತ್ಯುತ್ತಮವಾಗಿದೆ, ಕೆಲಸ ಆಗುವುದೋ ಇಲ್ಲವೋ ಟೆನ್ಷ್ ನ್ ಇರುವುದಿಲ್ಲ. ಏಕೆಂದರೆ ಎಂದು ಸೇವೆ ಸಿಗುತ್ತದೆ ಎಂದು ಸ್ವೀಕೃತಿ ಪತ್ರದಲ್ಲಿ ಮಾಹಿತಿ ಸಿಗುತ್ತದೆ, ಇದರಿಂದ ನಾಗರಿಕರ ಸಮಯ ಹಾಗೂ ಹಣದ ಉಳಿತಾಯ ಕೂಡ ಆಗುತ್ತಿದೆ"

L10990000232950
ಕುಶೇಂದ್ರ ಪ್ರಭೂ
ಹುಬ್ಬಳ್ಳಿ
ನಗರ ಪಾಲಿಕೆ
"ಟ್ರೇಡ್ ಪರವಾನಾಗೆ ಅನುಮೋದನೆಯಾಗಿದೆ, 2-3 ಬಾರಿ ಕಚೇರಿಗೆ ಭೇಟಿ ನೀಡಿದೆ, ಸಕಾಲದ ಬಗ್ಗೆ ನನಗೆ ಗೊತ್ತಿರಲಿಲ್ಲ, ನಿಮ್ಮ ಸಿಬ್ಬಂದಿ ಕರೆಮಾಡಿ ಮಾಹಿತಿ ನೀಡುರುವುದು ಸಂತಸದ ವಿಷಯ ಸರಕಾರಿ ಸೇವೆಗಳ ನಿರ್ವಹಣೆಯಲ್ಲಿ ಇಂತಹ ಬದಲಾವಣೆಯಾಗಿರುವುದು ಸೋಜಿಗದ ವಿಷಯವೆ ಸರಿ ಇನ್ಯಾವುದೆ ದೇಶದಲ್ಲೂ ಈ ರೀತಿಯ ಸೇವೆಗಳ ನಿರ್ವಹಣೆ ಆಗುತ್ತಿಲ್ಲ ನಮ್ಮ ರಾಜ್ಯಕ್ಕೆ ಇದು ಹೆಮ್ಮೆಯ ವಿಷಯವೆ ಸರಿ.

L30990000389279
ನವಲ್ಗುಂದ್,ಟೌನ್ ಮುನಿಸ್ಸಿಪಾಲ್ ಸೇವೆ

"ಸಕಾಲದ ಬಗ್ಗೆ ಗೊತ್ತಿತು, ಕೋರಿದ ಸೇವೆ ಕಾಲಮಿತಿಯಲ್ಲಿ ದೊರಕಿತು, ಮರಣ ಪ್ರಮಾಣ ಪತ್ರವು ಅನುಮೋದನೆಯಾಗಿದೆ, ಈಗ ಸರಕಾರಿ ಸೇವೆಗಳ ನಿರ್ವಹಣೆ ಯಲ್ಲಿ ಉತ್ತಮ ಬದಲಾವಣೆಯಾಗಿದೆ, ತ್ವರಿತವಾಗಿ ಕಾಲಮಿತಿಯಲ್ಲಿ ಸೇವೆಗಳ ನಿರ್ವಹಣೆ ಯಾಗುತ್ತಿರುವದು ಉತ್ತಮ ಬೆಳವಣಿಗೆಯಾಗಿದೆ.

ಆದರೆ ಸಕಾಲದಲ್ಲಿ ಪೆನಾಲ್ಟಿ (ಕಾಲಮಿತಿ ಮೀರಿ ಸೇವೆ ನೀಡಿದರೆ ಪರಿಹಾರ ಧನ ನೀಡುವ ಪದ್ದತಿ) ಇದೆ ಎಂಬುದು ನನಗೆ ತಿಳಿದಿಲ್ಲಾ "

L40990000138767
ಅಶೋಕ 2) ಸಂಥಿಪ ತಂದೆ ನೀಲಕಂಠ ಪಾಟೀಲ
ಧಾರವಾಡ
"ಹೊಸ ಕಟ್ಟಡ ನಿರ್ಮಾಣ ಪರವಾನಾಗಿ ಹಾಗೂ ನಿವಾಸಕ್ಕಾಗಿ ಸುಮಾರು 2400 ಚ.ಅ ನಿವೇಶನದ ಯೋಜನೆಯ ಅರ್ಜಿಯು ತಿರಸ್ಕೃತವಾಗಿದೆ, ಈ ಸೇವೆಯಲ್ಲಿ ಸಲ್ಲಿಸಲಾಗಿರುವ ನೀಲಿ ನಕ್ಷೇ ವ್ಯತ್ಯಾಸ ಕಂಡುಬಂದಿದ್ದು ಅರ್ಜಿ ತಿರಸ್ಕೃತವಾಗಿದೆ. ಸೇವೆಯ ಸರಳೀಕರಣಕ್ಕು ಒತ್ತುಕೊಡಬೇಕು ಎಂದು ನನ್ನ ಭಾವನೆ"

PR0011000912880
ಗದಿಗೆಪ್ಪ ಹೊಲಕಾರ
ಧಾರವಾಡ
"ಗ್ರಾಮ ನೈರ್ಮಲ್ಯ ನಿರ್ವಹಣೆಯು ಅನುಮೋದನೆಯಾಗಿದೆ ಕೋರಿದ ಸೇವೆ ದೊರೆಯಿತು. ಸಕಾಲ ಸೇವೆಗಳ ನಿರ್ವಹಣೆ ರೀತಿಯು ತೃಪ್ತಿದಾಯಕವಾಗಿದೆ ಇದರಿಂದ ಹಲವಾರು ನಾಗರಿಕರು ಸಂತಸ ಸಂತಸ ತಂದಿದೆ ಗ್ರಾಮ ಪಂಚಾಯತ್‌ನಲ್ಲಿ ಸೂಚನಾ ಫಲಕವನ್ನು ವಿಕ್ಷೀಸಿರುವುದರಿಂದ ಸಕಾಲದ ಬಗ್ಗೆ ತಿಳಿದುಕೊಂಡೆ ಹಾಗೂ ಸಕಾಲವು ಉತ್ತಮ ಅಧಿನಿಯಮವಾಗಿದ್ದು ನಿರಂತರವಾಗಿ ಇದು ನೆಲೆನಿಲ್ಲಬೇಕು/ಚಾಲ್ತಿಯಲ್ಲಿರಬೇಕು"

FD0012000961763

ಶಾರದ ಕುಲಕರ್ಣಿ
ಧಾರವಾಡ
"ಪಡಿತರ ಚೀಟಿಯಲ್ಲಿ ಸದಸ್ಯತ್ವ ತಿದ್ದುಪಡಿ ಅಥವಾ ತೆಗೆದುಹಾಕುವಿಕೆ ಸೇವೆ ಕೋರಿದ್ದೆ, ಕಾಲಮಿತಿಯಲ್ಲಿ ದೊರೆಯಿತು. ಅದೇ ತಾಲ್ಲೂಕಿನಲ್ಲಿ ವಿಳಾಸ ಬದಲಾವಣೆಯನ್ನು ಮಾಡಿ ಕೊಟ್ಟರು, ಒಂದೇ ದಿನದಲ್ಲಿ ಪಡಿತರ ಚೀಟಿ ಸಿಕ್ಕಿದೆ ಎಂದು ಹರ್ಷೋಲ್ಲಾಸದಿಂದ" ಹೇಳಿದರು

SS0990000534517

ಪ್ರೇಮ್ ಕುಮಾರ್ s/o ಕೆ.ಸುಧಾಕರನ್

"ಭೂ ಮಾಪನ ಮತ್ತು ಭೂ ಕಂದಾಯ ಇಲಾಖೆಯಲ್ಲಿ ಸೇವೆ ಪಡೆದುಕೊಂಡು ಇಲ್ಲಿಯವರೆಗೂ ಸಕಾಲದ ಬಗ್ಗೆ ತಿಳಿದಿರಲಿಲ್ಲ ಅರ್ಜಿದಾರರು ಅವರ ಕೆಲಸಕ್ಕಾಗಿ 7 ದಿನವಷ್ಟೆ ಕಾದಿದ್ದು, ತ್ವರಿತವಾಗಿ ಸೇವೆ ದೊರಕಿತು ಸಕಾಲದ ನಿರ್ವಹಣೆ ಅತ್ಯುನ್ನತ ಮಟ್ಟದಲ್ಲಿ ಇರುವುದು" ಎಂದು ಅರ್ಜಿದಾರರು ಹೇಳಿದರು.

SS0990000505261
ರಿತೇಶ್. ಬಿ

ವಕೀಲರು, ಕುಂದಪುರ
"ಭೂ ಮಾಪನ ಮತ್ತು ಭೂ ಕಂದಾಯ ಇಲಾಖೆಯ ಸೇವೆಗೆ ಅರ್ಜಿ ಸಲ್ಲಿಸಿದ್ದು" ಸಕಾಲದಲ್ಲಿ ಅರ್ಜಿಸಲ್ಲಿಸಿದರೆ ಸ್ವೀಕೃತಿಯನ್ನು ಪಡೆಯಬಹುದು ಇದರಿಂದಾಗಿ ಕಛೇರಿಯ ಸಿಬ್ಬಂದಿಗಳು ನಿಮ್ಮ ಅರ್ಜಿ ಬಂದಿಲ್ಲ ಅಥವಾ ಎಲ್ಲೋ ಕಳೆದಿದೆ ಎಂದು ಹೇಳಲು ಸಾಧ್ಯವಾಗುವುದಿಲ್ಲ ಎಂದು" ಅರ್ಜಿದಾರರು ಹೇಳುತ್ತಾರೆ.

SS0990000468754
ವಿಜಯ್,ಕತ್‌ಬೆಲ್‌ತುರು, ಕುಂದಪುರ

"ಭೂ ಮಾಪನ ಮತ್ತು ಭೂ ಕಂದಾಯ ಇಲಾಖೆಯ ಸೇವೆಗೆ ಅರ್ಜಿ ಸಲ್ಲಿಸಿದ್ದು, ಸಕಾಲ ಸೇವೆ ಬಡಜನರಿಗೆ ಉತ್ತಮವೆ ಹೊರತು ಬೇರೆಯವರಿಗೆಲ್ಲ ಯಾಕೆಂದರೆ ಅವರು ಲಂಚ ಕೊಟ್ಟು ಸೇವೆಯನ್ನು ಅತಿ ಶೀಘ್ರವಾಗಿ ಸೇವೆ ಪಡೆದುಕೊಳ್ಳುತ್ತಾರೆ" ಎಂದು ಅರ್ಜಿದಾರರು ಹೇಳುತ್ತಾರೆ.

RD0990000402259
ಟಿ. ಗುರುಮೂರ್ತಿ ರಾವ್

ವಕೀಲರು, ಕುಂದಪುರ

"ಕಂದಾಯ ಇಲಾಖೆಯ ಹಕ್ಕುಗಳ ಪ್ರಮಾಣ ಪತ್ರದ ದಾಖಲೆ ಸಕಾಲ ಬರುವ ಮೊದಲು ನಾನೆ ಖುದ್ದಾಗಿ ಸೇವೆ ಪಡೆಯಲು ಹೋಗಬೇಕಿತ್ತು ಆದರೆ ಈಗ ನನ್ನ ಸಹಾಯಕರ ಮೂಲಕ ಸೇವೆ ಪಡೆಯಲು ಸಂತಸವಾಗುತ್ತದೆ, ಸಕಾಲ ಉತ್ತಮವಾಗಿ ಕಾರ್ಯನಿರ್ವಹಣೆವಾಗುವುದು ಹಾಗೂ ಸಕಾಲವನ್ನು ಅಂತರ್ಜಲಾದ ಮುಖಾಂತರವು ಸೇವೆ ಪಡೆಯುವುದು ನಮ್ಮೆಲ್ಲರ ಭಾಗ್ಯ".

RD0990000401841
ಕೆ. ನಾಗೇಶ್ ರಾವ್ s/o ರಾಮನಾಥ್ ರಾವ್,
ಫಿಶ್ ಮಾರ್ಕೆಟ್ ರಸ್ತೆ,
ಕುಂದಾಪುರ

"ಕಂದಾಯ ಇಲಾಖೆಯ ಹಕ್ಕುಗಳ ಪ್ರಮಾಣ ಪತ್ರದ ದಾಖಲೆಗಾಗಿ ಕೋರಿದ್ದೆ ಪಡೆದುಕೊಂಡಿದ್ದೇನೆ, ಸಕಾಲದ ಅನುಷ್ಠಾನ ನಂತರ ನಾಗರಿಕರಿಗೆ ಉತ್ತಮ ಗುಣಮಟ್ಟದ ಸೇವೆಗಳು ಸರಕಾರದಿಂದ ದೊರಕುತ್ತಿದೆ" ಎಂದು ಅರ್ಜಿದಾರರು ತಿಳಿಸಿದ್ದಾರೆ.

**ಸೆಲ್ವ ರಾಜ್,**

**ಬೆಂಗಳೂರು ದಕ್ಷಿಣ,**

**ಖಾತಾ ಬದಲಾವಣೆಗಾಗಿ ಕೋರಿದ್ದರು, "ಜಿಲ್ಲಾಧಿಕಾರಿ ಕಛೇರಿಯಿಂದ ಸಕಾಲದ ಬಗ್ಗೆ ತಿಳಿಯಿತು, ಕರೆ ಕೇಂದ್ರಕ್ಕೆ ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿದೆ, ಬಿಬಿಎಂಪಿ ಸೇವೆಗಳ ಬಗ್ಗೆ ತಿಳಿದುಕೊಂಡೆ. ಸುಲವಾಗಿ ಮಾಹಿತಿ ದೊರೆಯುತ್ತಿರುವುದು ಸಂತಸದ ವಿಷಯವಾಗಿದೆ. ಕೋರಿದ ಸೇವೆಯು ಸಮಯದಲ್ಲಿ ದೊರಕಿತು. ಸಕಾಲ ನಾಗರಿಕರ ಮನಸ್ಸಿಗೆ ನೆಮ್ಮದಿ ನೀಡುತ್ತಿದೆ"**

ಚಂದನ ವಾಹಿನಿಯಲ್ಲಿ ದಿನಾಂಕ 01/01/14 ರಂದು ಬೆಳಗ್ಗೆ 8.00 ಗಂಟೆಯಿಂದ 9.00 ಗಂಟೆವರೆಗೆ ಸಕಾಲದ ಬಗ್ಗೆ ನೇರ ಫೋನ್-ಇನ್ ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಂದ ನಾಗರಿಕರು ಮಾಡಿದ ದೂರುಗಳ ವಿವರಗಳು ಈ ಕೆಳಗಿನಂತಿವೆ.

| ಕ್ರಮ ಸಂಖ್ಯೆ | ಹೆಸರು ಮತ್ತು ವಿಳಾಸ ಶ್ರೀ/ಶ್ರೀಮತಿ | ದೂರು |
|---|---|---|
| 1 | ಜಿ.ಎಲ್. ಲಮಾಣಿ | ರಿಜಿಸ್ಟ್ರಾರ್ ಕೋ-ಆಪರೇಟೀವ್ ಸೊಸೈಟಿಗೆ ಸ್ಟೇಟ್ ಲೆವೆಲ್ ಆಡಿಟ್ ಸೊಸೈಟಿಗೆ ಸಂಬಂಧಿಸಿದಂತೆ 97 ಪುಟಗಳ ದೀರ್ಘವಾದ ದೂರು ನೀಡಿದ್ದು, (ಕಡತ ಸಂಖ್ಯೆ: ಗಃಅ/5/238/ದೂರು/2012-13)ಈ ಸಂಬಂಧ ವಿಚಾರಣೆಯ ನಂತರ ನಿಬಂಧಕರು ಸೂಕ್ತ ಕ್ರಮ ತೆಗೆದುಕೊಂಡಿರುತ್ತಾರೆ. ಆದರೆ ಈ ಕ್ರಮಕ್ಕೆ ಸಂಬಂಧಪಟ್ಟ ಸಚಿವರು ತಡೆ ನೀಡಿದ್ದು, 4 ತಿಂಗಳನಿಂದ ವಿಲೇ ಆಗಿಲ್ಲವೆಂದು ತಿಳಿಸಿರುತ್ತಾರೆ. |
| 2 | ನಾರಾಯಣ್ ನಾಯಕ್ | 1958 ರಲ್ಲಿ ಸರ್ಕಾರ ರೈತರಿಗೆ ನೀಡಿದ ಜಮೀನನ್ನು 30 ವರ್ಷಗಳ ನಂತರ ಕನ್‌ಫರ್ಮೇಷನ್ ಮಾಡಬೇಕಿರುತ್ತದೆ. ಈ ಪ್ರಕರಣದಲ್ಲಿ ದಿನಾಂಕ 6/2/2002 ರಂದು ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ(ಕೆಎಟಿ) ಆದೇಶವಾಗಿದ್ದು, ಅದರಂತೆ ಜಮೀನುಗಳು ಕನ್‌ಫರ್ಮೇಷನ್ ಮಾಡಬೇಕಾಗಿರುತ್ತದೆ. ಆದರೆ ಸುಮಾರು 12 ವರ್ಷಗಳಾದರೂ ಇದುವರೆಗೂ ಕನ್‌ಫರ್ಮೇಷನ್ ಮಾಡದೇ (ಕಡತ ಸಂಖ್ಯೆ: ಐಓಆಅಖ/10/2001-02) ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಬಾಕಿ ಉಳಿದಿದೆ ಹಾಗೂ ಇದೇರೀತಿಯ ಸುಮಾರು ಕಡತಗಳು 10/12 ವರ್ಷಗಳಂದ ಬಾಕಿ ಇದ್ದು, ಕಡತಗಳ ತ್ವರಿತ ವಿಲೇವಾರಿ ಬಗ್ಗೆ ಕ್ರಮ ಕೈಗೊಳ್ಳಲು ಕೋರಿರುತ್ತಾರೆ. |

| | | |
|---|---|---|
| 3 | ಶಿವಾನಂದ್<br>ಜಮಖಂಡಿ ತಾ:<br>ಬಾಗಲಕೋಟೆ ಜಿಲ್ಲೆ. | ಜಮೀನು ಖರೀದಿಗಾಗಿ ಕೃಷಿ ಕೂಲಿ ಪ್ರಮಾಣಪತ್ರವನ್ನು ಮೊದಲು ನೀಡುತ್ತಿದ್ದರು. ಆದರೆ ಈಗ ಕೇವಲ ಪ್ರಮಾಣ ಪತ್ರವನ್ನು ನೀಡುತ್ತಿದ್ದು, ಅದರಲ್ಲಿ ಜಮೀನು ಖರೀದಿಗೆ ಇದನ್ನು ಬಳಕೆ ಮಾಡುವಂತಿಲ್ಲ ಎಂದು ನಮೂದಿಸುತ್ತಿದ್ದಾರೆಂದು ಮತ್ತು ಹಳೇ ಪದ್ಧತಿಯನ್ನೇ ಮುಂದುವರೆಸಿಕೊಂಡು ಹೋದರೆ ಕೃಷಿಕರಿಗೆ ಅನುಕೂಲವಾಗುತ್ತದೆಂದು ತಿಳಿಸಿದರು. |
| 4 | ಹನುಮಂತರಾತೂಡ್<br>ಉಪ್ಪಾರನಂದಿಹಾಳ ಪಂಚಾಯ್ತಿ,<br>ಲಿಂಗಸುಗೂರು ತಾ:<br>ರಾಯಚೂರು ಜಿಲ್ಲೆ. | ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪ್ರತಿ 3 ತಿಂಗಳಿಗೊಮ್ಮೆ ವರ್ಗಾವಣೆ ಆಗುತ್ತಿರುವುದರಿಂದ ನರೇಗಾ ಮತ್ತು ಇಂದಿರಾ ಆವಾಜ್ ಯೋಜನೆ ಸಾಕಾರವಾಗುತ್ತಿಲ್ಲ. ಲಿಂಗಸುಗೂರುನಲ್ಲಿ ಪ.ಜಾತಿ/ಪಂಗಡ, ಹಿಂದುಳಿದ ವರ್ಗಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿದ್ದು ನಿರುದ್ಯೋಗ ಸಮಸ್ಯೆ ಇರುತ್ತದೆ ಹಾಗೂ ಕುಡಿಯುವ ನೀರಿನ ಸಮಸ್ಯೆ ಮುಂತಾದ ಅನೇಕ ಸಮಸ್ಯೆಗಳು ಜಿಲ್ಲೆಯಲ್ಲಿದ್ದು, ಈ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿರುತ್ತಾರೆ. |
| 5 | ಎನ್.ವಿ. ಗಣಪತಿ<br>ಬಸವೇಶ್ವರನಗರ,<br>ಬೆಂಗಳೂರು-560079 | ಇವರು ಕುಶಾಲನಗರ ಗುಡ್ಡೆಹೊಸೂರಿನ ಬಳ್ಳೂರು ಗ್ರಾಮದಲ್ಲಿ ಸ.ನಂ.5 ಜಮೀನು ಇದ್ದು, ಸರ್ವೇ ಮಾಡಿಸಿದೆ. ಜಿಲ್ಲಾಧಿಕಾರಿಗಳು ಸಾರ್ವಜನಿಕ ರಸ್ತೆ ಮಾಡಿಸಲು ರಸ್ತೆ ಸರ್ವೇಯನ್ನು ಮಾಡಿಸಿರುತ್ತಾರೆ. ಆದರೆ ಮಂಡಲ ಪಂಚಾಯತ್‌ರವರು ಬಳ್ಳೂರು ಗ್ರಾಮ ನಕ್ಷೆ ಪ್ರಕಾರ ರಸ್ತೆ ಮಾಡಿಸದೇ ನಮ್ಮ ಜಮೀನಿನ ಅರ್ಧ ಎಕರೆಯನ್ನು ಒತ್ತುವರಿ ಮಾಡಿ ಅದರಲ್ಲಿ ರಸ್ತೆ ಮಾಡಿಸಿರುತ್ತಾರೆ. ಮತ್ತು ವ್ಯಕ್ತಿಯೊಬ್ಬರು ಸಾರ್ವಜನಿಕ ರಸ್ತೆಯನ್ನು ಆಕ್ರಮಿಸಿಕೊಂಡು ಮನೆ ಮನೆಕಟ್ಟಿದ್ದಾರೆಂದು ದೂರಿರುತ್ತಾರೆ.<br><br>ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |
| 6 | ಎಂ.ಎಸ್. ಹಿರೇಮಠ್ | ಇವರು ಸಕಾಲ-ಹಲೋ ಗೆಳೆಯರೆ ಕಾರ್ಯಕ್ರಮದಲ್ಲಿ 18/12/2013ರಂದು ನೀಡಿದ ದೂರಿನ ಬಗ್ಗೆ ಕ್ರಮ ಕೈಗೊಂಡಿರುವುದರಿಂದ ತಮ್ಮ ಅಭಿನಂದನೆಯನ್ನು ತಿಳಿಸಿರುತ್ತಾರೆ. |
| 7 | ಜಿ. ಲಿಂಗಯ್ಯ<br>ಬೆಂಗಳೂರು-73. | ಇವರು ಕುಣಿಗಲ್ ತಾಲ್ಲೂಕು ಕಡಮತ್ತಿಕೆರೆಯ ಕಿತ್ತಿನಮಂಗಲ ಸ.ನಂ.49ರ ಜಮೀನನ್ನು ಯಾವುದೇ ಪೂರ್ವಭಾವಿ ನೋಟಿಫಿಕೇಷನ್ ನೀಡದೇ ಹೇಮಾವತಿ ಚಾನಲ್ ಕಾರ್ಯಕ್ಕೆ ಭೂ ಸ್ವಾಧೀನ ಮಾಡಿಕೊಂಡಿರುತ್ತಾರೆ. ಅಲ್ಲದೇ ಸ್ವಾಧೀನ ಪಡಿಸಿಕೊಂಡ ಜಮೀನಿಗೆ ಯಾವುದೇ ಪರಿಹಾರವನ್ನು ಸಹ ನೀಡಿರುವುದಿಲ್ಲ ಹಾಗೂ ಈ ಬಗ್ಗೆ ಈ ಯೋಜನೆಗೆ ಸಂಬಂಧಪಟ್ಟ ಕಛೇರಿಯಲ್ಲಿ ಕೇಳಲಾಗಿ ಅವರು ಸಮರ್ಪಕ ಮಾಹಿತಿ ನೀಡುತ್ತಿಲ್ಲವೆಂದು ದೂರಿರುತ್ತಾರೆ.<br><br>ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |
| 8 | ರಫಿ<br>ಲಿಂಗಸುಗೂರು ತಾಲ್ಲೂಕು,<br>ರಾಯಚೂರು ಜಿಲ್ಲೆ | 371ಜೆ ಕಲಂ ಪ್ರಕಾರ ಹೈದರಾಬಾದ್-ಕರ್ನಾಟಕ ಪ್ರದೇಶದ ವಸತಿಕರಿಗೆ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಲು ಅನುವಾಗುವಂತೆ ಪ್ರಮಾಣಪತ್ರವನ್ನು ನೀಡಬೇಕೆಂದು ಕೋರಿರುತ್ತಾರೆ.<br><br>ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |
| 9 | ನಾಗರತ್ನ<br>ಸವಣೂರು ತಾಲ್ಲೂಕು,<br>ಹಾವೇರಿ ಜಿಲ್ಲೆ. | ಶಿವಮೊಗ್ಗ ಪಶು ವೈದ್ಯಕೀಯ ಕಾಲೇಜ್‌ನಲ್ಲಿ ತಮ್ಮ ಮಗ ವೆಟರಿನರಿ ಸೈನ್ಸ್ ವಿದ್ಯಾಭ್ಯಾಸ ಮಾಡಿದ ಬಗ್ಗೆ ಪ್ರಮಾಣ ಪತ್ರ ನೀಡಿರುತ್ತಾರೆ. ಈ ವಿದ್ಯಾರ್ಹತೆಗೆ ತಕ್ಕಂತೆ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸಿದಾಗ ಅವರು ತಾವು ವಿಧ್ಯಾಭ್ಯಾಸ ಮಾಡಿರುವ ಕಾಲೇಜು ಅಧಿಕೃತವಾಗಿಲ್ಲ ಹಾಗೂ ತಮಗೆ ವೆಟರಿನರಿ ಸಂಖ್ಯೆ (ಡಾಕ್ಟರ್ ಸಂಖ್ಯೆ) ನೀಡಿರುವುದಿಲ್ಲ ಎಂಬ ಕಾರಣದಿಂದ ಅರ್ಜಿಯನ್ನು ತಿರಸ್ಕರಿಸುತ್ತಿದ್ದಾರೆಂದು ದೂರಿರುತ್ತಾರೆ.<br><br>ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |
| 10 | ಪಟ್ಟಾಬಿ<br>ಕರಿಯಣ್ಣಪಾಳ್ಯ,<br>ಬೆಂಗಳೂರು-560084. | ನಮ್ಮ ಮನೆಯ ಪ್ರದೇಶದಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ 3 ವರ್ಷಗಳಿಂದ ವಾರಕ್ಕೆ ಕೇವಲ ಒಂದು ದಿವಸ ಮಾತ್ರ ನೀರು ಸರಬರಾಜು ಮಾಡುತ್ತಿದ್ದು, ಈ ಪ್ರದೇಶದ 5-6 ಮೀಟರ್ ದೂರದ ಪ್ರದೇಶಕ್ಕೆ ವಾರದಲ್ಲಿ 3 ಬಾರಿ ನೀರು |

| | | |
|---|---|---|
| | | ಸರಬರಾಜು ಮಾಡುತ್ತಿದ್ದಾರೆ. ಈ ಬಗ್ಗೆ ಮಂಡಳಿಯ ಫ್ರೇಜರ್‌ಟೌನ್ ಉಪ ವಿಭಾಗ ಕಛೇರಿಗೆ ಸಂಪರ್ಕಿಸಲಾಗಿ ಅವರು ಸಮಸ್ಯೆ ಬಗೆಹರಿಸುವ ಮಾತುಗಳನ್ನಾಡಿ, ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ತಿಳಿಸಿರುತ್ತಾರೆ.<br><br>ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |
| 11 | ಜರಪ್ಪ ರಾಮಣ್ಣ ಸಿಂಧೆ<br>ಭಾಲ್ಕಿ ತಾಲ್ಲೂಕು,<br>ಬೀದರ್ ಜಿಲ್ಲೆ | ಉಇಋಔಙ ನಲ್ಲಿ ಗ್ರಾಮ ವಿದ್ಯುತ್ ಪ್ರತಿನಿಧಿಯಾಗಿ 10 ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದು, ಇವರಂತೆ ಜಿಲ್ಲೆಯಲ್ಲಿ ಸುಮಾರು 850 ಜನರು ಕೆಲಸ ಮಾಡುತ್ತಿದ್ದು, ಇದುವರೆಗೂ ಕೆಲಸ ಖಾಯಂ ಮಾಡಿಲ್ಲ ಹಾಗೂ ಕೇವಲ ರೂ.2,000 ದಿಂದ 5,000 ರವರೆಗೆ ವೇತನ ನೀಡುತ್ತಿದ್ದಾರೆ. ಪ್ರತೀ ತಿಂಗಳು ಗ್ರಾಮಗಳಿಗೆ ಹೋಗಿ ರೀಡಿಂಗ್ ಮಾಡಿ, ಬಿಲ್ಲಿನ ಹಣ ಪಡೆದುಕೊಂಡು ಪಾವತಿಸುತ್ತಿದ್ದೇವೆ. ಈ ಕೆಲಸಕ್ಕೆ ಅವರು ಖಂ, ಆಂ ನೀಡುತ್ತಿಲ್ಲ. ಆದ್ದರಿಂದ ತಮಗೆ ಖಾಯಂಮಾತಿ ಅಥವಾ ಕನಿಷ್ಠ ವೇತನ ಒದಗಿಸಿಕೊಡಬೇಕೆಂದು ಕೋರಿರುತ್ತಾರೆ.<br><br>ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |
| 12 | ನಾಗರಾಜು ಎಸ್.<br>ಗುಲ್ಬರ್ಗಾ – 585105 | ಸಕಾಲ ವ್ಯಾಪ್ತಿಗೊಳಪಡುವ ಆಕಾರ್‌ಬಂದ್ ಮತ್ತು ಇನ್ನಿತರ ಸೇವೆಗಳಿಗಾಗಿ ಅರ್ಜಿಗಳನ್ನು ಜಿಲ್ಲೆಯ ಭೂ ದಾಖಲೆ ಮತ್ತು ಭೂ ಮಾಪನ ಇಲಾಖೆಯ ಭೂಮಿ ವಿಭಾಗದಲ್ಲಿ ಸಕಾಲ ಅಡಿ ತೆಗೆದುಕೊಳ್ಳುತ್ತಿಲ್ಲ ಹಾಗೂ ನಿಗದಿತ ಕಾಲಮಿತಿ ಮೀರಿ ಸೇವೆಗಳನ್ನು ನೀಡುತ್ತಿದ್ದಾರೆಂದು ದೂರಿರುತ್ತಾರೆ.<br><br>ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |

ದಿನಾಂಕ 08/01/14 ರಂದು ಚಂದನ ವಾಹಿನಿಯಲ್ಲಿ ಸಕಾಲದ ಬಗ್ಗೆ ಪ್ರಸಾರವಾದ ಫೋನ್–ಇನ್ ಕಾರ್ಯಕ್ರಮದ

ಚಂದನ ವಾಹಿನಿಯಲ್ಲಿ ದಿನಾಂಕ 08/01/14 ರಂದು ಬೆಳಗ್ಗೆ 8.00 ಗಂಟೆಯಿಂದ 9.00 ಗಂಟೆವರೆಗೆ ಸಕಾಲದ ಬಗ್ಗೆ ನೇರ ಫೋನ್–ಇನ್ ಕಾರ್ಯಕ್ರಮದಲ್ಲಿ ಕರೆ ಮಾಡಿದ ನಾಗರಿಕರ ದೂರು ವಿವರಗಳು ಕೆಳಗಿನಂತಿವೆ.

| **ಕ್ರಮ ಸಂಖ್ಯೆ** | **ಹೆಸರು ಮತ್ತು ವಿಳಾಸ ಶ್ರೀ/ಶ್ರೀಮತಿ** | **ದೂರು** |
|---|---|---|
| 1 | ಎಲ್ಲಪ್ಪ ನಾಗಪ್ಪ ಪೂಜಾರಿ<br>ಹಿರೇಬಾಗೇವಾಡಿ<br>ಹೋಬಳಿ,<br>ಬೆಳಗಾಂ ಜಿಲ್ಲೆ. | ಪಡಿತರ ಚೀಟಿ ಪಡೆಯಲು ಸುಮಾರು 5–6 ವರ್ಷದಿಂದ ತಹಸೀಲ್ದಾರ್, ಉಪ ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ಕಛೇರಿಗೆ ಓಡಾಡಿರುತ್ತೇನೆ. ಈಗ ಪಡಿತರ ಚೀಟಿ ನೀಡಿದ್ದು ಇದನ್ನು ಪಡೆಯುವ ಸಲುವಾಗಿ ಓಡಾಡಕ್ಕೆ ಸುಮಾರು ರೂ.5,000/– ಖರ್ಚು ಮಾಡಿದ್ದು ಇದನ್ನು ಪಾವತಿ ಮಾಡಿಸಿಕೊಡುವಂತೆ ಕೋರಿರುತ್ತಾರೆ. ಮತ್ತು ತಾನು 3 ವರ್ಷದ ಹಿಂದೆ ಜಿಲ್ಲಾ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಎಂ.ಎಲ್.ಸಿ. ಪಡೆದಿದ್ದು, ಇದರ ನಿವಾರಣೆಗೆ ಆಸ್ಪತ್ರೆಯಲ್ಲಿ ಔಷಧಗಳನ್ನು ಪಡೆಯುತ್ತಿದ್ದೆ. ಆದರೆ ಆಸ್ಪತ್ರೆಯವರು ದಾಸ್ತಾನು ಇಲ್ಲವೆಂದು ಬೇರೆ ಕಡೆ ಔಷಧಗಳನ್ನು ಪಡೆಯಲು ಸೂಚಿಸುತ್ತಿದ್ದು, ತನಗೆ ದುಡಿಯಲು ಆಗದಿರುವುದರಿಂದ ಔಷಧಗಳನ್ನು ತೆಗೆದುಕೊಳ್ಳಲು ಕಷ್ಟವಾಗುತ್ತಿದೆ ಎಂದು ತಿಳಿಸಿರುತ್ತಾರೆ.<br><br>ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |

| | | |
|---|---|---|
| 2 | ಮಂಜು ನಾಯಕ್<br>ಊರ್ಡಿಗೆರೆ ಹೋಬಳಿ<br>ತುಮಕೂರು :ತಾ: | ಸರ್ಕಾರವು ಪರಿಶಿಷ್ಠ ಜಾತಿ ಕೋಟಾದಡಿ ಊರ್ಡಿಗೆರೆಯ ಜನಪನಹಳ್ಳಿ ತಾಂಡದಲ್ಲಿ 4 ಎಕರೆ ಸಾಗುವಳಿ ಜಮೀನನ್ನು ನಮ್ಮ ತಂದೆ ರಾಮಾನಾಯಕ್‌ರವರಿಗೆ ನೀಡಿತ್ತು. 1976–77 ರಲ್ಲಿ ಸದರಿ ಜಮೀನನ್ನು 1ನೇ ಪಾರ್ಟಿಯವರು ನಮ್ಮ ತಂದೆಯವರಿಂದ ಜಮೀನನ್ನು ಮೋಸದಿಂದ ಖರೀದಿಸಿದರು. ನಾವು ಆಗ ಇನ್ನು ಮೈನರ್ ಆಗಿದ್ದೆವು. ನಂತರ 1ನೇ ಪಾರ್ಟಿ ಜಮೀನನ್ನು 2ನೇ ಪಾರ್ಟಿಗೆ ಮಾರಿದರು, ಇವರು ತಮ್ಮ ಹೆಸರಿಗೆ ಖಾತೆ ಮಾಡಿಕೊಂಡು 3ನೇ ಪಾರ್ಟಿಗೆ ಮಾರಿ, ನಂತರ ಇವರು 4ನೇ ಪಾರ್ಟಿಗೆ ಮಾರಿರುತ್ತಾರೆ. ನಾವು ಈ ಬಗ್ಗೆ ನಮ್ಮ ತಾಯಿ ಶ್ರೀಮತಿ ಕೋಮಲಮ್ಮ ಕೋಂ ಲೇಟ್. ರಾಮಾನಾಯಕ್, ಹೆಸರಿನಲ್ಲಿ 2010 ರಲ್ಲಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ (SCPTL Case No.2) ದಾಖಲು ಮಾಡಿದ್ದು, ಅವರು ವಿಚಾರಣೆಯನ್ನು ಪದೇಪದೇ ಮುಂದೂಡುತ್ತಾ ಇದ್ದು ಪ್ರಕರಣ ವಿಲೇವಾರಿ ಮಾಡಿರುವುದಿಲ್ಲವೆಂದು ಹಾಗೂ ನಮಗೆ ನ್ಯಾಯ ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ.<br><br>ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |
| 3 | ಶಾಂತಮ್ಮ (9008183286)<br>ಬಸವೇಶ್ವರ ಬಡಾವಣೆ,<br>ಬೆಂಗಳೂರು–58. | ಇವರು ಸುಮಾರು 17 ವರ್ಷಗಳ ಕಾಲ ಗಾರ್ಮೆಂಟ್ಸ್‌ಗಳಲ್ಲಿ ಕೆಲಸ ಮಾಡಿದ್ದು, ಪ್ರಸ್ತುತ ತನಗೆ ಬೆನ್ನು ನೋವಿನಿಂದ ಆಪರೇಷನ್ ಮಾಡಿದ ನಂತರ ಭುಜದ ಭಾಗ ತೆರೆದುಕೊಂಡು ಕೆಲಸ ಮಾಡಲು ಕಷ್ಟವಾಗಿದ್ದರಿಂದ ಕೆಲಸಕ್ಕೆ ಹೋಗುತ್ತಿಲ್ಲ. ತನಗೆ ಬರಬೇಕಾದ ಪಿಎಫ್ ಇತರೆ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಂಡಿರುತ್ತೇನೆ. ತಾನು ಇಎಸ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದು, ವೈದ್ಯರು ತನಗೆ ಪಿಂಚಣಿ ನೀಡುವ ಸಂಬಂಧ ಜಾಲಹಳ್ಳಿಯಲ್ಲಿರುವ ಇಎಸ್‌ಐ ಆಸ್ಪತ್ರೆಗೆ ಭೇಟಿ ನೀಡಲು ತಿಳಿಸಿರುತ್ತಾರೆ. 2011 ರಲ್ಲಿ ನಾನು ಸದರಿ ಆಸ್ಪತ್ರೆಗೆ ಭೇಟಿ ನೀಡಿ ಪಿಂಚಣಿ ಬಗ್ಗೆ ಕೇಳಲಾಗಿ ಅವರು ನೀವು ನಿಗದಿತ ಸಮಯ ಮುಗಿದ ನಂತರ ಬಂದಿರುವುದರಿಂದ ಪಿಂಚಣಿ ನೀಡಲು ಬರುವುದಿಲ್ಲ ಹಾಗೂ ನಿಮ್ಮ ಅರ್ಜಿಯನ್ನು ಸ್ವೀಕಾರ ಮಾಡುವುದಿಲ್ಲವೆಂದು ಹೇಳಿ ಕಳುಹಿಸಿರುತ್ತಾರೆ. ಕಾರಣ ನನಗೆ ಪಿಂಚಣಿ ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ. (ಮಾನ್ಯ ಸಚಿವರು ಈ ಸಮಸ್ಯೆಯನ್ನು ಬಗೆಹರಿಸಲಾಗುವುದೆಂದು ತಿಳಿಸಿದರು.)<br><br>ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |
| 4 | ಜಗದೀಶ್ ಈಳಗೇರ್,<br>ಸವಣೂರು ತಾಲ್ಲೂಕು,<br>ಹಾವೇರಿ ಜಿಲ್ಲೆ. | ಇವರ ತಂದೆ ಶ್ರೀ ಬಸವಂತಪ್ಪ ನಾಗಪ್ಪ ಈಳಗೇರ್ ರವರಿಗೆ ಸವಣೂರು ತಾಲ್ಲೂಕಿನ ಕಡಕೊಳದಲ್ಲಿ 5 ಎಕರೆ ಹೊಲ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಆದರೆ, 1975 ರಲ್ಲಿ ಊರಿನ ಪ್ರಮುಖರು ಮತ್ತು ಗ್ರಾಮ ಪಂಚಾಯ್ತಿಯವರು ಸೇರಿಕೊಂಡು ಅವಿದ್ಯಾವಂತರಾದ ನಮ್ಮ ತಂದೆಯವರಿಂದ ಸದರಿ ಹೊಲವನ್ನು ಪಡೆದುಕೊಂಡು ಊರಿನ ಇತರ ಜನರಿಗೆ ಮನೆ ಕಟ್ಟಿಕೊಳ್ಳಲು ಕೊಟ್ಟಿರುತ್ತಾರೆ. ನಮ್ಮ 10 ಗುಂಟೆ ಜಾಗದಲ್ಲಿ ಮನೆ ಕಟ್ಟಿಕೊಳ್ಳಲು ಅನುಮತಿ ಕೇಳಿದರೆ ಪಂಚಾಯ್ತಿಯವರು 5 ಎಕರೆಯಲ್ಲಿ ಉಳಿದ ಜಾಗವನ್ನು ನಮ್ಮದು ಅಲ್ಲ ಎಂದು ಬರೆದುಕೊಡಿ ಇಲ್ಲವಾದರೆ ಅನುಮತಿ ಕೊಡುವುದಿಲ್ಲ ಎಂದು ಹೆದರಿಸುತ್ತಿದ್ದಾರೆ. ಆದುದರಿಂದ ನಮಗೆ ಬರಬೇಕಾದ ಜಮೀನನ್ನು ಬಿಡಿಸಿಕೊಡಬೇಕೆಂದು ಕೋರಿರುತ್ತಾರೆ.<br><br>ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |
| 5 | ಜಯಪ್ರಕಾಶ್ | ಇವರು ಸಹ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದು, 10 ವರ್ಷದ ಕಾಲಬದ್ಧ ವೇತನಕ್ಕಾಗಿ (ಟೈಂಬಾಂಡ್) ಸಕಾಲ ಅಡಿಯಲ್ಲಿ ಅರ್ಜಿ ಸಲ್ಲಿಸುವ ಬಗೆಯನ್ನು ಕೇಳಿರುತ್ತಾರೆ. (ಇವರಿಗೆ ಸಕಾಲ ಅಡಿಯಲ್ಲಿ ಅರ್ಜಿ ಸಲ್ಲಿಸುವ ಬಗ್ಗೆ ಮತ್ತು ಪಡೆಯುವ ಬಗ್ಗೆ ವಿವರವಾಗಿ ತಿಳಿಸಿದೆ)<br><br>ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |
| 6 | ಸಂಗಪ್ಪ<br>ಊಟಗಳ್ಳಿ, ಮೈಸೂರು–18 | ಬಾದಾಮಿ ತಾಲ್ಲೂಕಿನ ಗೋವನಕೊಪ್ಪ ಗ್ರಾಮದಲ್ಲಿ ತಮ್ಮ ತಂದೆ ಬಶೆಟ್ಟೆಪ್ಪರವರ ಹೆಸರಿನಲ್ಲಿನ ನಿವೇಶನದ ವಿಚಾರದಲ್ಲಿ 1991ರಲ್ಲಿ ನ್ಯಾಯಾಲಯ ತೀರ್ಪ ತಮ್ಮ ಪರವಾಗಿ ಬಂದಿರುತ್ತದೆ. 2011 ರಲ್ಲಿ ತಮ್ಮ ತಂದೆ ಮೃತರಾಗಿದ್ದು, ಈ ನಿವೇಶನದ |

| | | |
|---|---|---|
| | | ಖಾತಾ ವರ್ಗಾವಣೆಗೆ ಬಾದಾಮಿ ಗ್ರಾಮ ಪಂಚಾಯ್ತಿ ಕಛೇರಿಗೆ ಹೋದಾಗ 10/12 ವರ್ಷಗಳಿಂದ ಕಂದಾಯ ಕಟ್ಟಿಲ್ಲವೆಂದು ತಿಳಿದುಬಂದು, ಕಂದಾಯವನ್ನು ಪಾವತಿಸಿರುತ್ತೇವೆ. ಆದರೆ ಖಾತಾ ವರ್ಗಾವಣೆ ಮಾಡಿಕೊಡಲು ಕಛೇರಿಯಲ್ಲಿ ಯಾವುದೇ ದಾಖಲೆಗಳಿಲ್ಲವೆಂದು, ನಮ್ಮಲ್ಲಿ ದಾಖಲಾತಿಗಳಿದ್ದರೆ ನೀಡಲು ತಿಳಿಸಿರುತ್ತಾರೆ. ಆದರೆ 1997-98 ರಲ್ಲಿ ತಮ್ಮ ಮನೆ ಕಳ್ಳತನವಾದಾಗ ನಿವೇಶನಕ್ಕೆ ಸಂಬಂಧಪಟ್ಟ ದಾಖಲೆಗಳು ಕಳ್ಳತನವಾಗಿರುತ್ತವೆ ಎಂದು ನಮ್ಮ ತಂದೆಯವರು ತಿಳಿಸಿರುತ್ತಾರೆ. ಆದರೆ, ದಾಖಲೆಗಳಿಲ್ಲದ ತಂದೆಯ |
| | | ಹೆಸರಿನಲ್ಲಿದ್ದ 1 ಅಂಗಡಿ ಮತ್ತು ಮನೆಯನ್ನು ನಮ್ಮ ಸಹೋದರರ ಹೆಸರಿಗೆ ಜಂಟಿ ಖಾತೆ ಮಾಡಿಕೊಟ್ಟಿರುತ್ತಾರೆ. ಆದಕಾರಣ ಸದರಿ ನಿವೇಶನದ ಖಾತೆ ವರ್ಗಾವಣೆ ಮಾಡಿಸಿಕೊಡಬೇಕೆಂದು ಕೋರಿರುತ್ತಾರೆ. (ಮಾನ್ಯ ಸಚಿವರು ಉತ್ತರಿಸುತ್ತಾ ಮಾಹಿತಿ ಹಕ್ಕು ಕಾಯ್ದೆಯಡಿ ದಾಖಲಾತಿಯನ್ನು ಪಡೆಯಿರಿ ಎಂದು ಸಲಹೆ ನೀಡಿರುತ್ತಾರೆ) |
| 7 | ತಿಮ್ಮರಾಜು ವಿ<br>ಮಧುಗಿರಿ ತಾಲ್ಲೂಕು,<br>ತುಮಕೂರು ಜಿಲ್ಲೆ. | ನಮ್ಮ ಮಗನಿಗೆ ಹುಟ್ಟಿದಾಗಿನಿಂದಲೇ ಮಾನಸಿಕ ಅಸ್ಥಿರತೆ ಇದ್ದು, ವೈದ್ಯರು ಪ್ರಶಾಂತ ಸ್ಥಳದಲ್ಲಿ ಊರಿನಿಂದ ದೂರ ವಾಸಿಸುವಂತೆ ಸಲಹೆ ನೀಡಿರುತ್ತಾರೆ. ಅದರಂತೆ ನನ್ನ ಪತ್ನಿ ಶ್ರೀಮತಿ ಗೀತಾರವರ ಹೆಸರಿನಲ್ಲಿ ಉಣಸವಾಡಿಯಲ್ಲಿ ಸರ್ವೇ ನಂ.28 ರಲ್ಲಿ 6.10 ಎಕರೆ ಜಮೀನನ್ನು ಖರೀದಿಸಿ ಕ್ರಮಯಪತ್ರ ಮಾಡಿಸಿಕೊಳ್ಳಲಾಯ್ತು. ಆದರೆ ಪಹಣಿಯಲ್ಲಿ ಪಿ-1 ಮತ್ತು 2 ಎಂದು ನಮೂದಾಗಿತ್ತು. ಇದನ್ನು ತೆಗೆದು ಪಹಣಿ ಪತ್ರ ಮಾಡಿಸಿಕೊಡಿ ಎಂದು ಉಪವಿಭಾಗಾಧಿಕಾರಿಗಳಿಗೆ 2005-06ರಲ್ಲಿ ಅರ್ಜಿ ನೀಡಿದ್ದು (ಕಡತ ಸಂಖ್ಯೆ:ಐಓಆಅಖ 29/05-06) ಇದುವರೆಗೂ ಪ್ರಕರಣ ವಿಲೇವಾರಿಯಾಗಿಲ್ಲ. ಈ ನಡುವೆ ನಮ್ಮ ಜಮೀನಿಗೆ ಹೋಗುವ ದಾರಿಯನ್ನು ಅಕ್ಕಪಕ್ಕದವರು ಅತಿಕ್ರಮಣ ಮಾಡಿ ಬೇಲಿಗಳನ್ನು ಹಾಕಿಕೊಂಡು, ಜಗಳಗಳಾಗಿ ನನ್ನ ಮಗನ ಸ್ಥಿರತೆ ಹೆಚ್ಚು ಹಾಳಾಗಿ ಆರೋಗ್ಯ ತೀರಾ ಹದಗೆಟ್ಟಿರುತ್ತದೆ. ರಸ್ತೆ ತೆರವು ಮಾಡಿಸಿಕೊಡಬೇಕೆಂದು ಮಧುಗಿರಿ ತಹಸೀಲ್ದಾರ್ ಕಛೇರಿಗೆ ಅರ್ಜಿ ಸಲ್ಲಿಸಿದ್ದರೂ (ಸಂಖ್ಯೆ: ಓಆಖ 219/11-12) ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ದೂರಿರುತ್ತಾರೆ.<br><br>ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |
| 8 | ಅಣ್ಣಾರಾವ್ ಎಂ ಪಾಟೀಲ<br>ಅಫ್ಜಲ್‌ಪುರ ತಾ:<br>ಗುಲ್ಬರ್ಗಾ ಜಿಲ್ಲೆ. | ಕೃಷಿ ಇಲಾಖೆ ವತಿಯಿಂದ ರೈತರು ವ್ಯವಸಾಯ ಮಾಡಲು ಅನುಕೂಲವಾಗುವಂತೆ ನೇಗಿಲು, ಇಂಜಿನ್, ಟ್ರಾಕ್ಟರ್ ಮುಂತಾದ ಸಲಕರಣೆಗಳನ್ನು ಕೊಂಡಾಗ ಅದರ ಬೆಲೆಯ ಅರ್ಧದಷ್ಟು (50%) ಮಾತ್ರ ಪಾವತಿಸಿ ಉಳಿದ ಮೊತ್ತವನ್ನು (50%) ಸರ್ಕಾರವೇ ಸಹಾಯಧನದ ರೂಪದಲ್ಲಿ ಪಾವತಿಸುವ ಪದ್ಧತಿ ಇತ್ತು. ಆದರೆ ಜನವರಿ, 2014 ರಿಂದ ಈ ಪದ್ಧತಿಯನ್ನು ತೆಗೆದುಹಾಕಿ ಪೂರ್ಣ ಮೊತ್ತವನ್ನು ರೈತರೇ ಪಾವತಿಸಿ ಸಲಕರಣೆಗಳನ್ನು ಕೊಂಡುಕೊಳ್ಳಬೇಕು ನಂತರ ಸರ್ಕಾರ ಇದನ್ನು ಪರಿಶೀಲಿಸಿ ಅವರ ಖಾತೆಗೆ ಹಣ ಜಮಾ ಮಾಡಲಾಗುವುದು ಎಂದು ಕೃಷಿ ಇಲಾಖೆಯಿಂದ ಆದೇಶ ಮಾಡಲಾಗಿದೆ. ಆದ್ದರಿಂದ ಮೊದಲು ಅನುಸರಿಸುತ್ತಿದ್ದ ಪದ್ಧತಿಯನ್ನೇ ಮುಂದುವರೆಸಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ. (ಮಾನ್ಯ ಸಚಿವರು ಉತ್ತರಿಸುತ್ತಾ ಬ್ಯಾಂಕ್‌ಗಳಲ್ಲಿ ಸಾಲ ಸೌಲಭ್ಯದ ವ್ಯವಸ್ಥೆಯನ್ನು ಮಾಡಲು ಪರಿಶೀಲಿಸಲಾಗುವುದೆಂದು ತಿಳಿಸಿರುತ್ತಾರೆ) |
| 9 | ಹುಚ್ಚಪ್ಪ ಮ್ಯಾಗಡಿ | ಇವರು ತಮ್ಮ ಜಮೀನಿನ ಸರ್ವೆ ಮಾಡಿಸಲು ಅರ್ಜಿ ನೀಡಿದ್ದು, ಇದುವರೆಗೂ ಸರ್ವೆ ಮಾಡಿಸಿರುವುದಿಲ್ಲವೆಂದು ದೂರಿರುತ್ತಾರೆ.<br>ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |
| 10 | ವಿಶ್ವನಾಥ್<br>ಭದ್ರಾವತಿ,<br>ಶಿವಮೊಗ್ಗ ಜಿಲ್ಲೆ. | ಇವರು ತಮ್ಮ ತಾತ ಕೊತ್ವಾಲ್ ಮರಯೋಗಿ ರಾವ್‌ರವರು ನೆಲಮಂಗಲದ ಬಸ್‌ನಿಲ್ದಾಣದ ಬಳಿ ಸ್ಮಶಾನಕ್ಕಾಗಿ ಜಾಗವನ್ನು 1954 ರಲ್ಲಿ ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದರು. ಆದರೆ ಈಗ ಸದರಿ ಜಾಗವನ್ನು ಉದ್ದೇಶಿತ ಕಾರ್ಯಕ್ಕೆ ಬಿಟ್ಟು ಬೇರೆ ಕೆಲಸಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಪ್ರಸ್ತುತ ನಾವು ಬಡತನದಲ್ಲಿದ್ದು, ಸದರಿ ಜಾಗವನ್ನು ನಮಗೇ ಬಿಟ್ಟುಕೊಡಬೇಕೆಂದು ಅಥವಾ ಸದರಿ ಜಾಗಕ್ಕೆ ಸೂಕ್ತ ಪರಿಹಾರವನ್ನು ಒದಗಿಸಿಕೊಡಬೇಕೆಂದು ತಹಸೀಲ್ದಾರ್‌ರವರಿಗೆ ಕೋರಿದ್ದು, ಸೂಕ್ತ ನ್ಯಾಯ ಒದಗಿಸಿಕೊಡಬೇಕೆಂದು ಕೋರಿರುತ್ತಾರೆ. |

| | | |
|---|---|---|
| | | ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |
| 11 | ಸುಮಂಗಳಾ ಜಿ<br>ಕೆ.ಜಿ. ನಗರ,<br>ಬೆಂಗಳೂರು-90 | ಇವರು ಆಧಾರ್ ಕಾರ್ಡ್‌ಗಾಗಿ ನೋಂದಣಿ ಮಾಡಿಸಿದ್ದು, ಸುಮಾರು 6 ತಿಂಗಳಾದರೂ ಆಧಾರ್ ಕಾರ್ಡ್ ದೊರೆತಿಲ್ಲವೆಂದು ತಿಳಿಸಿರುತ್ತಾರೆ.<br><br>ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |
| 12 | ಹರೀಶ್<br>ಬಿನ್ ವೀರಣ್ಣ<br>ಬೆಂಗಳೂರು-53. | ಇವರ ತಂದೆಯವರಾದ ಎನ್.ವೀರಣ್ಣ ಇವರು 2000 ರಲ್ಲಿ ಜೆ.ಸಿ.ರಸ್ತೆಯ ಮೈಷುಗರ್ ಕಟ್ಟಡದಲ್ಲಿ ಚಿಕ್ಕ ಪೆಟ್ಟಿಗೆ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದರು. ಆದರೆ, ಮೈಷುಗರ್ ಕಂಪೆನಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರು ಈ ಅಂಗಡಿಗೆ ತಿಂಗಳ ಬಾಡಿಗೆ ರೂ.7500/- ನಿಗದಿಪಡಿಸಿ, 6 ತಿಂಗಳಿಗೊಮ್ಮೆ 20% ಹೆಚ್ಚಿನ ಬಾಡಿಗೆ ಪಾವತಿಸಬೇಕೆಂದು ಮಾಡಿದರು. ನಮ್ಮ ತಂದೆಯವರು ಅಂಗವಿಕಲರಾಗಿದ್ದು, ದಯೆ ತೋರಬೇಕೆಂದು ಎಂ.ಡಿ.ರವರಲ್ಲಿ ಕೋರಿಕೊಂಡರು ಯಾವುದೇ ಪ್ರಯೋಜನವಾಗಲಿಲ್ಲ ಹಾಗೂ ನಾವು ಕಂಪೆನಿ ಸೂಚಿಸಿದ ಬಾಡಿಗೆಯನ್ನು ಕೊಡಲು ಒಪ್ಪಲಿಲ್ಲ. ಈ ಬಗ್ಗೆ ಕ್ರಿಮಿನಲ್ ನ್ಯಾಯಾಲಯದಲ್ಲಿ ದಾವೆ ಹೂಡಿದೆವು. ನಂತರ 2001 ರಲ್ಲಿ ನಮ್ಮ ಅಂಗಡಿಯನ್ನು ಕೆಡವಿ ಹಾಕಿದರು. ಇದರಿಂದ ನಮ್ಮ ಜೀವನೋಪಾಯಕ್ಕೆ ತುಂಬಾ ಕಷ್ಟವಾಯಿತು ಎಂದು ತಿಳಿಸಿರುತ್ತಾರೆ.<br><br>ಸಂಬಂಧಪಟ್ಟ ಕಛೇರಿಗೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪತ್ರ ರವಾನಿಸಲಾಗಿದೆ |

# ಅಧ್ಯಾಯ –4

## ಘಟನಾವಳಿಗಳು ಹಾಗೂ ಪತ್ರಿಕಾ ವರದಿ

### ಯಶಸ್ಸಿನಿಂದ ಕಲಿಕೆ ಕಾರ್ಯಾಗಾರ, ದಿನಾಂಕ 21ರಿಂದ 23ರವರೆಗೆ:

- ಉದ್ಘಾಟನಾ ಕಾರ್ಯಕ್ರಮದೊಂದಿಗೆ ಮೊದಲ ದಿನದ ಸಮ್ಮೇಳನಕ್ಕೆ ಚಾಲನೆ ನೀಡಿ ನಾಡಗೀತೆಯೊಂದಿಗೆ ಪ್ರಾರಂಭಿಸಲಾಯಿತು. ತದನಂತರ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಮಾನ್ಯ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಮತ್ತು ಪಿಂಚಣಿಗಳ ಸಚಿವರಾದ ಶ್ರೀ ವಿ. ನಾರಾಯಣಸಾಮಿಯವರನ್ನು ಸಾಂಪ್ರದಾಯಿಕ ಉಡುಗೊರೆಗಳೊಂದಿಗೆ ಸನ್ಮಾನಿಸಿ ಸ್ವಾಗತಿಸಿದರು. ಅದೇ ರೀತಿ ಕೇಂದ್ರ ಸರ್ಕಾರದ ಸಿಬ್ಬಂದಿ, ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ದೂರುಗಳ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಸಂಜಯ ಕೊಠಾರಿ, ಕೇಂದ್ರದ ಅಪರ ಕಾರ್ಯದರ್ಶಿಗಳಾದ ಶ್ರೀ ಅರುಣ ಝಾ ರವರನ್ನು ಸನ್ಮಾನಿಸಲಾಯಿತು ಹಾಗೂ ಸಮ್ಮೇಳನದಲ್ಲಿ ಉಪಸ್ಥಿತರಿದ್ದ ವಿವಿಧ ರಾಜ್ಯಗಳ ಅಧಿಕಾರಿಗಳು ಮತ್ತು ಪ್ರತಿನಿಧಿಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಯ ಪ್ರಧಾನ ಕಾರ್ಯದರ್ಶಿಯವರು ಸ್ವಾಗತಿಸಿದರು. ಸನ್ಮಾನ್ಯ ಮುಖ್ಯಮಂತ್ರಿಯವರು ದೀಪ ಬೆಳಗಿಸುವುದರ ಮೂಲಕ ಸಮ್ಮೇಳನವನ್ನು ವಿದ್ಯುಕ್ತವಾಗಿ ಉದ್ಘಾಟಿಸಿದರು.




- ಮಾನ್ಯ ಕಾರ್ಯದರ್ಶಿಯವರು ತಮ್ಮ ಪ್ರಸ್ತಾವಿಕ ನುಡಿಗಳನ್ನಾಡುತ್ತಾ ಕಳೆದ 6 ವರ್ಷಗಳಲ್ಲಿ ಇದು 19ನೇ ಸಮ್ಮೇಳನವಾಗಿದ್ದು, ಇದರಲ್ಲಿ ಎರಡು ಹೊಸ ಕ್ರಮಗಳನ್ನು ರೂಢಿಸಿಕೊಳ್ಳಲಾಗಿದೆ. ಮೊದಲನೆಯದಾಗಿ ದೇಶದ ಎಲ್ಲಾ ರಾಜ್ಯಗಳು ಸೇರಿದಂತೆ ವರ್ಷದಲ್ಲಿ ಎರಡು ಬಾರಿ ಇಂತಹ ಸಮ್ಮೇಳನವನ್ನು ಆಯೋಜಿಸುವುದು, ಅದರಂತೆ ಉತ್ತರ ಮತ್ತು ವಾಯುವ್ಯ ವಲಯ ರಾಜ್ಯಗಳನ್ನೊಳಗೊಂಡ ಮೊದಲನೇ ಸಮ್ಮೇಳನವನ್ನು 17 ಮತ್ತು 18ನೇ ಡಿಸೆಂಬರ್, 2013ರಂದು ಗುಡಗಾಂವ್‌ನಲ್ಲಿ ನಡೆಸಲಾಗಿದ್ದು, ಪ್ರಸ್ತುತ ಸಮ್ಮೇಳನವು ದಕ್ಷಿಣ ಹಾಗೂ ಕೇಂದ್ರ ವಲಯಗಳ ರಾಜ್ಯಗಳನ್ನೊಳಗೊಂಡ 2ನೇ ಸಮ್ಮೇಳನವಾಗಿರುವುದಾಗಿ ತಿಳಿಸಿದರು. ಎರಡನೆಯದಾಗಿ ಈ ಸಮ್ಮೇಳನದ ಮೂಲ ಉದ್ದೇಶವಾದ ವಿವಿಧ ರಾಜ್ಯಗಳ ಅಧಿಕಾರಿ ಮಿತ್ರರುಗಳು ತಮ್ಮ ಆಡಳಿತದಲ್ಲಿ ಅನ್ವೇಷಿಸಿರುವ ಹೊಸ ಪದ್ಧತಿಗಳನ್ನು ಪರಸ್ಪರ ಹಂಚಿಕೊಳ್ಳುವುದಾಗಿರುತ್ತದೆ. ಇದರಿಂದ ಉಳಿದ ರಾಜ್ಯಗಳು ಅಂತಹ ಯಶಸ್ಸಿನ ಅನ್ವೇಷಣೆಗಳನ್ನು ಅಳವಡಿಸಿಕೊಳ್ಳುವ, ಅನುಸರಿಸುವ ಹಾಗೂ ಇನ್ನೂ ಹೆಚ್ಚಿನ ಅನ್ವೇಷಣೆಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಕರ್ನಾಟಕದಲ್ಲಿ ಈಗಾಗಲೇ ಜಾರಿಯಲ್ಲಿರುವ 'ಸಕಾಲ' ಯೋಜನೆಯಡಿ ವಿವಿಧ ಇಲಾಖೆಗಳ ಸುಮಾರು 447 ಸೇವೆಗಳನ್ನು ನಾಗರಿಕರಿಗೆ ಸಕಾಲದಲ್ಲಿ ಒದಗಿಸುತ್ತಿರುವ ಪ್ರಮುಖ ಯೋಜನೆಯಾಗಿದ್ದು, ಪ್ರಸಕ್ತ ಸಾಲಿನ ಇ-ಆಡಳಿತ ಪ್ರಶಸ್ತಿಯನ್ನು ಪಡೆದಿದೆ ಮತ್ತು ಪ್ರಧಾನ ಮಂತ್ರಿಗಳ ಪ್ರಶಸ್ತಿಯ ಅಂತಿಮ ಆಯ್ಕೆ ಪಟ್ಟಿಯಲ್ಲಿರುವುದಾಗಿ ತಿಳಿಸಿದರು. ಸಕಾಲ ಯೋಜನೆಯು ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಯಶಸ್ವಿಯಾಗಿ ಜಾರಿಯಲ್ಲಿರುವುದನ್ನು ಗಮನಿಸಿರುವುದಾಗಿ ತಿಳಿಸಿದರು. ಸಕಾಲ ಯೋಜನೆಯನ್ನು ಯಶಸ್ವಿಗೊಳಿಸುವಲ್ಲಿ ಅಧಿಕಾರಿ/ನೌಕರರಿಗೆ ಪ್ರೋತ್ಸಾಹ ಮತ್ತು ಸಲಹೆಗಳನ್ನು ನೀಡಿದ್ದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮುಖ್ಯಕಾರ್ಯದರ್ಶಿಯವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

- ಮುಂದುವರೆದು, ಇಂತಹ ಯಶಸ್ಸಿನ ಯೋಜನೆಗಳ ವಿವರಗಳನ್ನೊಳಗೊಂಡ 3 1/2 ಹಾಗೂ 11 ನಿಮಿಷಗಳ ಕಿರುಚಿತ್ರಗಳನ್ನು ಸಿದ್ಧಪಡಿಸಿ ಬಿಡುಗಡೆಗೊಳಿಸಲು ತೀರ್ಮಾನಿಸಿದ್ದು, ಇದರಿಂದ ಯುವ ಅಧಿಕಾರಿಗಳಿಂದ ಸ್ಫೂರ್ತಿ ತುಂಬುವ, ಕ್ಷೇತ್ರ ಇಲಾಖೆಗಳ ಅಧಿಕಾರಿ/ನೌಕರರುಗಳಿಗೆ ತರಬೇತಿ ನೀಡುವ ಹಾಗೂ ಸರ್ಕಾರೇತರ ಪ್ರತಿನಿಧಿಗಳಿಗೆ ವೀಕ್ಷಣೆಗೆ ಅನುಕೂಲ ಮಾಡಿಕೊಡುವ ಮೂರು ಪ್ರಮುಖ ಉದ್ದೇಶಗಳನ್ನು ಒಳಗೊಂಡಿರುತ್ತದೆ. ಈ ರೀತಿಯ ಹೊಸ ಅನ್ವೇಷಣಾ ಯೋಜನೆಗಳ ಲಾಭವನ್ನು ಸಾರ್ವಜನಿಕರಿಗೆ ತಲುಪಿಸುವಲ್ಲಿ ಸರ್ಕಾರದ ಅಧಿಕಾರಿಗಳು ವಿಫಲರಾಗದೆ ಹೆಚ್ಚು ಆಸಕ್ತಿ ಮತ್ತು ಶ್ರಮವಹಿಸಿ ಯೋಜನೆಗಳನ್ನು ಯಶಸ್ವಿಗೊಳಿಸಬೇಕಾಗಿದೆ ಎಂದು ಸಲಹೆ ನೀಡಿದರು. ಈ ಎಲ್ಲ ಯೋಜನೆಗಳು ಜನಸಾಮಾನ್ಯರಿಗೆ ತಲುಪಿಸಲು ಮಾನ್ಯ ಮುಖ್ಯಕಾರ್ಯದರ್ಶಿಯವರ

ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ಸಭೆಯಲ್ಲಿ ಎಲ್ಲ ಜಿಲ್ಲಾಧಿಕಾರಿಗಳು, ಕ್ಷೇತ್ರದ ಅಧಿಕಾರಿಗಳು ಭಾಗಿಯಾಗಿದ್ದು, ಸಭೆಯಲ್ಲಿ ಸರ್ಕಾರದ ಸೇವೆಗಳನ್ನು ನಾಗರಿಕರಿಗೆ ಒದಗಿಸುವ ಬಗ್ಗೆ ವಿವರಿಸಲಾಗಿರುವುದಾಗಿ ತಿಳಿಸಿದರು.

- ❖ ಸಾರ್ವಜನಿಕರು ಸರ್ಕಾರದ ಸೇವೆಗಳನ್ನು ಪಡೆದುಕೊಳ್ಳಲು ಪ್ರಮಾಣ ಪತ್ರ (ಅಫಿಡವಿಟ್) ಹಾಗೂ ಮೇಲಧಿಕಾರಿಗಳ ದೃಢೀಕರಣ ಪತ್ರಗಳನ್ನು ಒದಗಿಸಬೇಕಾದ ಅನಿವಾರ್ಯತೆಯಿದ್ದು, ಈ ವ್ಯವಸ್ಥೆಯಿಂದ ಸಾರ್ವಜನಿಕರಿಗೆ ಹಣ ಹಾಗೂ ಸಮಯದ ವ್ಯವವಾಗುತ್ತಿರುವುದಾಗಿ ತಿಳಿಸಿದರು. 1979ರಲ್ಲಿ ತಿದ್ದುಪಡಿಗೊಂಡಿರುವ ಕಾನೂನಿನನ್ವಯ ಭಾರತೀಯ ದಂಡ ಸಂಹಿತೆ ಪ್ರಕಾರ ಯಾರಾದರೂ ಸರ್ಕಾರಿ ಅಧಿಕಾರಿ/ನೌಕರರನ್ನು ತಪ್ಪು ದಾರಿಗೆಳೆದರೆ ಅವರು 6 ತಿಂಗಳ ಶಿಕ್ಷೆಗೆ ಒಳಗಾಗಬೇಕಾಗುವ ನಿಯಮವಿರುವುದರಿಂದ ಪ್ರಮಾಣ ಪತ್ರ / ಪತ್ರಾಂಕಿತ ಅಧಿಕಾರಿಗಳ ದೃಢೀಕರಣಗಳ ಬದಲು ಸ್ವಯಂ ದೃಢೀಕೃತ ಪ್ರಮಾಣ ಪತ್ರ ಒದಗಿಸಲು ಅವಕಾಶ ನೀಡುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಸಾರ್ವಜನಿಕರು ಸಲ್ಲಿಸುವ ಅರ್ಜಿಯು ಅಪೂರ್ಣವಾಗಿದ್ದರೆ ಅಂತಹವರಿಗೆ ದೂರವಾಣಿ ಮೂಲಕ ಸಂಪರ್ಕಿಸಿ, ಅರ್ಜಿಯನ್ನು ಪೂರ್ಣಗೊಳಿಸಿ ನಾಗರೀಕರಿಗೆ ಸೇವೆ ನೀಡಬಹುದೆಂದು ಹೇಳಿದರು. ಕೊನೆಯದಾಗಿ "we do not need fancy highbrow tradition or money to really learn; you just need people with desire to better themselves" ಎಂಬ ಅರ್ಥಪೂರ್ಣ ಉದ್ಧರಣೆಯನ್ನು ಉಲ್ಲೇಖಿಸುತ್ತಾ ಆಡಳಿತದಲ್ಲಿ ಸುಧಾರಣೆಯಲ್ಲಿ ಪ್ರತಿಯೊಬ್ಬರು ತಮ್ಮ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದಲ್ಲಿ ಉತ್ತಮ ರಾಷ್ಟ್ರ ನಿರ್ಮಾಣ ಸಾಧ್ಯವೆಂಬ ಆಶಯದೊಂದಿಗೆ ಕಾರ್ಯದರ್ಶಿಯವರು ತಮ್ಮ ಮಾತು ಮುಗಿಸಿದರು.

**❖ ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ರವರಿಂದ "ಸಕಾಲ ಸೇವೆಗಳು ಮೊಬೈಲ್‌ನಲ್ಲಿ" ವ್ಯವಸ್ಥೆಯ ಉದ್ಘಾಟನೆ ದೃಶ್ಯ:**



- ❖ ಮುಂದುವರೆದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ ಸುಧಾರಣೆ)ಯ ಪ್ರಧಾನ ಕಾರ್ಯದರ್ಶಿಯವರ ಕೋರಿಕೆಯಂತೆ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಮತ್ತು ಪಿಂಚಣಿಗಳ ಮಾನ್ಯ ಕೇಂದ್ರ ಸಚಿವರಾದ ಶ್ರೀ ವಿ. ನಾರಾಯಣಸಾಮಿಯವರು ಬೆಸ್ಟ್ ಪ್ರ್ಯಾಕ್ಟೀಸ್ ಇನ್ ಕರ್ನಾಟಕ ಒಳಗೊಂಡ "ಸಿಟಿಜನ್ ಸೆಂಟ್ರಿಕ್ ಇನ್ನೋವೇಷನ್" ಎಂಬ ಪುಸ್ತಕ ಬಿಡುಗಡೆಗೊಳಿಸಿ ಸಮ್ಮೇಳನವನ್ನು ಉದ್ಧೇಶಿಸಿ ಮಾತನಾಡಿದರು.

- ❖ ಮಾನ್ಯ ಕೇಂದ್ರ ಸಚಿವರು ಪ್ರಾದೇಶಿಕ ಸಮ್ಮೇಳನವನ್ನು ಹಮ್ಮಿಕೊಂಡಿದ್ದಕ್ಕೆ ರಾಜ್ಯದ ಮಾನ್ಯ ಮುಖ್ಯಮಂತ್ರಿಯವರಿಗೆ ಹಾಗೂ ಮುಖ್ಯಕಾರ್ಯದರ್ಶಿಗಳಿಗೆ ಧನ್ಯವಾದಗಳನ್ನು ತಿಳಿಸಿದರು. ಇದು ಪ್ರಮುಖ ಸಮ್ಮೇಳನವಾಗಿದ್ದು ದೇಶಾದ್ಯಂತ ಇದೊಂದು ಉತ್ತಮ ಬೆಳವಣಿಗೆಯಾಗಿದ್ದು, ಈ ಸಮಯದಲ್ಲಿ ಇದು ನಮ್ಮ ಅವಶ್ಯಕ ಎಂದರು. ಇತ್ತೀಚಿನ ದಿನಗಳಲ್ಲಿ ಜನರ ಬಯಕೆಗಳು ಗಗನಕ್ಕೇರುತ್ತಿವೆ. ಆಡಳಿತವು ಜನರ ಬಯಕೆ, ಬೇಡಿಕೆ, ಹಕ್ಕುಗಳನ್ನು ನೀಡುವಿಕೆಗಳಲ್ಲಿ ಅವರ ಮನವಲಿಸಿಕೊಳ್ಳಬೇಕೆಂದು ಕೋರಿದರು. ಸಕಾಲದಲ್ಲಿ ಆಡಳಿತದಿಂದ ಜನರಿಗೆ ಬೇಕಾಗುವ ಸೇವೆಗಳು ಮತ್ತು ಸರಕುಗಳು ಸಿಗದೇ ಇರುವುದರಿಂದ ಜನರು ಆತಂಕಕ್ಕೊಳಗಾಗಿ ಆಡಳಿತದ ಬಗ್ಗೆ ಬೇರೆಯದೆ ಅಭಿಪ್ರಾಯವನ್ನು ತಾಳುತ್ತಿದ್ದಾರೆ. ಅದಕ್ಕಾಗಿ ಜಿಲ್ಲಾಧಿಕಾರಿಗಳು, ಕಛೇರಿಗಳಲ್ಲಿ ಕೂಡದೇ ಕ್ಷೇತ್ರಗಳಿಗೆ ಸಂದರ್ಶನ ನೀಡಿ ಜನರ ಬೇಡಿಕೆಗಳಿಗೆ ಸ್ಪಂದಿಸಿ ಉತ್ತಮ ಸೇವೆ ನೀಡಲು ಮುಂದಾಗಬೇಕೆಂದು ಸೂಚಿಸಿದರು.



- ಸೇವೆಗಳನ್ನು ತಲುಪಿಸಲು ಉಪಯೋಗುವಂತೆ ಅನ್ವೇಷಣೆಗಳ 3 & 11 ನಿಮಿಷಗಳ ಕ್ಯಾಸೆಟ್‌ಗಳನ್ನು ತಯಾರಿಸಿ ತಮ್ಮ ಅಧೀನ ಬರುವ ಎಲ್ಲ ಕಿರಿಯ ಅಧಿಕಾರಿಗಳಿಗೆ ತಲುಪಿಸಿ ಅದರಂತೆ ಕಾರ್ಯ ನಿರ್ವಹಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು. ಇದಕ್ಕಾಗಿ ಉತ್ತಮ ಉದಾಹರಣೆಯಾಗಿ ಉತ್ತರ ಪ್ರದೇಶದ ರೈತರು ಕಾರ್ಖಾನೆಗೆ ಕಬ್ಬು ಸಾಗಾಣಿಕೆ ಬಗ್ಗೆ ತಿಳಿಸಿದರು. ಹಾಗೆಯೇ ಮಲೇಷ್ಯಾದಲ್ಲಿ ಮೊಮ್ಮಕ್ಕಳು ಅಜ್ಜಿ–ತಾತಂದಂರಿಗೆ ಕಲಿಸಿಕೊಡುವ ಪದ್ಧತಿಯ ಬಗ್ಗೆ ವಿವರಣೆ ನೀಡಿದರು. ಇನ್ನೊಂದು ಉದಾಹರಣೆಯಾಗಿ ಆಧಾರ ಕಾರ್ಡ್ ಬಗ್ಗೆ ತಿಳಿಸಿದರು.

- ಭ್ರಷ್ಟಾಚಾರ ನಿರ್ಮೂಲನೆಯು ಯಾವುದೇ ಸರ್ಕಾರಕ್ಕೆ ಪ್ರಮುಖ ಸವಾಲಾಗಿರುತ್ತದೆ. ಈ ನಿಟ್ಟಿನಲ್ಲಿ ಲೋಕ್‌ಪಾಲ್ ವಿದೇಯಕವನ್ನು ಜಾರಿಗೊಳಿಸಲು ಕ್ರಮ ವಹಿಸಿರುವ ಬಗ್ಗೆ ಮಾಹಿತಿ ನೀಡಿದರು. ಲಂಚ ತೆಗೆದುಕೊಳ್ಳುವವರು ಎಷ್ಟು ತಪ್ಪಿತಸ್ಥರೋ ಲಂಚ ಕೊಡುವವರು ಅಷ್ಟೇ ತಪ್ಪಿತಸ್ಥರೆಂದು ತಿಳಿಸಿದರು. ಇದಕ್ಕಾಗಿ ಲೋಕಸಭೆಯಲ್ಲಿ ವಿಧೇಯಕವು ಮಂಡನೆಯಾಗುತ್ತಿದೆ ಎಂದು ತಿಳಿಸಿದರು.

- ಭ್ರಷ್ಟಾಚಾರದ ಬಗ್ಗೆ ಮಾಹಿತಿಯನ್ನು ನೀಡುವವರ ರಕ್ಷಣೆ ನೀಡುವ ಕಾನೂನಿನಲ್ಲಿ (Visil Blower's Protection Act) ಭ್ರಷ್ಟರ ಮಾಹಿತಿ ನೀಡುವ ನಾಗರೀಕರಿಗೆ ಆಡಳಿತ ಇಲಾಖೆಯು ರಕ್ಷಣೆ ನೀಡುತ್ತದೆ. ಹಾಗೆಯೇ ಸುಳ್ಳು ಮಾಹಿತಿ ನೀಡಿದರೆ ಅವರಿಗೂ ಕೂಡ ಶಿಕ್ಷೆ ವಿಧಿಸುವ ಹಕ್ಕು ಕೂಡ ಆಡಳಿತ ಇಲಾಖೆಗೆ ಇದೆ ಎಂದು ತಿಳಿಸಿದರು.

- ಆಡಳಿತ ಇಲಾಖೆಯು ಒಂದು ಮಹತ್ವದ ಇಲಾಖೆಯಾಗಿದ್ದು ವಿದೇಶಿ ಹಣ ಹೂಡಿಕೆಯಲ್ಲಿಯೂ ಸಹ ಭ್ರಷ್ಟಾಚಾರ ನಡೆದರೆ ಅಂತಹ ಭ್ರಷ್ಟರನ್ನು ಸೆದೆಬಡೆಯಲು ಒಂದು ಸಮಿತಿಯನ್ನು ರಚಿಸಲಾಗಿದ್ದು ಕೇಂದ್ರ ಸಚಿವರಾದ ಶ್ರೀ ವೀರಪ್ಪ ಮೋಯಿಲಿಯವರು ಅದಕ್ಕೆ ಅಧ್ಯಕ್ಷರಾಗಿದ್ದಾರೆಂದು ತಿಳಿಸಿದರು. ಇದಕ್ಕಾಗಿ ಅವರು 15 ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು ಅವೆಲ್ಲವೂ ಅನುಮೋದನೆ ಪಡೆದುಕೊಂಡಿವೆ ಎಂದು ತಿಳಿಸಿದರು. ಒಟ್ಟು 1165 ಕೋರಿಕೆಗಳು ಸ್ವೀಕೃತಿಯಾಗಿದ್ದು, ಅವುಗಳಲ್ಲಿ 900 ಕೋರಿಕೆಗಳು ಕೇಂದ್ರ/ರಾಜ್ಯ ಸರ್ಕಾರದ ಕೋರಿಕೆಗಳು ಕೇಂದ್ರ ಸರ್ಕಾರವು ಒಪ್ಪಿಕೊಂಡಿರುವುದಾಗಿ ತಿಳಿಸಿದರು. ಇಂತಹ ಪದ್ಧತಿಗಳನ್ನು ದೇಶದ ಎಲ್ಲ ರಾಜ್ಯಗಳು ಅಳವಡಿಸಿಕೊಂಡು ಕಾರ್ಯಗತಗೊಳಿಸಲು ಕೋರಿದರು. ಈ ಸಮ್ಮೇಳನವನ್ನು ಹಮ್ಮಿಕೊಂಡಿದ್ದಕ್ಕಾಗಿ ಮತ್ತೊಮ್ಮೆ ಮುಖ್ಯಮಂತ್ರಿಯವರಿಗೆ ಮತ್ತು ಇತರ ಅಧಿಕಾರಿಗಳಿಗೆ ಧನ್ಯವಾದಗಳನ್ನರ್ಪಿಸಿದರು. ಸಮ್ಮೇಳನ ಯಶಸ್ವಿಯಾಗಲಿ ಎಂದು ಹಾರೈಸಿದರು.

- ಮುಂದುವರೆದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆ.ಸು.)ಯ ಪ್ರಧಾನ ಕಾರ್ಯದರ್ಶಿಯವರ ಕೋರಿಕೆಯಂತೆ ಮಾನ್ಯ ಮುಖ್ಯಮಂತ್ರಿಯವರು ಮೊಬೈಲ್‌ನಿಂದ ಸಕಾಲ ಸೇವೆಯನ್ನು ಅನಾವರಣಗೊಳಿಸಿದ ನಂತರ ಸಮ್ಮೇಳನವನ್ನು ಉದ್ದೇಶಿಸಿ ಉದ್ಘಾಟನಾ ಭಾಷಣ ಮಾಡಿದರು. ಮೊದಲನೆಯದಾಗಿ ಸಮ್ಮೇಳನಕ್ಕೆ ಆಗಮಿಸಿದ ಎಲ್ಲರಿಗೂ ಶುಭಾಷಯಗಳನ್ನು ಕೋರಿದರು.

- ಮುಂದುವರೆದು, "Learning from Success" ಎಂಬ ಪ್ರಾದೇಶಿಕ ಸಮ್ಮೇಳನವನ್ನು ಉದ್ಘಾಟಿಸಿದ್ದಕ್ಕಾಗಿ ಹರ್ಷ ವ್ಯಕ್ತಪಡಿಸಿದರು. ಆಡಳಿತ ಇಲಾಖೆಗಳಲ್ಲಿ ಅಧಿಕಾರಿಗಳು ಒಮ್ಮನಸ್ಸಿನಿಂದ ಸಂಪೂರ್ಣ ಉತ್ತರದಾಯಿತ್ವ ಹೊತ್ತುಕೊಳ್ಳುವುದರ ಜೊತೆಗೆ ಎಲ್ಲಾ ರಾಜ್ಯಗಳ ತಮ್ಮಲ್ಲಿನ ಹೊಸ ಪದ್ಧತಿಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡು ದೇಶದಲ್ಲೆಲ್ಲ ಒಂದೇ ರೀತಿಯ ಸೇವೆಗಳನ್ನು ನಾಗರೀಕರಿಗೆ ನೀಡಲು ಒತ್ತು ಕೊಡಬೇಕೆಂದು ತಿಳಿಸಿದರು. ಈ ಸಮ್ಮೇಳನವು ಅಂತಹ ಸೇವೆಗಳನ್ನು ನೀಡುವ ನಿಟ್ಟಿನಲ್ಲಿ ಒಂದು ಉತ್ತಮ ವೇದಿಕೆಯಾಗಲಿದ್ದು, ದೇಶದ ಆಡಳಿತದಲ್ಲಿ ಪರಿಣಾಮಕಾರಿಯಾದ ಬದಲಾವಣೆಯನ್ನು ತರುವಲ್ಲಿ ಸಹಕಾರಿಯಾಗಲಿದೆ ಎಂದು ತಿಳಿಸಿದರು. ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಸೇವೆಗಳನ್ನು ನಾಗರೀಕರಿಗೆ ಆದಷ್ಟು ಬೇಗ ತಲುಪಿಸಲು ಪ್ರಯತ್ನಿಸಬೇಕು ಮತ್ತು ಅದನ್ನು ಸರಳೀಕರಣಗೊಳಿಸಬೇಕೆಂದರು.

❖ ತಂತ್ರಜ್ಞಾನವು ವಾಸ್ತವಿಕವಾಗಿ, ಪಾರದರ್ಶಕವಾಗಿ, ಉತ್ತರದಾಯಿತ್ವದಿಂದ ಕೂಡಿರಬೇಕು ಮತ್ತು ಕೂಡಲೇ ಪ್ರತಿಕ್ರಿಯೆ ನೀಡುವ ಆಡಳಿತವನ್ನಾಗಿ ಮಾಡಬೇಕೆಂದರು. ಕಾನೂನು, ನಿಯಮಗಳು & ಕಾರ್ಯ ವಿಧಾನಗಳು ಆದಷ್ಟು ಬೇಗ ಸೇವೆಗಳನ್ನು ಒದಗಿಸಲು ಸಹಾಯಮಾಡುತ್ತವೆಂದು ತಿಳಿಸಿದರು. ಆರೋಗ್ಯ, ನೀರಾವರಿ, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳಲ್ಲಿ ಇರುವ ನ್ಯೂನ್ಯತೆಗಳನ್ನು ಕಂಡು ಹಿಡಿದು ಬದಲಾದ ತಂತ್ರಜ್ಞಾನದ ಬಳಕೆಯಿಂದ ಅಧಿಕಾರಿಗಳ ವರ್ತನೆಯಿಂದ ಸರ್ಕಾರದ ಆಡಳಿತವನ್ನು ನಾಗರಿಕ ಸ್ನೇಹಿಯನ್ನಾಗಿ ಪರಿವರ್ತಿಸಬಹುದೆಂದು ತಿಳಿಸಿದರು.

❖ ಸಕಾಲ ಯೋಜನೆಯಡಿ ನಾಗರಿಕರಿಗೆ ಸೇವೆಗಳನ್ನು ಸಲ್ಲಿಸುತ್ತಿರುವ ಮೊದಲ ರಾಜ್ಯವಾಗಿರುವ ಕರ್ನಾಟಕ ಸರ್ಕಾರವು ತನ್ನ ಅಧಿಕಾರಿ/ನೌಕರರುಗಳಿಗೆ ಉನ್ನತ ತರಬೇತಿಯನ್ನು ನೀಡಲಾಗುತ್ತಿದೆ. ಇದಕ್ಕಾಗಿ ರಾಜ್ಯ ಸರ್ಕಾರವು ಕರ್ನಾಟಕ ಜ್ಞಾನ ಆಯೋಗವನ್ನು ಸ್ಥಾಪಿಸಿದೆ ಎಂದು ತಿಳಿಸಿದರು. ಸರ್ಕಾರವು ಆಡಳಿತದಲ್ಲಿ ನವೀನತೆ ತರಲು "ಚಾಲೆಂಜ್ ಫಂಡನ್ನು" ಪಡೆಯಲು ಸಹಾಯ ಮಾಡುತ್ತದೆ ಇದರಿಂದ ಭೂಮಿ, ಇ-ಶುಗಂ, ಖಜಾನೆ, ಇ-ಪ್ರೋಕ್ಯೂರ್‌ಮೆಂಟ್ ಮೋಜಣಿ ಯನ್ನು ಕರ್ನಾಟಕದಲ್ಲಿ ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು. ಸಕಾಲವು ಬ್ಲಾಕ್‌ಷೀಪ್ ಕಾರ್ಯಕ್ರಮದಲ್ಲಿ ಇತ್ತೀಚಿನ ಕಾರ್ಯಕ್ರಮವಾಗಿದೆ ಇದರಲ್ಲಿ 447 ಸೇವೆಗಳನ್ನು ಒದಗಿಸುವುದರಲ್ಲಿ ಶೆ.90ರಷ್ಟು ಯಶಸ್ಸನ್ನು ಕಂಡಿದೆ ಎಂದು ತಿಳಿಸಿದರು. ಈಗಾಗಲೇ 4 ಕೋಟಿ ಅರ್ಜಿಗಳನ್ನು ಒಂದೂವರೆ ವರ್ಷದಲ್ಲಿ ವಿಲೇ ಮಾಡಿ ಸೇವೆಗಳನ್ನು ಸಕಾಲದಲ್ಲಿ ನಾಗರೀಕರಿಗೆ ಒದಗಿಸಲಾಗಿದೆ ಎಂದು ತಿಳಿಸಿದರು. ಕೊನೆಯದಾಗಿ ಎರಡು ದಿನಗಳ ಈ ಸಮ್ಮೇಳನವು ಯಶಸ್ಸು ಕಾಣಲೆಂದು ಆಶಿಸುತ್ತಾ ಬಲಾಢ್ಯ ಭಾರತ ದೇಶದ ನಿರ್ಮಾಣವಾಗಲೆಂದು ಹಾರೈಸಿದರು.

❖ ಮಾನ್ಯ ಮುಖ್ಯ ಕಾರ್ಯದರ್ಶಿಯವರು ಕಳೆದ 2 ವರ್ಷಗಳಿಂದ ಕರ್ನಾಟಕದ ನಾಗರಿಕರಿಗೆ ಸಕಾಲದಲ್ಲಿ ಒದಗಿಸಲಾಗುತ್ತಿರುವ 46 ಇಲಾಖೆಗಳ ಒಟ್ಟು 447 ಸಕಾಲ ಸೇವೆಗಳ ಯೋಜನೆಯ ಯಶೋಗಾತೆಯನ್ನೊಳಗೊಂಡ ಸಕಾಲ ಪುಸ್ತಕವನ್ನು ಬಿಡುಗಡೆಗೊಳಿಸಿದರು. ಇದರ ಜೊತೆಗೆ ಕೇಂದ್ರ ಸರ್ಕಾರದ ಸಿಬ್ಬಂದಿ, ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ದೂರುಗಳ ಇಲಾಖೆಯ ಕಾರ್ಯದರ್ಶಿಯವರಾದ ಶ್ರೀ ಸಂಜಯ ಕೋಠಾರಿಯವರು ಸಕಾಲ ಮಾಹಿತಿಯನ್ನು ಬಿಂಬಿಸುವ 2014ನೇ ಸಾಲಿನ ಕ್ಯಾಲೆಂಡರನ್ನು ಬಿಡುಗಡೆಗೊಳಿಸಿ ಪ್ರಸ್ತಾವಿಕ ಭಾಷಣ ಮಾಡಿದರು.



**ಮಾನ್ಯ ಭಾರತ ಸರಕಾರದ ಸಚಿವರು ಶ್ರೀ ನಾರಾಯಣ ಸಾಮಿ ಹಾಗೂ ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಹಾಗೂ ಮಾನ್ಯ ಮುಖ್ಯ ಕಾರ್ಯದರ್ಶಿ ಶ್ರೀ ಕೌಶಿಕ್ ಮುಖರ್ಜಿಯವರಿಂದ ಸಕಾಲ ಕ್ಯಾಲೆಂಡರ್ ಬಿಡುಗಡೆ ದೃಶ್ಯ:**

❖ ಮುಂದುವರೆದು ಕೇಂದ್ರ ಸರ್ಕಾರದ ಅಪರ ಕಾರ್ಯದರ್ಶಿಯವರಾದ ಶ್ರೀ ಅರುಣ ಝಾ ರವರು ಸಮ್ಮೇಳನಕ್ಕೆ ಆಗಮಿಸಿದ ಎಲ್ಲ ಗಣ್ಯರುಗಳಿಗೆ, ವಿವಿಧ ರಾಜ್ಯಗಳ ಪ್ರತಿನಿಧಿಗಳಿಗೆ, ಅಧಿಕಾರಿ/ನೌಕರರುಗಳಿಗೆ ಮಾಧ್ಯಮ ಪ್ರತಿನಿಧಿಗಳಿಗೆ ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಉದ್ಘಾಟನಾ ಕಾರ್ಯಕ್ರಮವನ್ನು ಅಂತ್ಯಗೊಳಿಸಲಾಯಿತು.

❖ ಮಹಾರಾಷ್ಟ್ರದ ಮುಂಬಯಿ ಮುನಿಸಿಪಲ್ ಕಾರ್ಪೋರೇಷನ್‌ನ ನಿರ್ದೇಶಕರು (ಇಟಿಸಿ) ಡಾ: ವರ್ಷ ಭಗತ್‌ರವರು ಮಾತನಾಡಿ ದುರ್ಬಲರನ್ನು ಗುರುತಿಸುವ ಒಂದು ಕೇಂದ್ರ ಸ್ಥಾಪಿಸುವ ಬಗ್ಗೆ ಯೋಚಿಸಲಾಗಿದೆ ಇದಕ್ಕಾಗಿ ಒಂದು ಸ್ಥಳಿಯ ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಿದ್ದಾಗಿ ತಿಳಿಸಿದರು ದುರ್ಬಲರ ಪಾಲಕರು ಅವರ ಮಕ್ಕಳಿಗೆ ನೀಡುವ ಚಿಕಿತ್ಸೆಗೆ, ಮಧ್ಯಸ್ಥಿಕೆಗಾಗಿ, ಮರುಸ್ಥಿತಿಗೆ ಮರಳಿಸುವುದಕ್ಕಾಗಿ ಸುಮಾರು ಪೋಷಕರು ತಿಂಗಳೊಂದಕ್ಕೆ ಸುಮಾರು 15-20 ಸಾವಿರ ರೂಪಾಯಿಗಳನ್ನು ವ್ಯಯಿಸಬೇಕಾಗಿದ್ದು, ಜನಸಾಮಾನ್ಯರಿಗೆ ಇದು ಹೊರೆಯಾಗುತ್ತದೆ ಎಂದು ತಿಳಿಸಿದರು. ಶೇ. 90% ಪಾಲಕರು ಈ ಹಣ ಭರಿಸಲಿಕ್ಕಾಗುವುದಿಲ್ಲ ಅದಕ್ಕಾಗಿ ಎಲ್ಲ ಸೌಲಭ್ಯಗಳನ್ನು ಒಂದೇ ಕಡೆ ನೀಡುವ ನಿಟ್ಟಿನಲ್ಲಿ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕಾಗುತ್ತದೆಂದು ತಿಳಿಸಿದರು. ಇದಕ್ಕಾಗಿ ಅನೇಕ ಓಊಔಗಳು ದುರ್ಬಲರ ಏಳಿಗೆಗಾಗಿ

ಶ್ರಮಿಸುತ್ತಿವೆ ಆದರೆ ಅವರಿಗೆ ಅವರದ್ದೆ ಆದ ಕೆಲವು ನಿಬಂಧನೆಗಳವೆ ಎಂದು ತಿಳಿಸಿದರು. NGO ಗಳು ಶೇ.95% ಹಣವನ್ನು ಹೇಗೆ ಭರಿಸಬೇಕು & ಹೇಗೆ ಅವರಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಬೇಕೆಂದು ಶೇ.3% ರಷ್ಟು ಮೀಸಲಾಗಿ ನಿಭಾಯಿಸಬೇಕೆಂದು ಯೋಚಿಸುತ್ತಿರುವುದಾಗಿ ತಿಳಿಸಿದರು. ಸಾರ್ಕ್ ದೇಶಗಳನ್ನು ಅಧ್ಯಯನ ಮಾಡಿದಾಗ ನಮ್ಮ ಭಾರತ ಸರ್ಕಾರ ದುರ್ಬಲರಿಗೆ ಮಾಡಿರುವ ಕಾನೂನುಗಳು ಸಾರ್ಕ್ ದೇಶಗಳಿಗಿಂತ ವಿಭಿನ್ನವಾಗಿವೆ ಮತ್ತು ಉತ್ತಮವಾಗಿವೆ ಎಂದು ತಿಳಿಸಿದರು.

- ಇ.ಟಿ.ಸಿ.ಯನ್ನು ಎರಡು ಹಂತಗಳಲ್ಲಿ ಅಭಿವೃದ್ಧಿಗೊಳಿಸಲಾಗುತ್ತಿದೆ. 1ನೇ ಹಂತದಲ್ಲಿ ಶೇ.7% ರಿಂದ 8% ಇದಕ್ಕಾಗಿ ನಮಗೆ ಎಲ್ಲ ತರಹದ ಹೊಸ ಪದ್ಧತಿಯಾಗಿರುವುದರಿಂದ ಸಂಗ್ರಹಣೆಗಾಗಿ ಸ್ಥಳಿಯ ಸಂಸ್ಥೆಯಿಂದ ಅನುಮೋದನೆ ಬೇಕಾಗುತ್ತದೆ. 2ನೇ ಹಂತದಲ್ಲಿ 40 ಮಕ್ಕಳೊಂದಿಗೆ ಒಂದು ದುರ್ಬಲರ ಶಾಲೆಯನ್ನು ಪ್ರಾರಂಭಿಸಬೇಕಾಯಿತು ಇದನ್ನು ಒಂದು ದೊಡ್ಡ ಸಂಸ್ಥೆಯನ್ನಾಗಿ ಪರಿವರ್ತಿಸಲು ಬೇರೆ ಇಲಾಖೆ ಸಹಕಾರ ಬೇಕಾಗುತ್ತದೆ ಎಂದು ತಿಳಿಸಿದರು. ಸಂಸ್ಥೆಯು ತನ್ನ ಕಾರ್ಯವನ್ನು ಸೊನ್ನೆಯಿಂದ ಪ್ರಾರಂಭಿಸಿ ಎಲ್ಲ ರೀತಿಯ ಶಿಕ್ಷಣವನ್ನು ದುರ್ಬಲರಿಗೆ ನೀಡಲಾಗುವುದೆಂದು ತಿಳಿಸಿದರು. Sergo Edn, integrated Edn, Non formal Edn, Home base Edn, etc. ಈ ಎಲ್ಲ ಶಿಕ್ಷಣಗಳಲ್ಲಿ ಯಾವುದಾದರೂ ಶಿಕ್ಷಣ ಪಡೆದುಕೊಳ್ಳಲು ಪಾಲಕರಿಗೆ ಆಯ್ಕೆಯನ್ನು ನೀಡಲಾಗುತ್ತದೆ ಎಂದು ತಿಳಿಸಿದರು. ಎಲ್ಲರಂತೆ IB, ICSC, CBSC, & SSC ಪರೀಕ್ಷಾ ಮಂಡಳಿಗಳನ್ನು ಹೊಂದಲಾಗಿದೆ ಮತ್ತು ಸಾಧ್ಯವಾಗುವ ಎಲ್ಲ ಮಾಧ್ಯಮಗಳಲ್ಲಿ ಶಿಕ್ಷಣವನ್ನು ನೀಡಲಾಗುತ್ತದೆ ಎಂದು ತಿಳಿಸಿದರು. ಇದಕ್ಕಾಗಿ ಒಂದು ಮಗುವಿಗೆ ಶಿಕ್ಷಣ ನೀಡಲು ಎಲ್ಲ ತರಬೇತುದಾರರು ಮತ್ತು ಪಾಲಕರು ಕೂಡ ಈ ಯೋಜನೆಯ ಭಾಗೀದಾರರಾಗುತ್ತಾರೆ ಎಂದು ತಿಳಿಸಿದರು.

- ಮಧ್ಯಾಹ್ನದ ಊಟದಲ್ಲಿ ಖಿಚಡಿಯನ್ನು ಮಕ್ಕಳಿಗೆ ನೀಡಲಾಗುತ್ತದೆ, ವರ್ಷದಲ್ಲಿ ಎರಡು ಬಾರಿ ಪೂರ್ಣ ಆರೋಗ್ಯ ತಪಾಸಣೆ ನಡೆಸಲಾಗುತ್ತದೆ ಎಂದು ತಿಳಿಸಿದರು. ನಾಗರೀಕರು ಈ ಬಗ್ಗೆ ಯಾವುದೇ ಮಾಹಿತಿ ಕೋರಿದರೆ ETC ಯು ಒದಗಿಸುವುದೆಂದು ತಿಳಿಸಿದರು. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ & ಸ್ಥಳೀಯ ಸಂಸ್ಥೆಯ ಮಾಹಿತಿ ನೀಡಲಾಗುವುದೆಂದು ತಿಳಿಸಿದರು. ದುರ್ಬಲರಿಗೆ ಉದ್ಯೋಗ ಸೇವೆಯನ್ನು ಕೂಡ ಒದಗಿಸಲಾಗುವುದೆಂದು ತಿಳಿಸಿದರು. ದುರ್ಬಲರನ್ನು ಸಶಕ್ತಗೊಳಿಸಲು ಪಾಲಿಕೆ ವ್ಯಾಪ್ತಿಯಲ್ಲಿ 86 ಶಾಲೆಗಳಲ್ಲಿ ಶಿಕ್ಷಣವನ್ನು ನೀಡಲು ವ್ಯವಸ್ಥೆ ಮಾಡಲಾಗಿದೆ ಎಂದರು.

- ಈ ವರ್ಷ ಲಸಿಕೆ ಹಾಕುವ (Vaccination programme) ಕಾರ್ಯಕ್ರಮ ಪ್ರಾರಂಭಿಸಿರುವುದಾಗಿ ತಿಳಿಸಿದರು. ಇದಕ್ಕಾಗಿ ಆಯವ್ಯಯದಲ್ಲಿ ಪ್ರತ್ಯೇಕ ಅನುದಾನ ಮೀಸಲಿಡಲಾಗಿದ್ದು, ಎಲ್ಲ ತರಹದ ಪುನರ್ವಸತಿ ಸೇವೆಗಳನ್ನು ನೀಡಲಾಗುವುದೆಂದರು. ಪ್ರತಿ ದುರ್ಬಲ ಮಗುವಿನ ಶಸ್ತ್ರ ಚಿಕಿತ್ಸೆಗಾಗಿ ಒಂದು ಲಕ್ಷ ರೂಪಾಯಿಗಳನ್ನು ನೀಡಲಾಗುವುದು, ಆರ್ಥಿಕವಾಗಿ ಸಶಕ್ತರಾಗಲು ರೂ.40,000/- ಗಳನ್ನು ವ್ಯಾಪಾರಕ್ಕಾಗಿ ನೀಡಲಾಗುವುದೆಂದು ತಿಳಿಸಿದರು. ಶೇ.14% ರಷ್ಟು ದುರ್ಬಲರಿಗೆ ಸ್ಕಾಲರ್‌ಷಿಪ್ ಮಾಸಿಕ ರೂ.300/-ಗಳನ್ನು ನೀಡಲಾಗುವುದೆಂದು ತಿಳಿಸಿದರು.

- ದುರ್ಬಲ ಮಕ್ಕಳ ಪಾಲಕರಿಗೆ ಆರ್ಥಿಕವಾಗಿ ಸಶಕ್ತಗೊಳಿಸಲು ದಿನಮೊಂದಕ್ಕೆ ರೂ.100/-ರಂತೆ ದಿನಗೂಲಿ ನೀಡಲಾಗುವುದುದೆಂದರು. ಎಲ್ಲಾದರೂ ತರಬೇತಿ ಪಡೆಯಲು ಹೋದರೆ ಅವರಿಗೆ ರೂ.5000/-ರಂತೆ ಸಹಾಯಧನ ನೀಡಲಾಗುವುದು ಎಂದು ತಿಳಿಸಿದರು. ಪ್ರತಿ ವರ್ಷ 5000 ದುರ್ಬಲರನ್ನು ಪಾಲಿಕೆ ಗುರ್ತಿಸಲಾಗುತ್ತಿದೆ. ಸಾಕಷ್ಟು NGOಗಳು ದುರ್ಬಲರಿಗಾಗಿ ಶ್ರಮಿಸುತ್ತಿವೆ. ETCಯು 1700 ಘಾರಂಗಳನ್ನು ಹೊಂದಿದ್ದು ತರಬೇತಿ ನೀಡುತ್ತದೆ ಮತ್ತು ETC ಯು ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿದೆ ಎಂದು ತಿಳಿಸಿದರು.

- ಮುಂದುವರೆದು ಕೇಂದ್ರ ಸರ್ಕಾರದ ಸಚಿವರಾದ ಶ್ರೀ ನಾರಾಯಣಸಾಮಿ ಯವರು ಪ್ರಧಾನ ಮಂತ್ರಿಗಳ ಪ್ರಶಸ್ತಿ ಪಡೆದಿದ್ದಕ್ಕಾಗಿ ETC ಗೆ ಅಭಿನಂದಿಸಿದರು. ದುರ್ಬಲರಿಗಾಗಿ ಪ್ರತ್ಯೇಕ ವಿಧೇಯಕ ಪರಿಚಯಿಸಲಾಗುತ್ತಿದೆ ವಿಧೇಯಕವು ತಯಾರಾಗಿದೆ ಮುಂದಿನ ಅಧಿವೇಶನದಲ್ಲಿ ದುರ್ಬಲರಿಗಾಗಿ ಪ್ರತ್ಯೇಕ ಇಲಾಖೆ ಮಾಡಲಾಗುವುದುದೆಂದು ಭರವಸೆ ನೀಡಿದರು.



❖ ಕೇರಳದ ಅಪರ ಮುಖ್ಯ ಕಾರ್ಯದರ್ಶಿ ಶ್ರೀಮತಿ ನಿವೇದಿತಾ ಹರನ್ ಇವರ ಪ್ರಶ್ನೆಗೆ ಉತ್ತರಿಸುತ್ತಾ ಶ್ರೀಮತಿ ವರ್ಷಾರವರು ಒಬ್ಬರು ಬೆನೆಫಿಷಿಯರಿಗೆ ಒಂದು ವರ್ಷಕ್ಕೆ 1 ರಿಂದ 1.5 ಲಕ್ಷ ರೂಪಾಯಿಗಳು ವ್ಯಯವಾಗುತ್ತಿದ್ದು, ಇಂತಹ 430 ಮಕ್ಕಳು ಇದರ ಲಾಭ ಪಡೆಯುತ್ತಿರುವುದಾಗಿ ತಿಳಿಸಿದರು.

❖ ಪ್ರಧಾನ ಕಾರ್ಯದರ್ಶಿಯವರು ಶ್ರೀಮತಿ ಅಮಿತಾ ಪ್ರಸಾದ್ ಇವರ ಪ್ರಶ್ನೆಗೆ ಉತ್ತರಿಸುತ್ತಾ ಶ್ರೀಮತಿ ವರ್ಷ ಭಗತ್ ರವರು ETC ಯಲ್ಲಿ ಒಟ್ಟು 16 ಇಲಾಖೆಗಳಿವೆ. ಶೇಕಡಾ 90 ರಷ್ಟು ಉದ್ಯೋಗ ಒದಗಿಸಲಾಗುವುದು ಎಂದರು ಇಚಿಅ ಸರ್ಕಾರಿ ಮತ್ತು ಖಾಸಗಿ ಕನ್ಸಲ್ಟೆನ್ಸಿ ಸೇವೆಗಳ ವ್ಯವಸ್ಥೆ ಮಾಡುತ್ತದೆಂದು ತಿಳಿಸಿದರು.

❖ ದುರ್ಬಲರನ್ನು ಹೇಗೆ ಗುರುತಿಸುತ್ತಾರೆ ಮತ್ತು ಹೇಗೆ ಅವರನ್ನು ನಡೆಸಿಕೊಂಡು ಬರುತ್ತೀರಿ ಎಂದು ಡಿಯು ಮತ್ತು ದಮನ್‌ನ ಪ್ರತಿನಿಧಿ ಶ್ರೀ ಭಲ್ಲಾರವರು ಕೇಳಿದ ಪ್ರಶ್ನೆಗೆ ಶ್ರೀ ಸಂಜಯ ಕೋಠಾರಿಯವರು ಇಂತಹ ಕಾರ್ಯಗಳನ್ನು ಕಾರ್ಯಗತಗೊಳಿಸಲು ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ನಿವೃತ್ತಿ ಹೊಂದಿರುವ ನೌಕರ/ಅಧಿಕಾರಿಗಳ ಸೇವೆಯನ್ನು ಬಳಸಿಕೊಳ್ಳಲು ಸಲಹೆ ನೀಡಿದರು. ಇಂತಹ ಕಾರ್ಯಗಳಿಗೆ ಮಾನ್ಯ ಸಚಿವರು ಬೆಂಬಲ ಕೊಡಬೇಕೆಂದು ಕೋರಿಕೊಂಡರು. ಅದಕ್ಕೆ ಮಾನ್ಯ ಕೇಂದ್ರ ಸಚಿವರು ತಮ್ಮ ಕ್ಷೇತ್ರದ ಉದಾಹರಣೆ ಕೊಡುತ್ತಾ ದುರ್ಬಲರಿಗೆ ಕೆಲಸ ನೀಡಿದರೆ ಪ್ರೋತ್ಸಾಹ ನೀಡಿದರೆ ಅವರು ಸಾಮಾನ್ಯರಿಗಿಂತ ಉತ್ತಮ ಕೆಲಸ ನಿರ್ವಹಿಸಿ ತೋರಿಸುತ್ತಾರೆ. ಇದರಿಂದ ಅವರ ಮತ್ತು ಸಾಮಾನ್ಯರ ಮಧ್ಯೆ ತಾತ್ಸಾರ ಬರುವುದಿಲ್ಲವೆಂದು ತಿಳಿಸಿದರು.



ಮಾನ್ಯ ಕಾನೂನು ಸಚಿವರಿಂದ ಸಕಾಲ ಎಕ್ಸಿಬಿಷನ್ ಉದ್ಘಾಟನೆ ದೃಶ್ಯ – ಸ್ಥಳ ವಿಧಾನ ಸೌಧ ಬ್ಯಾಂಕ್ವೆಟ್ ಹಾಲ್

❖ ಮುಂದುವರೆದು ತಮಿಳುನಾಡಿನ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಾದ ಶ್ರೀಮತಿ ಸಬಿತಾ ತಮಿಳುನಾಡಿನಲ್ಲಿ 3 ಪ್ರಾರಂಭಿಕ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಅದಕ್ಕಾಗಿ ಸ್ಟೇಟ್ ರಿಜರ್ವ ಸೆಂಟರ್ ಎಂಬ ಕೇಂದ್ರವನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿದರು. ಇದರಲ್ಲಿ ಪಾಲಕರು ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಘೋಷಿಸಲ್ಪಟ್ಟ ಎಲ್ಲ ತರಹದ ಸ್ಕಾಲರ್‌ಷಿಪ್ ಮತ್ತು ಇತರ ಸೌಲಭ್ಯಗಳ ಮಾಹಿತಿಯನ್ನು ಪಡೆಯಬಹುದಾಗಿದೆ ಎಂದು ತಿಳಿಸಿದರು. ಇದರಿಂದ ಅವರು ಯಾವ ಲಾಭಗಳಿಂದ ವಂಚಿತರಾಗುತ್ತಿದ್ದರು ಎಂಬ ಮಾಹಿತಿ ತಿಳಿದಂತಾಗುತ್ತದೆ ಎಂದು ತಿಳಿಸಿದರು.

❖ ಎರಡು ವರ್ಷಗಳ ಹಿಂದೆಯೇ ಈ ಪದ್ಧತಿಯನ್ನು ಜಾರಿಗೆ ತಂದಿದ್ದಾಗಿ ತಿಳಿಸಿದರು. ರೆಗ್ಯೂಲರ್ ಶಾಲೆಗಳಿಗೆ 50000 ಮಕ್ಕಳನ್ನು ಮುಖ್ಯ ವಾಹಿನಿಗೆ ತರಲು ಪ್ರಯತ್ನಿಸಿದ್ದಾಗಿ ತಿಳಿಸಿದರು. ಮಕ್ಕಳನ್ನು ಟ್ರ್ಯಾಕ್ ಮಾಡಲು ಸಾಫ್ಟ್‌ವೇರ್ ಅಭಿವೃದ್ಧಿಗೊಳಿಸಿದ್ದಾಗಿ ತಿಳಿಸಿದರು ಪ್ರತಿಯೊಂದು ಮಗುವಿನ ಚಲನವಲನ ತಿಳಿಯಲು ಬಾರ್‌ಕೋಡ್‌ಗಳನ್ನು ಮತ್ತು ಯುನಿಕ್ ಐಡಿ ಸಂಖ್ಯೆಗಳನ್ನು ನೀಡುತ್ತಿರುವುದಾಗಿ ತಿಳಿಸಿದರು. ಮಗುವಿನ ಪಾಲಕರ ಮಾಹಿತಿಗಳನ್ನು ಸಹ ಸಂಗ್ರಹಿಸುತ್ತಿರುವುದಾಗಿ ಕೂಡ ಹೇಳಿದರು. ಈ ವರ್ಷ 10 ಮೊಬೈಲ್ ಕೌನ್ಸಿಲಿಂಗ್ ಕೇಂದ್ರಗಳನ್ನು ಪರಿಚಯಿಸಲಾಗಿದೆ. ಮತ್ತು ಕೌನ್ಸಿಲರ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು. ರಾಜ್ಯವನ್ನು ವಿವಿಧ ವಲಯಗಳಲ್ಲಿ ವಿಂಗಡಿಸಲಾಗಿದೆ. ಕೌನ್ಸಿಲರ್‌ಗಳು ಆಯಾ ವಲಯಗಳಲ್ಲಿ ಪಾಲಕರಿಗೆ ಬೇಕಾಗುವ ಮಾಹಿತಿ/ಸಹಾಯವನ್ನು ಮಾಡುತ್ತಾರೆಂದು ತಿಳಿಸಿದರು. ಕೌನ್ಸಿಲಿಂಗ್‌ನಿಂದ ಪಾಲಕರ ನಡತೆಯಲ್ಲಿಯೂ ಸಹ ಪರಿವರ್ತನೆಯಾಗಿದ್ದು, ಶಾಲೆಯಿಂದ ತೆಗೆಯಲ್ಪಟ್ಟ, ಶಾಲೆಗೆ ಬರದ ಮಕ್ಕಳನ್ನು ಪುನಃ ಶಾಲೆಗೆ ಮರಳಿ ತರುವಲ್ಲಿ ಯಶಸ್ವಿಯಾಗಿದ್ದೇವೆಂದು ತಿಳಿಸಿ ತಮ್ಮ ಪ್ರಾತ್ಯಕ್ಷಿತೆಯನ್ನು ಅಂತ್ಯಗೊಳಿಸಿದರು.

❖ ಈ ಕಾರ್ಯಕ್ಕಾಗಿ ಕೇಂದ್ರದ ಕಾರ್ಯದರ್ಶಿಗಳು ನಿವೃತ್ತ ನೌಕರರ ಮತ್ತು ಅಧಿಕಾರಿಗಳ ಸೇವೆಯನ್ನು ಪಡೆದುಕೊಳ್ಳಲು ಸಲಹೆ ನೀಡಿದರು. ಚೆನ್ನೈನಲ್ಲಿ ಈ ವಿಷಯದ ಬಗ್ಗೆ ಅಭಿವೃದ್ಧಿಯಾದ ಬಗ್ಗೆ ಕೇಳಿದಾಗ ಚೆನ್ನೈ ಮಹಾನಗರ ಪಾಲಿಕೆಯ ಆಯುಕ್ತರಾದ ಶ್ರೀ ವಿಕ್ರಮ್ ಕಪೂರ ಮಾತನಾಡಿ ತಮಿಳನಾಡು ಮಹಾರಾಷ್ಟ್ರ ರಾಜ್ಯ ಮಾಡಿರುವ ಸಾಧನೆಯಿಂದ ಪ್ರಭಾವಿತರಾಗಿದ್ದೇವೆ. ಚೆನ್ನೈ ಮಹಾನಗರ ಪಾಲಿಕೆಯು 284 ಶಾಲೆಗಳನ್ನು ಪ್ರಾಥಮಿಕ ಮತ್ತು ಪ್ರೌಢ ಶಾಲೆಯವರೆಗೆ ನಡೆಸಲಾಗುತ್ತಿದೆ. ದುರ್ಬಲರಿಗಾಗಿ ಮಹಾರಾಷ್ಟ್ರ ಮಾಡಿರುವ ಸಾಧನೆಗಳನ್ನು ಮುಂದೆ ಅಳವಡಿಸಿಕೊಳ್ಳಲಾಗುವುದು ಎಂದು ತಿಳಿಸಿದರು.

- ಮುಂದುವರೆದು ಗುಜರಾತ್ ರಾಜ್ಯದ ಪ್ರತಿನಿಧಿ ಶ್ರೀ ಕೆ.ಸಿ. ತ್ರಿಪಾಠಿ ಮಾತನಾಡಿ ಕೇಂದ್ರ ಸರ್ಕಾರದಿಂದ ಇಂತಹ ಚಟುವಟಿಕೆಗಳಿಗೆ ಮಾಧ್ಯಮಗಳ ಮುಖಾಂತರ ಪ್ರಚಾರ ಕೈಗೊಳ್ಳಬೇಕೆಂದು ಕೋರಿದರು. ಇದರಿಂದ ಸ್ವಯಂ ಸೇವಕರು ಮಗುವನ್ನು ದತ್ತು ಪಡೆಯಲು ಸಹಾಯವಾಗುತ್ತದೆಂದು ಸಲಹೆ ನೀಡಿದರು. ಶ್ರೀ ಸಂಜಯ ಕೋಠಾರಿ ಏನಾದರು ಸಲಹೆಗಳಿದ್ದರೆ ಅಥವಾ ಸಹಾಯ ಬೇಕಾದರೆ ಶ್ರೀಮತಿ ವರ್ಷ ಭಗತ್‌ರವರನ್ನು ಭೇಟಿಯಾಗಲು ತಿಳಿಸಿದರು.

- ಕೇರಳ ರಾಜ್ಯದ ಅಪರ ಮುಖ್ಯ ಕಾರ್ಯದರ್ಶಿಯವರಾದ ಡಾ: ನಿವೇದಿತಾ ಪಿ. ಹರನ್ ರವರು ಕೇರಳ ರಾಜ್ಯದಲ್ಲಿ ಮರಳು ಮಾಫಿಯಾ ಬಗ್ಗೆ ವಿವರವಾಗಿ ಪ್ರಸ್ತಾಪಿಸಿದರು. ಮರಳು ಸಂಗ್ರಹಿಸುವುದು ಸಾಗಣಿಕೆ ನಡೆಸುವಲ್ಲಿ ಉಂಟಾಗುತ್ತಿರುವ ತೊಡಕುಗಳು ಹಾಗೂ ಅವುಗಳನ್ನು ಸರಿಪಡಿಸುವಲ್ಲಿ ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ ವಿವರಣೆ ನೀಡಿದರು.

- ಮಹಾರಷ್ಟ್ರ ರಾಜ್ಯದ ಆಯುಕ್ತರಾದ (ಸಕ್ಕರೆ) ಶ್ರೀ ವಿಜಯ್ ಸಿಂಘಾಲ್ ರವರು ಗಿರ್ನಾ ನದಿ ಜೊಡಣೆಯ ಬಗ್ಗೆ ವಿಸ್ತೃತವಾಗಿ ಪ್ರಾತ್ಯಕ್ಷಿತೆಯೊಂದಿಗೆ ವಿವರಣೆ ನೀಡಿದರು. ಗಿರ್ನಾ ನದಿ ಜೋಡಣೆ ಯೋಜನೆಯ ವಿವರಗಳು ಹಾಗೂ ಇದರಿಂದ ಸಾರ್ವಜನಿಕರಿಗೆ ನೀರಾವರಿ ಸೌಲಭ್ಯವನ್ನು ಒದಗಿಸುವಲ್ಲಿ ಆಗಿರುವ ಅನುಕೂಲಗಳ ಬಗ್ಗೆ ತಿಳಿಸಿದರು.

- ದಮನ್ ಮತ್ತು ಡಿಯು ಕೇಂದ್ರಾಡಳಿತ ಪ್ರದೇಶದ ಆಡಳಿತಾಧಿಕಾರಿಯಾದ ಶ್ರೀ ಬಿ.ಎಸ್. ಭಲ್ಲಾ ರವರು ಸರ್ಕಾರದ ಯೋಜನೆಗಳ ಬಗ್ಗೆ ವಿವರಣೆ ನೀಡಿದರು. 1961ನೇ ಆಗಸ್ಟ್‌ನಲ್ಲಿ ಸ್ಥಾಪಿತಗೊಂಡ ದಮನ್ ಮತ್ತು ಡಿಯುನ ಒಟ್ಟು ಜನಸಂಖ್ಯೆ 2.5 ಕೋಟಿಗಳಷ್ಟಿದ್ದು ಸರ್ಕಾರವು ಅಲ್ಲಿನ ನಾಗರಿಕರಿಗಾಗಿ ಜಾರಿಗೆ ತಂದಿರುವ ಸಮಯ್ ಸುದಿನ್ ಸೇವಾ, ಉಡಾನ್, ಆಸ್ಪತ್ರೆಗಳ ಕೇಂದ್ರೀಕರಣ ಹಾಗೂ ಸಂಕಲ್ಪ ಯೋಜನೆಗಳ ವಿವರ ಹಾಗೂ ಅವುಗಳಿಂದ ನಾಗರಿಕರಿಗೆ ಆಗುತ್ತಿರುವ ಅನುಕೂಲಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು.

- ನಂತರ, ತಮಿಳುನಾಡು ರಾಜ್ಯದ ಚೆನ್ನೈ ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀ ವಿಕ್ರಮ್ ಕಪೂರ್ ರವರು ತಮಿಳುನಾಡು ಸರ್ಕಾರದ ಮಹತ್ವಾಂಕ್ಷೆಯ ಯೋಜನೆಯಾದ "ಅಮ್ಮಾ ಕ್ಯಾಂಟಿನ" ಯೋಜನೆಯ ಬಗ್ಗೆ ಪ್ರಾತ್ಯಕ್ಷಿತೆಯೊಂದಿಗೆ ಮನದಟ್ಟಾಗುವಂತೆ ವಿವರಣೆ ನೀಡಿದರು. ಬಡ ಹಾಗೂ ಮದ್ಯಮ ವರ್ಗದವರಿಗೆ ಅನುಕೂಲವಾಗುವ ಆಶಯದೊಂದಿಗೆ 2013ನೇ ನವೆಂಬರ್ 13ರಂದು ತಮಿಳುನಾಡಿನ ಮಾನ್ಯ ಮುಖ್ಯಮಂತ್ರಿಯವರು ಸದರಿ ಯೋಜನೆಗೆ ಚಾಲನೆ ನೀಡಿರುತ್ತಾರೆ. ಈ ಕ್ಯಾಂಟಿನ್‌ನಲ್ಲಿ ಸುಮಾರು 2500 ನೌಕರರಿದ್ದು ಬೆಳಗ್ಗಿನ ತಿಂಡಿ ಮತ್ತು ಮಧ್ಯಾಹ್ನದ ಉಪಹಾರವನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ನೀಡುವ ಕಾರ್ಯಕ್ರಮವಾಗಿರುತ್ತದೆ. ಅಲ್ಲಿನ ಜನರು ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದು ಯೋಜನೆಯು ಯಶಸ್ವಿಯಾಗಿ ಮುಂದುವರೆಯುತ್ತಿರುವುದಾಗಿ ತಿಳಿಸಿದರು. ಇದರಿಂದ ಸಾರ್ವಜನಿಕರಿಗೆ ನೇರವಾಗಿ ಹಣ ಉಳಿತಾಯವಾಗುವುದರಿಂದ ಸದರಿ ಹಣವನ್ನು ಶಿಕ್ಷಣ ಇತ್ಯಾದಿ ಕೆಲಸಗಳಿಗೆ ವಿನಿಯೋಗಿಸಿಕೊಳ್ಳಲು ಅನುಕೂಲವಾಗಿದೆ ಎಂದು ತಿಳಿಸಿದರು. ಈ ಯೋಜನೆಗಾಗಿ ಸರ್ಕಾರವು ತನ್ನ ಆಯವ್ಯಯದಲ್ಲಿ ರೂ.3500 ಕೋಟಿಗಳನ್ನು ಮೀಸಲಿರಿಸಿರುವುದಾಗಿ ತಿಳಿಸಿದರು.

- **ಇದಲ್ಲದೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಸಕಾಲ ಎಕ್ಸಿಬಿಷನ್ ಅನ್ನು ಏರ್ಪಡಿಸಲಾಗಿತ್ತು ಅದರ ದೃಶ್ಯ**




ಕರ್ನಾಟಕ ಸರ್ಕಾರ
ವಾರ್ತಾ ಇಲಾಖೆ
Sakala Services Now Online


TRANSPORT DEPARTMENT


SAKALA




Creating Awareness
Pratibha Karanji initiative


SAKALA

<u>**23ನೇ ಜನವರಿ 2014:- ಯಶಸ್ಸಿನಿಂದ ಕಲಿಕೆ ಮುಂದುವರೆದ ಕಾರ್ಯಕ್ರಮದ ದೃಶ್ಯ:**</u>






**<u>ಸಕಾಲ ಮಿತ್ರರಾಗಲು ಕಾರ್ಪೋರೇಟ್ ಸಂಸ್ಥೆಗಳು ಉತ್ಸುಕ</u>**– ಬೆಂಗಳೂರು, ಜನವರಿ 17: ಸಕಾಲ ಯೋಜನೆಯ ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಕಾಲದ ಸಂದೇಶವನ್ನು ಗ್ರಾಮೀಣ ಪ್ರದೇಶಗಳಿಗೆ ಪ್ರಸರಣ ಮಾಡುವ ಕಾರ್ಯದಲ್ಲಿ ಭಾಗೀದಾರರಾಗಲು ಉತ್ಸುಕರಾಗಿರುವುದಾಗಿ ಡಿಎಲ್‌ಎಫ್, ಮಹಿಂದ್ರ, ಮಹಿಳಾ ಉದ್ಯಮಿಗಳ ಒಕ್ಕೂಟ, ಆಫ್ರಿಕಾದ ಅಂತಾರಾಷ್ಟ್ರೀಯ ವ್ಯಾಪಾರ ವೇದಿಕೆ ಮತ್ತಿತರ ಕಾರ್ಪೋರೇಟ್‌ಗಳು ತಿಳಿಸಿದರು.

ನವದೆಹಲಿಯ ಇನ್‌ಸ್ಟಿಟ್ಯೂಟ್ ಆಫ್ ಡೈರೆಕ್ಟರ್ಸ್ ವತಿಯಿಂದ ನಗರದಲ್ಲಿ ಏರ್ಪಡಿಸಿದ್ದ **ಕಾರ್ಪೋರೇಟ್‌ಗಳ ಸಾಮಾಜಿಕ ಜವಾಬ್ದಾರಿ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಅವರು** ಭಾಗವಹಿಸಿ ಈ ವಿಷಯ ತಿಳಿಸಿದರು.




ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಸಕಾಲ ಮಿಷನ್ ನಿರ್ದೇಶಕರಾದ ಡಾ: ಶಾಲಿನಿ ರಜನೀಶ್ ರವರು ಸಮೂಹ ಸಂವಹನ (ಮುದ್ರಣ, ವಿದ್ಯುನ್ಮಾನ ಮತ್ತು ನವ ಮಾಧ್ಯಮ) ಮಡಿಕೆ ಪತ್ರ, ಕ್ಯಾಲೆಂಡರ್‌ಗಳು, ಸಾಮಾಜಿಕ

ಮಾಧ್ಯಮಗಳಲ್ಲಿ ಬ್ಯಾನರ್ ಇತ್ಯಾದಿಗಳ ಮೂಲಕ ಪ್ರಚಾರಾಂದೋಲನಗಳಗೆ ಪ್ರಾಯೋಜಿಸುವಂತೆ ಸಮ್ಮೇಳನದಲ್ಲಿ ನೀಡಿದ ಕರೆಗೆ ಕಾರ್ಪೋರೇಟ್‌ಗಳು ಓಗೊಟ್ಟರು.

'ಸಕಾಲ ಮಿತ್ರ'ರಾಗಿ ಸ್ವಯಂಸೇವೆ ಮಾಡಲು ಕಾರ್ಪೋರೇಟ್ ಉದ್ಯೋಗಿಗಳಗೆ ಆಹ್ವಾನವಿತ್ತ ಡಾ: ಶಾಲಿನಿ ರಜನೀಶ್, ಗ್ರಾಮಗಳನ್ನು ದತ್ತು ಸ್ವೀಕರಿಸುವುದು, ಸಕಾಲದ ಕುರಿತು ಗ್ರಾಮೀಣ ಜನರಿಗೆ ಅರಿವು ಮೂಡಿಸುವುದು, ಹೆಲ್ಪ್‌ಡೆಸ್ಕ್‌ಗಳನ್ನು ಹಳ್ಳಿಗಳಲ್ಲಿ ಸ್ಥಾಪಿಸುವುದು ಹಾಗೂ ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಗಳ ಮೇಲ್ವಿಚಾರಣೆಗೆ ಕಿಯಾಸ್ಕ್‌ಗಳನ್ನು ಸ್ಥಾಪಿಸಲು ನೆರವು ನೀಡುವಂತೆ ಕರೆ ನೀಡಿದರು.

ಗ್ರಾಮೀಣ ಭಾಗಗಳಲ್ಲಿ ಸೈಬರ್ ಸೆಂಟರ್‌ಗಳಲ್ಲಿ ಸಂಪರ್ಕಗಳನ್ನು ಹೆಚ್ಚಿಸಲು ಕಂಪ್ಯೂಟರ್, ಲ್ಯಾಪ್‌ಟಾಪ್, ಪ್ರಿಂಟರ್ ಹಾಗೂ ಯು.ಪಿ.ಎಸ್‌ಗಳನ್ನು ಪ್ರಾಯೋಜಿಸುವಂತೆಯೂ ಕೋರಿದ ಡಾ: ಶಾಲಿನಿ ರಜನೀಶ್ ರವರು, ಕಾರ್ಪೋರೇಟ್‌ಗಳು ಗ್ರಾಮೀಣ ಯುವಕರಿಗೆ ಸಕಾಲದ ಆನ್‌ಲೈನ್ ಅರ್ಜಿಗಳನ್ನು ಮೇಲ್ವಿಚಾರಣೆ ಮಾಡುವ ಬಗ್ಗೆಯೂ ತರಬೇತಿ ನೀಡಬಹುದು ಎಂದರು.

**ಇ–ಆಡಳಿತದಿಂದ ಸಂಚಾರಿ ಆಡಳಿತಕ್ಕೆ ಸಕಾಲದ ಸ್ಥಿತ್ಯಂತರ**

ಬೆಂಗಳೂರು, ಜನವರಿ 16: ಕಂಪ್ಯೂಟರ್ ಆಧಾರಿತ ಸಾಧನಗಳ ಬಳಕೆಯಿಂದ ಹೆಚ್ಚು ಜನರಿಗೆ ಕಡಿಮೆ ಅವಧಿಯಲ್ಲಿ ಸವಲತ್ತುಗಳನ್ನು ವಿತರಿಸಬಹುದು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರನಾ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಹಾಗೂ ಸಕಾಲ ಮಿಷನ್ ನಿರ್ದೇಶಕರಾದ ಡಾ: ಶಾಲಿನಿ ರಜನೀಶ್ ತಿಳಸಿದರು.

ಜಾರ್ಖಂಡ್ ರಾಜ್ಯದ ರಾಂಚಿಯಲ್ಲಿ ಇತ್ತೀಚೆಗೆ ನಡೆದ ಸಾರ್ವಜನಿಕ ಸೇವೆಗಳ ಕಾಯ್ದೆ ಕುರಿತು ನಡೆದ **ಜ್ಞಾನ ವಿನಿಮಯ ಕಾರ್ಯಾಗಾರದಲ್ಲಿ** ಅವರು ಮಾತನಾಡಿ ಈ ವಿಷಯ ತಿಳಸಿದರು.

ಸಕಾಲ ಯೋಜನೆಯು ಇದೀಗ ಮೊಬೈಲ್ ಅಪ್ಲಿಕೇಷನ್‌ಗಳ ಬಳಕೆಯಿಂದ ಇನ್ನೂ ಹೆಚ್ಚಿನ ಜನರನ್ನು ತಲುಪುತ್ತಿದೆ. ಇದರಿಂದಾಗಿ ನಾಗರಿಕರಿಗೆ ತಮ್ಮ ಅರ್ಜಿಯ ಸ್ಥಿತಿಗತಿಯನ್ನು ತಿಳಯುವುದು ಅತ್ಯಂತ ಸುಲಭ ಹಾಗೂ ನಿಗದಿತ ವೇಳೆಯಲ್ಲಿ ಸೇವೆಯನ್ನು ಪಡೆಯುವುದೂ ಸಾಧ್ಯವಾಗಿದೆ ಎಂದರು. ಇ–ಆಡಳಿತದಿಂದ ಸಂಚಾರಿ ಆಡಳಿತಕ್ಕೆ ಸಕಾಲದ ಸ್ಥಿತ್ಯಂತರವಾಗಿದ್ದು, ಅರ್ಜಿಯ ಸ್ವೀಕೃತಿಯಿಂದ ಹಿಡಿದು ಅಹವಾಲು ಇತ್ಯರ್ಥಗೊಳಸುವತನಕ ಈ ಪದ್ಧತಿ ನಾಗರಿಕರಿಗೆ ಹಾಗೂ ನೌಕರಶಾಹಿ ಇಬ್ಬರಿಗೂ ನಾಗರಿಕ ಸೇವೆಯ ವಿಲೇವಾರಿಗೆ ಇರಬಹುದಾದ ಅತ್ಯಂತ ಸುಲಭ ಮಾರ್ಗವಾಗಿ ಪರಿಣಮಿಸಿದೆ ಎಂದರು.

ಕಾಯ್ದೆಯ ಅನುಷ್ಠಾದಲ್ಲಿ ಎದುರಾದ ಸಮಸ್ಯೆಗಳು, ನಾಗರಿಕರಿಗೆ ನಿಗದಿತ ಅವಧಿಗೆ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಅನುಸರಿಸಲಾದ ಕೆಲವು ಕ್ರಮಗಳು, ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಿ, ಅವರ ಅಗತ್ಯಕ್ಕೆ ತಕ್ಕಂತೆ ಸೂಕ್ತ ಮಾರ್ಪಾಡುಗಳನ್ನು ಯೋಜನೆಯಲ್ಲಿ ಅಳವಡಿಸಿರುವ ಬಗ್ಗೆ ಇದೇ ಸಂದರ್ಭದಲ್ಲಿ ಡಾ:ಶಾಲಿನಿ ರಜನೀಶ್ ವಿವರಿಸಿದರು. ನಾಗರಿಕ ಸೇವಾ ಖಾತರಿ ಅಧಿನಿಯಮವನ್ನು ಬಲಪಡಿಸುವ ನಿಟ್ಟಿನಲ್ಲಿ ಇ–ಆಡಳಿತ ಕಾರ್ಯಕ್ರಮಗಳನ್ನು ಬಳಸಿಕೊಳ್ಳುವಂತೆ ಅವರು ಕರೆ ನೀಡಿದರು.

ಭ್ರಷ್ಟಾಚಾರದ ವಿರುದ್ಧ ಸಮ್ಮೇಳನ (ಕೊಕೊ)ಸ್ಥಳ ಛನ್ಸರಿ ಪೆವಿಲಿಯನ್, ಬೆಂಗಳೂರು ಸಕಾಲ ಮಿಷನ್ ನಿರ್ದೇಶಕರು ಸಕಾಲದ ಬಗ್ಗೆ ವಿವರಿದರು ಹಾಗೂ ಹೇಗೆ ಸಕಾಲದಿಂದ ಭಷ್ಟಾಚಾರವನ್ನು ಹತ್ತಿಕ್ಕಬಹುದು ಎಂಬುದನ್ನು ಸಭೆಗೆ ವಿವರಿಸಿದರು.



ಜನವರಿ 10ರಂದು ಜಾರ್ಕಾಂಡ್ ನಲ್ಲಿ ವಿಶ್ವಬ್ಯಾಂಕ್ ಸಹಯೋಗದೊಂದಿಗೆ ಭಾರತ ಸರಕಾರವು ಆಯೋಜಿಸಿದ್ದ "ಸಾರ್ವಜನಿಕರ ಸೇವೆಗಳ ಹಕ್ಕು" ಕಾರ್ಯಗಾರ: 'ಸಕಾಲ ಮಿಷನ್' ನ ರಾಜ್ಯ ತಾಂತ್ರಿಕ ಸಮಾಲೋಚಕರು ಶ್ರೀ ಭರತ್ ರಾಮ್ ಶಂಕರ್ ಸಕಾಲದ ಬಗ್ಗೆ ನೆರೆದಿದ್ದ ಹಲವಾರು ರಾಜ್ಯಗಳ ಕಾರ್ಯದರ್ಶಿಗಳಿಗೆ ವಿವರಿಸಿದರು.




ದಿನಾಂಕ 24/01/2014ರಂದು ಗದಗ- ಶಿರಹಟ್ಟಿ ತಾಲೂಕ ಹರಿಪೂರ ಗ್ರಾಮದಲ್ಲಿರುವ ಶ್ರೀ ಫಕ್ಕೀರೇಶ್ವರ ಪದವಿಪೂರ್ವ ಕಾಲೇಜಿನಲ್ಲಿ ಸಕಾಲ ಯೋಜನೆಯ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಲಾಯಿತು.ಸಕಾಲ ಯೋಜನೆ ಅಂದರೇನು?ಅದರಿಂದಾಗುವ ಲಾಭಗಳ ಬಗ್ಗೆ ತಿಳಿಸಿಕೊಡಲಾಯಿತು ಇದರಲ್ಲಿ 470 ಸೇವೆಗಳು 42 ಇಲಾಖೆಗಳು ಬರುತ್ತವೆ ಎಂದು ಹೇಳಲಾಯಿತು.ಮುಖ್ಯವಾಗಿ ಶಿಕ್ಷಣ ಇಲಾಖೆ ಕಂದಾಯ ಇಲಾಖೆ ಗ್ರಾಮೀಣಾಭಿವೃದ್ಧಿ ಇಲಾಖೆಗಳ ಬಗ್ಗೆ ವಿದ್ಯಾರ್ಥಿಗಳಾದ ಮೋಹನ ದೇಸಾಯಿಪಟ್ಟಿ.ರವೀಂದ್ರ ಬಾಳಿಗೇರಿ ಮಂಜುನಾಥ ಮೂರಶೀಳ್ಳಿ ಚರ್ಚೆ ಮಾಡಿದರು.ವಿದ್ಯಾರ್ಥಿನಿಯರಾದ ಸವಿತಾ ಬಂಕಾಪೂರ ಸುನಿತಾ ಮೂರಶೀಳ್ಳಿ ಸವಿತಾ ಕಾಳಗಿ ಸಕಾಲ ಯೋಜನೆ ಉತ್ತಮವಾದ ನಾಗರೀಕರಿಗೆ ಸಹಾಯಕವಾದ ಯೋಜನೆ ಆಗಿದೆ ಇದರಿಂದಾ ಎಲ್ಲ ವರ್ಗದ ಜನರಿಗೆ ಸರಕಾರದ ಯೋಜನೆ ಬಗ್ಗೆ ತಿಳುವಳಿಕೆ ಮೂಡುವುದ,ಹಾಗೂ ಅಧಿಕಾರಿಗಳಿಗೆ ನಿಗದಿತ ಸಮಯದೊಳಗೆ ಸೇವೆಗಳನ್ನು ಪೂರೈಸಬೇಕು ಎಂಬ ಜವಾಬ್ದಾರಿ ಇರುತ್ತದೆ ಎಂದು ತಮ್ಮ ತಮ್ಮ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದರು,ಇದರಿಂದಾ ತಾವು ಅಲ್ಲದೇ ಇತರರಿಗೂ ಸಕಾಲ ಯೋಜನೆ ಬಗ್ಗೆ ಅರಿವು ಮೂಡಿಸಬೇಕು ಎಂದು ಅವರಲ್ಲಿ ಕೋರಲಾಯಿತು,



ಸಕಾಲ ಸಹಾಯ ಕೇಂದ್ರದ ಶ್ರೀ ಇಂದುಧರ್, ಸದಾಮ್ ಹುಸೇನ್ ಹಾಗೂ ಯೋಗೇಂದ್ರ ರವರ ಕೂಡಿ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಸಕಾಲದ ಬಗ್ಗೆ ಜಾಗೃತಿ ಮೂಡಿಸಲು ಹಮ್ಮಿಕೊಂಡಿದ್ದ ಕಾರ್ಯಕ್ರಮದ ದೃಶ್ಯ.





ದಿನಾಂಕ: 10.01.2014 ರಂದು ಬೆಂಗಳೂರಿನಲ್ಲಿ ಸಾರ್ವಜನಿಕ ಸೇವೆಗಳ ವಿತರಣೆ – " ಸಕಾಲ " ಕುರಿತು ಪ್ರಾಂತೀಯ ಮಟ್ಟದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು, ಆಡಳಿತಾತ್ಮಕ ತರಬೇತಿ ಕೇಂದ್ರದ ಡಾ॥ ಅಮಿತಾ ಪ್ರಸಾದ್, ಪ್ರಧಾನ ಕಾರ್ಯದರ್ಶಿಗಳು, ಶ್ರೀಯುತ ಮನೋಜ್ ಆರ್ಯ, ಸಕಾಲ ಮಂಡಳಿಯ ಅಪರ ನಿರ್ದೇಶಕರು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಇದರಲ್ಲಿ ರಾಜ್ಯದ ಎಲ್ಲಾ ಪ್ರಾಂತ್ಯದ 42 ಇಲಾಖೆಗಳ ಅಧಿಕಾರಿಗಳಿಗೆ ಸಕಾಲದ ಬಗ್ಗೆ ವಿಸ್ತೃತವಾಗಿ

ತಿಳಿಸಲಾಯಿತು, ಹಾಗೂ ಸಕಾಲದ ಸೇವೆಗಳಿಂದ ಆಡಳಿತಾತ್ಮಕ ಬೆಳವಣಿಗೆಗಳನ್ನು ಸಾಧಿಸಬಹುದು ಎಂಬುದರ ಬಗ್ಗೆ ಮಂಡಳಿಯ ಅಪರ ನಿರ್ದೇಶಕರು ತಿಳಿಸಿದರು.




ಸಕಾಲ ಕುರಿತ ಪ್ರಾಂತೀಯ ಮಟ್ಟದ ಕಾರ್ಯಾಗಾರದಲ್ಲಿ 42 ಇಲಾಖೆಗಳ ಅಧಿಕಾರಿಗಳಿಗೆ 'ಸಕಾಲ' ಸೇವೆಗಳ ಪ್ರಗತಿ ಬಗ್ಗೆ ತರಬೇತಿ / ಮಾಹಿತಿ ನೀಡುತ್ತಿರುವ ಡಾ॥ ಅಮಿತಾ ಪ್ರಸಾದ್

**ಸರ್ವೋತ್ತಮ ಪ್ರಶಸ್ತಿ:** ದಿನಾಂಕ 26.01.2014 ರಂದು ರಾಜಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 11 ಪ್ರತಿಭಾವಂತ ಅಧಿಕಾರಿಗಳಿಗೆ ಗೌರವನ್ವಿತ ರಾಜ್ಯಪಾಲರಾದ ಶ್ರೀ ಹಂಸರಾಜ್ ಭಾರಧ್ವಾಜ್, ಶ್ರೀ ಸಿದ್ದರಾಮಯ್ಯ, ಮಾನ್ಯ ಮುಖ್ಯ ಮಂತ್ರಿಗಳು, ಪ್ರಶಸ್ತಿ ಪ್ರಧಾನ ಮಾಡಿದರು. ಶ್ರೀ ಕೌಶಿಕ್ ಮುಖರ್ಜಿ, ಸರಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಕರ್ನಾಟಕ ಸರಕಾರಿ ನೌಕರರ ಸಂಘದ ಅಧ್ಯಕ್ಷರಾದ ಭೈರಪ್ಪರವರು ಉಪಸ್ಥಿತರಿದ್ದರು



ಪ್ರಶಸ್ತಿ ವಿಜೇತರು ಪ್ರಶಸ್ತಿಗಳೊಂದಿಗೆ ಮಾನ್ಯ ಗಣ್ಯರ ಜೊತೆ ದೃಶ್ಯ

# "ಸರ್ವೋತ್ತಮ ಸೇವಾ ಪ್ರಶಸ್ತಿ ಪುರಸ್ಕೃತರ ವಿವರ"
# 2013–14

**ಡಾ. ಬಿ.ಆರ್.ಮಮತ**
ಜಂಟಿ ನಿರ್ದೇಶಕರು,
ವಾರ್ತಾ ಇಲಾಖೆ ಹಾಗೂ
ನೋಡಲ್ ಅಧಿಕಾರಿ(ಪ್ರಚಾರ)
ಸಕಾಲ ಮಿಷನ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ (ಆಡಳಿತ ಸುಧಾರಣೆ)
ಬೆಂಗಳೂರು.



ವಾರ್ತಾ ಇಲಾಖೆಯಲ್ಲಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವರ ಜೊತೆ ಜೊತೆ 'ಸಕಾಲ'(ಕರ್ನಾಟಕ ಸಕಾಲ ಸೇವೆಗಳ ಕಾಯ್ದೆ –2011) ಯೋಜನೆಯ ಬಗ್ಗೆ ಎವೆರ್ಟ್ ರೋಜರ್ ಅವರ ಸಿದ್ಧಾಂತದಂತೆ ಸಾರ್ವಜನಿಕರಿಗೆ ಸಾಕಷ್ಟು ಅರಿವು ಮೂಡಿಸುವ ಹಾಗೂ ಈ ಯೋಜನೆಯಲ್ಲಿ ಹೆಚ್ಚಿನ ಜನರು ತೊಡಗುವಂತೆ ಪ್ರೇರೇಪಿಸಲು ವಿನೂತನವಾದ ಬಹುಮಾಧ್ಯಮಗಳ ಬಳಕೆ ಹಾಗೂ ಮಾಹಿತಿ, ಶಿಕ್ಷಣ ಮತ್ತು ಸಂವಹನ ತಂತ್ರಗಳನ್ನು ರೂಪಿಸುವಲ್ಲಿ ಅತೀವ ಆಸಕ್ತಿಯನ್ನು ಅವರು ತೋರಿದ್ದಾರೆ. ಸಕಾಲ ಯೋಜನೆಯ ಪರಿಣಮಕಾರಿ ಅನುಷ್ಠಾನಕ್ಕಾಗಿ ಅವರು ಕೈಗೊಂಡ ಕೆಲವು ಪ್ರಮುಖ ಹೆಜ್ಜೆಗಳು ಇಂತಿವೆ:

- ನಾಗರಿಕ ಚಟುವಟಿಕೆಗಳಲ್ಲಿ ನಾಗರೀಕರು ಪೂರಕವಾಗಿ ತೊಡಗುವಂತೆ ಮಾಡುವುದು.
- ಶಾಲಾ ಚಟುವಟಿಕೆಯಲ್ಲೂ ಸಕಾಲವನ್ನು ಒಳಪಡಿಸುವುದು ಹಾಗೂ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳು ವರ್ಷ ಪೂರ್ತಿ ಸಕಾಲ ಅರಿವು ಕಾರ್ಯಕ್ರಮದಲ್ಲಿ ಸಹಭಾಗಿಗಳನ್ನಾಗಿ ಮಾಡುವುದು. ಇದರಲ್ಲಿ ಮನೆ ಮನೆ ಪ್ರಚಾರ, ಪ್ರಚಾರ ಸಾಮಗ್ರಿಯನ್ನು ವಿನ್ಯಾಸಗೊಳಸುವುದು, ಸಮೀಕ್ಷೆ ನಡೆಸುವುದು ಹಾಗೂ ಜಾಗೃತಿ ಕಾರ್ಯಕ್ರಮಗಳ ಮೌಲ್ಯಮಾಪನ ಮಾಡುವುದು ಸೇರಿದೆ.
- ನಾಗರಿಕರು ಹಾಗೂ ಕರ್ನಾಟಕ ರಾಜ್ಯ ನೌಕರರ ಸಂಘಗಳೂ ಸೇರಿದಂತೆ ಸಕಾಲ ಯೋಜನೆಯ ವ್ಯಾಪ್ತಿಗೆ ಒಳಪಡುವ ಎಲ್ಲರಿಗೂ ಕಾರ್ಯಾಗಾರಗಳನ್ನು ಏರ್ಪಡಿಸುವುದು.
- ಗ್ರಾಮೀಣ ಪ್ರದೇಶದಲ್ಲಿರುವ ಕಟ್ಟಕಡೆಯ ಜನರಿಗೂ ಅರಿವು ಮೂಡಿಸಲು ಬೀದಿನಾಟಕ, ಜಾನಪದ ನೃತ್ಯ ಹಾಗೂ ಸಂಗೀತ ಕಾರ್ಯಕ್ರಯಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು.
- ಸರ್ಕಾರದ ಪ್ರಚಾರಾಂದೋಲನಕ್ಕೆ ಫೇಸ್‌ಬುಕ್, ಟ್ವಿಟರ್‌ಗಳಂತಹ ಸಾಮಾಜಿಕ ಜಾಲಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಉಪಯೋಗಿಸುವುದು.
- ಮಾಧ್ಯಮಗಳಿಗೆ ಸೂಕ್ತ ಹಾಗೂ ಸುಸ್ಥಿರವಾಗಿ ಸಕಾಲ ಮಾಹಿತಿಯನ್ನು ರವಾನಿಸುವುದು.
- ಹೆಚ್ಚು ಹೆಚ್ಚು ಜನರಿಗೆ ಸಕಾಲದ ಬಗ್ಗೆ ಜಾಗೃತಿ ಮೂಡಿಸಲು ಅಸಂಪ್ರದಾಯಿಕ ಸಂಪನ್ಮೂಲಗಳು ಹಾಗೂ ಉಚಿತವಾದ ಪ್ರಚಾರ ತಂತ್ರಗಳನ್ನು ಬಳಸುವುದು.
- ಪೋರ್ಟಲ್, ಬ್ಲಾಗ್, ಸರ್ಕಾರಿ ವೆಬ್‌ಸೈಟ್ ಮುಂತಾದ ಹೊಸ ಮಾಧ್ಯಮಗಳನ್ನು ಪ್ರಚಾರಕ್ಕಾಗಿ ಬಳಸಿಕೊಳ್ಳುವುದು.
- ಸರ್ಕಾರದ ಇಂತಹದೊಂದು ಅಭಿಯಾನದಲ್ಲಿ ಇದೇ ಪ್ರಪ್ರಥಮ ಬಾರಿಗೆ ಸಕಾಲ ಯೋಜನೆಯ ಪರಿಣಾಮದ ಬಗ್ಗೆ ಮೂರನೇ ವ್ಯಕ್ತಿಯಿಂದ ಮೌಲ್ಯಮಾಪನ ಮಾಡಿಸಿರುವುದು. ಲೋಪದೋಷಗಳನ್ನು ಸರಿಪಡಿಸಲು ಸಾಮಾಜಿಕ ಆಡಿಟ್ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿರುವುದು.

ಈ ಎಲ್ಲಾ ಕ್ರಮಗಳು ಯೋಜನೆಯು ಅತ್ಯಂತ ಯಶಸ್ವಿಯಾಗಲು ನೆರವಾಯಿತು. ಈ ಸಂವಹನಾ ಕಾರ್ಯತಂತ್ರಗಳ ಬಗ್ಗೆ ವಿಶ್ವಬ್ಯಾಂಕ್‌ನ ಪ್ರತಿನಿಧಿಗಳು, ಭಾರತದ ಸರ್ಕಾರದ ಅಧ್ಯಯನ ತಂಡ, ರಾಜ್ಯಸ್ಥಾನದ ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಸಹ ಪ್ರಶಂಸೆ

ವ್ಯಕ್ತವಾಗಿದೆ. ರಾಜಸ್ಥಾನ ಸರ್ಕಾರವು ಸರ್ಕಾರದ ಕಾರ್ಯಕ್ರಮಗಳನ್ನು ಜನಪ್ರಿಯಗೊಳಸಲು ಇದೇ ತೆರೆನಾದ ಸಂವಹನ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಷ್ಠಾನಗೊಳಸುವಂತೆ ಅಧಿಕಾರಿಗಳಗೆ ನಿರ್ದೇಶನ ನೀಡಿದೆ.

**ಶ್ರೀಮತಿ ಉಮಾದೇವಿ ಆರ್.ಎಸ್.**
ಉಪ ನಿರ್ದೇಶಕರು (ಖಜಾನೆ-2)
ಖಜಾನೆ ಇಲಾಖೆ,
ಬೆಂಗಳೂರು.



**ಯೋಜನೆಯ ಶೀರ್ಷಿಕೆ:**
**ಖಜಾನೆಗಳಲ್ಲಿ ಸಾಮಾಜಿಕ ಭದ್ರತಾ ಪಿಂಚಣಿಗಳ ಪಾವತಿಯಲ್ಲಿ ಇ-ಮನಿಆರ್ಡರ್ ಪದ್ಧತಿ ಜಾರಿ.**

- 1997ರ ಪರಿಕ್ಷಾರ್ಥ ಜಿಲ್ಲಾ ಖಜಾನಾಧಿಕಾರಿ ಹುದ್ದೆಗೆ ಖಜಾನೆ ಇಲಾಖೆಯಲ್ಲಿ ನೇಮಕ.

- ಖಜಾನೆ ತಂತ್ರಾಂಶದ ಜಾರಿ ಪ್ರಕ್ರಿಯೆ ಸಂಬಂಧ ಪೂರ್ವಭಾವಿ ಸಿದ್ದತೆಯ ಜವಾಬ್ದಾರಿ ಹಾಗೂ ತಂತ್ರಾಂಶ ಕಾರ್ಯರೂಪಕ್ಕೆ ತರುವಲ್ಲಿ ಬಟವಾಡೆ ಅಧಿಕಾರಿಗಳು, ಖಜಾನೆ ಸಿಬ್ಬಂದಿಗಳ ತರಬೇತಿ ಮಾಸ್ಟರ್‌ಗಳ ರಚನೆ ಹಾಗೂ ತಂತ್ರಾಂಶದ ಜಾರಿಯ ಕಾರ್ಯ.

- ಎಲ್ಲಾ ಜಿಲ್ಲಾ ಖಜಾನೆಗಳಂದ ಪ್ರಥಮ ಬಾರಿಗೆ ದೋಷರಹಿತ ಪರಿಪೂರ್ಣ ವರ್ಗೀಕೃತ ಸಂಕಲನ ಲೆಕ್ಕದ ಸಲ್ಲಿಸುವಿಕೆಯ ಮೇಲ್ವಿಚಾರಣೆ ವಹಿಸಿ ಮಹಾಲೇಖಪಾಲರ ಕಚೇರಿಗೆ ಸಂಪರ್ಕ ಅಧಿಕಾರಿಯಾಗಿ ಹಾಗೂ ಸಾಮಾಜಿಕ ಭದ್ರತಾ ಪಿಂಚಣಿ ಕುರಿತಂತೆ World Bank study ಯಲ್ಲಿ ಕಾರ್ಯನಿರ್ವಹಿಸಿರುತ್ತಾರೆ.

- ಬೆಂಗಳೂರು ನಗರ ಜಿಲ್ಲಾ ಖಜಾನೆಯಲ್ಲಿ RBI SBM Agency Bank ವರ್ಗಾವಣೆಯಾದಾಗ ವಿಳಂಬಗೊಂಡ ಲೆಕ್ಕವನ್ನು ನಿರ್ವಹಿಸುವ ಜವಾಬ್ದಾರಿ. ನೂತನ agency Bank ನಲ್ಲಿ ಆಗುತ್ತಿದ್ದ ಲೆಕ್ಕದಲ್ಲಿನ ತಪ್ಪುಗಳನ್ನು ಹಂತಹಂತವಾಗಿ ಬ್ಯಾಂಕಿನೊಂದಿಗೆ ವ್ಯವಹರಿಸಿ ಸಂಪೂರ್ಣ ಲೆಕ್ಕ ಸಲ್ಲಿಸುವ ಹಾಗೂ ಸ್ಥಿರತೆಯನ್ನು ಕಾಪಾಡುವ ಜವಾಬ್ದಾರಿಯನ್ನು ನಿರ್ವಹಿಸಿ 'ಖಜಾನೆ' ತಂತ್ರಾಂಶದ ಅಂಗವಾಗಿ ಜಾರಿಗೊಳಸಿದ 'Budget control' ಸಂಬಂಧ ರಾಜ್ಯದ್ಯಂತ ತಂಡಗಳಲ್ಲಿ ಪ್ರವಾಸ ಕೈಗೊಂಡು ಖಜಾನೆ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳಗೆ ತರಬೇತಿ ನೀಡಿರುತ್ತಾರೆ.

- ಪಿಂಚಣಿ ಬಟವಾಡೆಗೆ ಖಜಾನೆಯಲ್ಲಿ 'Pensioner's database' ಹಾಗೂ 'System Pension Calculator' ಸಿದ್ಧಪಡಿಸಿ, ಪಾವತಿಯಾಗುತ್ತಿದ್ದ ಪಿಂಚಣಿಗಳ audit ನಿಂದ ಹಲವಾರು ಕೋಟಿ ರೂಗಳ ತಪ್ಪು/ಹೆಚ್ಚಿನ ಪಾವತಿಯನ್ನು ಗುರುತಿಸುವಲ್ಲಿ ಸಫಲರಾಗಿರುತ್ತಾರೆ.

- ಅತೀ ಸರಳೀಕೃತ, ನಿಗದಿತ ಅವಧಿಯ ಹಾಗೂ ಪ್ರಜಾಸ್ನೇಹಿ ಆದ ಇ-ಮನಿಆರ್ಡರ್ ಪದ್ಧತಿಯನ್ನು ಹಾಗೂ ವಾಣಿಜ್ಯ ತೆರಿಗೆ ಇಲಾಖೆಯ 'e-payment' ಯಶಸ್ವಿಯಾಗಿ ಜಾರಿಗೊಳಸಿದ್ದು, ಇದಕ್ಕಾಗಿ ಸರ್ಕಾರದಿಂದ 'ಅಭಿನಂದನಾ ಫಲಕ' ಪಡೆದಿರುತ್ತಾರೆ.

- ಖಜಾನೆ ಸಂಹಿತೆಯಲ್ಲಿ 'ಖಜಾನೆ-I' 'ಖಜಾನೆ-II' ಯಲ್ಲಿನ BPRಗಳಗೆ ಪೂರಕವಾಗಿ ತಿದ್ದುಪಡಿಗಳನ್ನು ಸೂಚಿಸುವ ಗುರುತಿಸುವ 'Expert Committee' ತಂಡದ ಸದಸ್ಯೆಯಾಗಿ ಕಾರ್ಯನಿರ್ವಹಿಸಿದ್ದಾರೆ.




**ಡಾ.ಎಚ್.ಎಲ್.ನಾಗರಾಜು, ಕೆ.ಎ.ಎಸ್.,**
ತಹಶೀಲ್ದಾರರು ಹಾಗೂ ತಾಲ್ಲೂಕು ದಂಡಾಧಿಕಾರಿಗಳು,
ಚನ್ನರಾಯಪಟ್ಟಣ, ಹಾಸನ ಜಿಲ್ಲೆ.

**ಅಧಿಕಾರಿಯ ಸಾಧನೆಯ ಸಂಕ್ಷಿಪ್ತ ವರದಿ :–**

ಕರ್ನಾಟಕ ಆಡಳಿತ ಸೇವಾ ಅಧಿಕಾರಿಯಾಗಿದ್ದು, ಚೈತನ್ಯಯುತ ಕಾರ್ಯ ಚಟುವಟಿಕೆ, ಸಾಮಾಜಿಕ–ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳಿಂದ ಚನ್ನರಾಯಪಟ್ಟಣ ತಾಲ್ಲೂಕಿನ ಸಾರ್ವಜನಿಕರ ಪ್ರೀತಿ ಪಾತ್ರರಾಗಿರುತ್ತಾರೆ. ಆರ್.ಟಿ.ಸಿ. ಮತ್ತು ಖಾತಾ ಕ್ಯಾಂಪೈನ್‌ಗಳು, ಸರ್ಕಾರಿ ಜಮೀನು ಮತ್ತು ಸ್ವತ್ತುಗಳ ಸಂರಕ್ಷಣೆ, ಖನಿಜ ಸಂಪನ್ಮೂಲಗಳ ಸಂರಕ್ಷಣೆ, ಅಕ್ರಮ ಮರಳುಗಾರಿಕೆಗೆ ತಡೆದು ರೂ. 260 ಲಕ್ಷ ಮೊತ್ತದ ದಂಡ ವಿಧಿಸಿ ಸರ್ಕಾರದ ಬೊಕ್ಕಸವನ್ನು ವೃದ್ಧಿಸಿರುತ್ತಾರೆ. ಗ್ರಾಮ ದರ್ಶನ ಮತ್ತು ಜನ ಸಂಪರ್ಕ ಕಾರ್ಯಕ್ರಮಗಳ ಆಯೋಜನೆ, ಅರಣ್ಯ ಸಂರಕ್ಷಣೆ ಮತ್ತು ಸಸಿ ನೆಡುವಿಕೆ, ಉಚಿತ ಆರೋಗ್ಯ ತಪಾಸಣಾ ಶಿಬಿರಗಳ ಹಾಗೂ ಕ್ಯಾನ್ಸರ್ ತಪಾಸಣೆ ಶಿಬಿರ ಆಯೋಜಿಸಲಾಗಿ ಸುಮಾರು 10000 ರೋಗಿಗಳನ್ನು ಪರೀಕ್ಷಿಸಿ ಉಚಿತವಾಗಿ ಔಷಧಿಗಳನ್ನು ವಿತರಿಸಿ ಜನಮನ್ನಣೆಗೆ ಪಾತ್ರರಾಗಿರುತ್ತಾರೆ. ದಾನಿಗಳ ಸಹಾಯದಿಂದ ಕೃಷ್ಣರಾಜಪೇಟೆ ಮತ್ತು ಮದ್ದೂರು ತಾಲ್ಲೂಕು ಕಛೇರಿಗಳ ಆವರಣದಲ್ಲಿ ಕಂದಾಯ ಗ್ರಂಥಾಲಯ ಮತ್ತು ಕ್ರೀಡಾ ಕ್ಲಬ್‌ಗಳ ಪ್ರಾರಂಭ ಮಾಡಿ ಜನಮಿತ್ರರಾಗಿರುತ್ತಾರೆ. ಕಂದಾಯ ಇಲಾಖೆಯ ಸಿಬ್ಬಂದಿಯಲ್ಲಿ ಕಾರ್ಯದಕ್ಷತೆ ಮತ್ತು ಸಾಮರ್ಥ್ಯವನ್ನು ವೃದ್ಧಿಸಿ, ಪ್ರಾಮಾಣಿಕತೆಯನ್ನು ರೂಪಿಸಿಕೊಳ್ಳುವ ದೃಷ್ಟಿಯಿಂದ ಹಾಗೂ ಭ್ರಷ್ಟಾಚಾರ ರಹಿತ ಸೇವೆಯನ್ನು ಒದಗಿಸಿ ಸಾರ್ವಜನಿಕರಿಗೆ ವಿಳಂಬರಹಿತವಾದ ಗುಣಮಟ್ಟದ ಸೇವೆ ಸಿಗುವಂತಾಗಲು ವಿವಿಧ ತರಬೇತಿ ಕಾರ್ಯಗಳನ್ನು ನಡೆಸಿದ್ದಾರೆ. ದಾನಿಗಳ ನೆರವು ಪಡೆದು ಕಂದಾಯ ಗ್ರಂಥಾಲಯ ಹಾಗೂ ಸ್ಪೋರ್ಟ್ಸ್ ಕ್ಲಬ್ ತೆರೆದಿದ್ದಾರೆ. ಗ್ರಾಮಾಂತರ ಪ್ರದೇಶದಿಂದ ಬರುವ ಸಾರ್ವಜನಿಕರಿಗೆ ಕಚೇರಿಯಲ್ಲಿ ಕುಡಿಯುವ ನೀರು, ಶೌಚಾಲಯ, ವಾಹನ ಪಾರ್ಕಿಂಗ್, ಕಚೇರಿಯಲ್ಲಿ ಸಿ.ಸಿ.ಟಿ.ವಿ. ಅಳವಡಿಕೆ ಮಾಡಿಸಿ ಕಾರ್ಯಕ್ಷಮತೆ ವೃದ್ಧಿಸಿ ವಿಳಂಬ ರಹಿತ ಆಡಳಿತ ನೀಡಲು ಪ್ರಯತ್ನಿಸಿದ್ದಾರೆ.

ಐ.ಎ.ಎಸ್ / ಕೆ.ಎ.ಎಸ್. ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಗ್ರಾಮೀಣ ವಿಧ್ಯಾರ್ಥಿಗಳಿಗೆ ಅನುಕೂಲವಾಗಲೆಂದು ವಿಶೇಷ ಗ್ರಂಥಾಲಯ ತೆರೆದು ಮೈಸೂರಿನ ಜ್ಞಾನ ಬುತ್ತಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ತರಬೇತಿ ಕೇಂದ್ರ, ಹಾಸನ, ಮಂಡ್ಯ ಮುಂತಾದ ಸ್ಥಳಗಳಲ್ಲಿ ತಾವು ಕಾರ್ಯನಿರ್ವಹಿಸಿದ ತಾಲ್ಲೂಕು ಕೇಂದ್ರಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ಕೇಂದ್ರಗಳನ್ನು ತೆರೆದು ತಾವೇ ಸ್ವತಃ ತರಬೇತಿ ನೀಡಿರುತ್ತಾರೆ. ಸರ್ಕಾರದ ನೂತನ ಯೋಜನೆಗಳಾದ ಸಕಾಲ ಹಾಗೂ ಸಾಮಾಜಿಕ ಭದ್ರತಾ ಯೋಜನೆಗಳ ಜಾರಿಗೆ ವಿಶೇಷ ಆದ್ಯತೆ ನೀಡಿದ್ದು, ಇವರ ಕ್ರಿಯಾಶೀಲತೆ, ಪ್ರಾಮಾಣಿಕತೆ ಹಾಗೂ ಕಾರ್ಯ ಪ್ರವೃತ್ತಿಯನ್ನು ಗಮನಿಸಿದ ರಾಜ್ಯ ಸರ್ಕಾರ ಉತ್ತರಖಾಂಡ್ ರಾಜ್ಯದಲ್ಲಿ ಜೂನ್ 2013ರಲ್ಲಿ ನಡೆದ ಪ್ರಕೃತಿ ವಿಕೋಪ ಸಂಭವಿಸಿದಾಗ ಸಂತ್ರಸ್ಥರ ರಕ್ಷಣೆಗಾಗಿ ನಿಯೋಜಿಸಲ್ಪಟ್ಟಿದ್ದು, ಇವರ ಕಾರ್ಯನಿರ್ವಹಣೆಯಿಂದ ಮುಖ್ಯಮಂತ್ರಿಗಳ ಪ್ರಶಂಸೆಗೆ ಪಾತ್ರರಾಗಿರುತ್ತಾರೆ.

ಶಬ್ಬೀರಬಾಷ ಗಂಟಿ,
ಸಹಾಯಕ ಆಯುಕ್ತರು,
ವಾಣಿಜ್ಯ ತೆರಿಗೆ ಇಲಾಖೆ,
ಬಿಜಾಪುರ



**ಯೋಜನೆಯ ಶೀರ್ಷಿಕೆ:**
**ಇ–ಪಾವತಿ ಮತ್ತು ಇ–ಫೈಲಿಂಗ್ ಜಾರಿಗೊಳಿಸಿರುವುದು**

ಕಚೇರಿಯಲ್ಲಿ ನೋಂದಣಿಯನ್ನು ಹೊಂದಿರುವ ವರ್ತಕರಿಗೆ ತಿಳುವಳಿಕೆ ನೀಡಿ, ಇಲಾಖೆಯು ಜಾರಿಗೆ ತಂದಾಗಿನಿಂದ ಶೇ 100 ರಷ್ಟು ಇ-ಪಾವತಿ ಮತ್ತು ಇ-ಫೈಲಿಂಗ ಜಾರಿ ಮಾಡಿ ಕಳೆದ ಎರಡೂವರೇ ವರ್ಷದಿಂದ ಕಚೇರಿಯ ತೆರಿಗೆ ಸಂಗ್ರಹಣೆಯಲ್ಲಿ ಯಾವುದೇ ನಗದು ರಶೀದಿ ಮಾಡದೇ, ಚೆಕ್ಕು ಮತ್ತು ಚಲನ್ ಸಂಗ್ರಹಿಸದೇ, ಸಂಪೂರ್ಣವಾಗಿ ಇ-ಪಾವತಿ ಮಾಡಿರುತ್ತಾರೆ.

ಸಕಾಲ ಯೋಜನೆ ಜಾರಿಗೆ ಬಂದಾಗಿನಿಂದ ಇಂದಿನ ವರೆಗೆ ಯಾವುದೇ ರೀತಿಯ ವಿಳಂಬವಿಲ್ಲದೆ ಅರ್ಜಿಗಳ ವಿಲೇವಾರಿ ಹಾಗೂ ಕಚೇರಿಯಲ್ಲಿ ಸಮಯ ಪರಿಪಾಲನೆ. ಅರ್ಜಿಗಳ ಶೀಘ್ರ ವಿಲೇವಾರಿ ಮಾಡುವುದರೊಂದಿಗೆ, ಸಾರ್ವಜನಿಕ ಸೇವೆಯಲ್ಲಿ ವಿಳಂಬವನ್ನು ತಡೆಗಟ್ಟುವುದು ಹಾಗೂ ನಾಗರೀಕ ಸ್ನೇಹಿಯಾಗಿ ಕಾರ್ಯನಿರ್ವಹಿಸುವುದು.

ಕಚೇರಿಯಲ್ಲಿ ಎಲ್ಲಾ ಕಾಯ್ದೆಯ ತೆರಿಗೆ ಸಂಗ್ರಹಣೆಯ ಅಭಿವೃದ್ಧಿ ದರವು ಶೇ. 26 ರಷ್ಟು ಇರಿಸಿ, ಕಚೇರಿಯ ಎಲ್ಲ ಕಡತ ಹಾಗೂ ದಾಖಲಾತಿಗಳನ್ನು ದಾಖಲಾತಿಗಳ ಕೊಠಡಿಯಲ್ಲಿ ವ್ಯವಸ್ಥಿತವಾಗಿ ಹಾಗೂ ಸುಸ್ಥಿತಿಯಲ್ಲಿ ಕಾಯ್ದಿರಿಸುವ ಮೂಲಕ ಇತರರಿಗೆ ಮಾದರಿಯಾಗಿರುತ್ತಾರೆ.

ವಾಣಿಜ್ಯ ತೆರಿಗೆ ಸಲಹೆಗಾರರು ನಡೆಸುವ ಪ್ರತಿ ಮಾಸಿಕ ಸಭೆಯಲ್ಲಿ ಇಲಾಖೆಯ ಕಾಯ್ದೆ ಕಾನೂನುಗಳಲ್ಲಾದ ಬದಲಾಣೆ ಹಾಗೂ ಇ-ಆಡಳಿತದಲ್ಲಾದ ಬದಲಾವಣೆಯ ಕುರಿತು ಮಾಹಿತಿ ಮತ್ತು ತಿಳುವಳಿಕೆಯನ್ನು ನೀಡುವುದರೊಂದಿಗೆ ಕಚೇರಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಅನೋಂದಾಯಿತ ವರ್ತಕರಿಗೆ ನೋಂದಣಿಯನ್ನು ನೀಡಿ ರಾಜ್ಯದ ರಾಜಸ್ವದ ಒಳ ಹರಿವನ್ನು ಹೆಚ್ಚಿಸಿರುತ್ತಾರೆ.

**ಎಂ.ಎಸ್.ಚಂದ್ರಶೇಖರ್**
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ
ವಾಹನ ಚಾಲಕ, ಕರ್ನಾಟಕ ಸರ್ಕಾರ



ದಿನಾಂಕ:17.09.2013ರಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ವಾಹನ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ, ಇವರು ಮಾನ್ಯ ಸಚಿವರ ಅಧಿಕೃತ ವಾಹನದಲ್ಲಿ ತೀರ್ಥಹಳ್ಳಿಯಿಂದ ಬೆಂಗಳೂರಿಗೆ ಪ್ರಯಾಣ ಮಾಡುತ್ತಿರುವಾಗ ತೀರ್ಥಹಳ್ಳಿಯಿಂದ ಸುಮಾರು 20 ಕಿ.ಮೀ. ದೂರದ ಬೇಗುವಳ್ಳಿ ಸಮೀಪದ ಕೆರೆಯಲ್ಲಿ ಮುಂಜಾನೆ ಬೆಳಗ್ಗೆ 07.00 ಘಂಟೆಗೆ ಮುಳುಗುತ್ತಿದ್ದ ವಾಹನವನ್ನು ಹಾಗೂ ವಾಹನದೊಳಗಿನ ಪ್ರವಾಸಿಗರು ರಕ್ಷಿಸುವಂತೆ ಮೊರೆ ಇಡುವುದನ್ನು ನೋಡಿ ಅದರಲ್ಲಿದ್ದ ಒಟ್ಟು ಕುಟುಂಬದ 7 ಜನರನ್ನು ಜೀವದ ಹಂಗು ತೊರೆದು ರಕ್ಷಣೆ ಮಾಡಿರುತ್ತಾರೆ.

ಶ್ರೀ ಆರ್ ನರೇಂದ್ರ ಬಾಬು,
ಸಹಾಯಕ ಅಭಿಯಂತರರು,
ತಾಂತ್ರಿಕ ಶಾಖೆ,
ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ,
ಬೆಂಗಳೂರು.



**<u>ಸರ್ಕಾರಿ ಸೇವೆಯಲ್ಲಿ ಶ್ರೀಯುತರ ಪ್ರಮುಖ ಸಾಧನೆಗಳು:–</u>**

**ಟಿ.ಬಿ.ಡ್ಯಾಂನ ಮೀನುಮರಿ ಉತ್ಪಾದನಾ ಕೇಂದ್ರಕ್ಕೆ ತಂಪು ಗೋಪುರ ನಿರ್ಮಾಣ**

ಟಿ.ಬಿ.ಡ್ಯಾಂನ ಮೀನುಮರಿ ಉತ್ಪಾದನಾ ಕೇಂದ್ರಕ್ಕೆ 1994 ರಲ್ಲಿ ದಕ್ಷಿಣ ಭಾರತದಲ್ಲಿ ಪ್ರಥಮ ಎನ್ನುವಂತಹ ತಂಪುಗೋಪುರ ಅಳವಡಿಕೆ. ಇದರಿಂದಾಗಿ ಬಳ್ಳಾರಿ ಜಿಲ್ಲೆಯ ಅಧಿಕ ಉಷ್ಣಾಂಶದ ನಡುವೆ ತಂಪು ವಾತಾವರಣ ನಿರ್ಮಿಸಿ ಹೆಚ್ಚು ಮೀನು ಮರಿ ಉತ್ಪಾದನೆಗೆ ಶ್ರಮಿಸಿರುತ್ತಾರೆ.

**ತುಂಗಭದ್ರ ಉದ್ಯಾನವನದಲ್ಲಿ 'ಪರ್ಣಜ' ಮತ್ಸಾಲಯ ಹಾಗೂ ಚೈತನ್ಯ' ಮಲ್ಟಿ ಮೀಡಿಯಾ ಭವನ ನಿರ್ಮಾಣ**

ತುಂಗಭದ್ರಾ ಡ್ಯಾಂನ್ನು ಪ್ರೇಕ್ಷಣಿಯ ಸ್ಥಳವಾಗಿ ಉನ್ನತೀಕರಿಸುವ ದೃಷ್ಠಿಯಲ್ಲಿ ಅಷ್ಟಕೋನಾಕೃತಿಯ ಅತ್ಯುನ್ನತ ವಾಸ್ತುಶಿಲ್ಪದ, ಸುಂದರ ಆಧುನಿಕ ಮತ್ಸಾಲಯವನ್ನು ಇಲಾಖಾವತಿಯಿಂದ ನಿರ್ಮಿಸಿ ತುಂಗಭದ್ರಾ ಡ್ಯಾಂಗೆ ಬೇಟಿಕೊಡುವ ರೈತರು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಬೆಳೆ ಪದ್ಧತಿ, ತಾಂತ್ರಿಕ ಮಾಹಿತಿ ಮತ್ತು ನೀರಿನ ಬಳಕೆ, ಉಳಸುವಿಕೆ ಬಗ್ಗೆ ಜಾಗೃತಿ ಮೂಡಿಸಲು 50 ಆಸನದ ವ್ಯವಸ್ಥೆಯುಳ್ಳ ಸುಸಜ್ಜಿತ ವಿಡಿಯೋ ಮಲ್ಟಿಮೀಡಿಯಾ ಭವನ ನಿರ್ಮಿಸಿರುತ್ತಾರೆ.

**'ಗಣಕೀಕೃತ ಸಂಗೀತ ನೃತ್ಯ ಕಾರಂಜಿ'**

ತುಂಗಭದ್ರಾ ಡ್ಯಾಂನ ಉದ್ಯಾನವನದಲ್ಲಿ ಅಳವಡಿಸಿರುವ ಗಣಕೀಕೃತ ಸಂಗೀತ ನೃತ್ಯ ಕಾರಂಜಿಯ ವಿನ್ಯಾಸ ನಿರ್ಮಾಣವನ್ನು ಅತ್ಯಾಧುನಿಕವಾಗಿ ಅಳವಡಿಸಿದ್ದು, ಪ್ರವಾಸಿಗರನ್ನು ಹೆಚ್ಚಾಗಿ ಆಕರ್ಶಿಸಿದ್ದು, ಇದರಿಂದ ತುಂಗಭದ್ರಾ ಮಂಡಳಿಗೆ ಪ್ರವೇಶ ದರ ಮುಖೇನ ವಾರ್ಷಿಕ ರೂ.40.00 ಲಕ್ಷಗಳಗೂ ಹೆಚ್ಚು ಆದಾಯ ತರುವಲ್ಲಿ ಯಶಸ್ವಿಯಾಗಿರುತ್ತಾರೆ.

**ಪಂಪಾ ಕಲಾ ಮಂದಿರ ನಿರ್ಮಾಣ ಹಾಗೂ ತುಂಗಭದ್ರ ಅಣೆಕಟ್ಟೆಯ ರಾಯಬಸವಣ್ಣ ಕಾಲುವೆ ತೂಬು ದುರಸ್ಥಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ.**

ಇವರು ರಂಗನಟ, ಸಂಘಟಕ ಮತ್ತು ನಿರೂಪಕ, 2003–04 ರಲ್ಲಿ ಕರ್ನಾಟಕ ನಾಟಕ ಅಕಾಡಮಿ ಪ್ರಶಸ್ತಿ ಪುರಸ್ಕೃತರಾಗಿರುತ್ತಾರೆ

**ಡಾ:ಅಶೋಕ.ಎಸ್.ಆಲೂರ**
ವಿಶೇಷಾಧಿಕಾರಿ, ಯೋಜನೆ ಹಾಗೂ ಮೇಲ್ವಿಚಾರಣಾ ಘಟಕ, ತೋ.ವಿ.ವಿ.
ಬಾಗಲಕೋಟ.



**<u>ಸರ್ಕಾರಿ ಸೇವೆಯಲ್ಲಿ ಶ್ರೀಯುತರ ಪ್ರಮುಖ ಸಾಧನೆಗಳು:–</u>**

- ವಿಶ್ವವಿದ್ಯಾಲಯದಲ್ಲಿ ರೈತ ಸಮುದಾಯದ ಅಭಿವೃದ್ಧಿಗಾಗಿ, ವಿಜ್ಞಾನಿಗಳ ಹಾಗೂ ವಿದ್ಯಾರ್ಥಿಗಳ ಸಂಶೋಧನೆಗಾಗಿ ತೋಟಗಾರಿಕೆ ಕ್ಷೇತ್ರದಲ್ಲಿ ವಿಶೇಷ ಕೇಂದ್ರಗಳನ್ನು ಹಾಗೂ ಸಂಸ್ಥೆಗಳನ್ನು ಸ್ಥಾಪಿಸಲು ಪ್ರಸ್ತಾವನೆಗಳನ್ನು ತಯಾರಿಸಿ ಹಣಕಾಸು ಸಂಪನ್ಮೂಲಗಳನ್ನು ಕ್ರೋಢೀಕರಿಸುವಲ್ಲಿ ಮುಂದಾಳತ್ವ ವಹಿಸಿ ಮಣ್ಣು, ನೀರು ಹಾಗೂ ಸಸ್ಯ ಪರೀಕ್ಷ ಕೇಂದ್ರದ ಸ್ಥಾಪನೆ ಹಾಗೂ ರೈತ ಸಮುದಾಯಕ್ಕಾಗಿ ಸಂಚಾರಿ ಮಣ್ಣು ಪ್ರಯೋಗಶಾಲೆಯ ಪ್ರಾರಂಭಿಸುವ ಮೂಲಕ ರೈತರಿಗೆ ವೈಜ್ಞಾನಿಕ ಪೋಷಕಾಂಶ ನಿರ್ವಣೆಯಲ್ಲಿ ತಾಂತ್ರಿಕ ಮಾರ್ಗದರ್ಶನ ಹಾಗೂ ಮಣ್ಣಿನ ಆರೋಗ್ಯದ ಸೂಕ್ತ ಸ್ಥಾಪನೆ ನಿರ್ವಹಣೆಯಿಂದ ರೈತರಿಗೆ ಖರ್ಚು ಕಡಿಮೆಗೊಳಿಸಿರುತ್ತಾರೆ.

- ಆರ್ಕಿಡ್ಸ್‌ಗಳ ಉತ್ಕೃಷ್ಟ ಕೇಂದ್ರದ ಸ್ಥಾಪನೆಯ ಮೂಲಕ ಅಳಿದು ಹೊಗುತ್ತಿರುವ ಆರ್ಕಿಡ್ಸ್‌ಗಳ ಸಂರಕ್ಷಣೆ ಹಾಗೂ ತೋಟಗಾರಿಕೆ ಜೈವಿಕ ತಂತ್ರಜ್ಞಾನ ಕೇಂದ್ರದ ಸ್ಥಾಪನೆ ಮಾಡುವ ಮೂಲಕ ಪ್ರಮುಖ ತೋಟಗಾರಿಕೆ ಬೆಳೆಗಳಲ್ಲಿ ಬರುವ ರೋಗ ಹಾಗೂ ಕೀಟಗಳ ನಿರ್ವಹಣೆಗೆ ವೈಜ್ಞಾನಿಕ ಸಮಾಧಾನ ಕಂಡುಕೊಂಡಿರುತ್ತಾರೆ.

- ತೋಟಗಾರಿಕೆ ವ್ಯವಹಾರ ಮತ್ತು ರಫ್ತು ಜ್ಞಾನ ಕೇಂದ್ರ ಸ್ಥಾಪನೆಯ ಮೂಲಕ ರೈತ ಸಮುದಾಯಕ್ಕೆ ತಾಂತ್ರಿಕ ಮಾರ್ಗದರ್ಶನ ನೀಡಿ ಕರ್ನಾಟಕದಲ್ಲಿ ಸಮಗ್ರ ಕೃಷಿ ಪದ್ಧತಿಗಳ ಪ್ರಚಲೀಕರಣಗೊಳಸುವ ಮೂಲಕ ರೈತರಿಗೆ ಸೂಕ್ತವಾದ ಬೆಳೆ ಪದ್ಧತಿ ಅನುಸರಿಸುವಲ್ಲಿ ಮಾರ್ಗದರ್ಶಕರಾಗಿರುತ್ತಾರೆ.

- ಕೃಷಿ ಸಮುದಾಯಕ್ಕೆ ಪ್ರಯೋಜನವಾಗುವಂತೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳು ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ನಡುವೆ ಒಪ್ಪಂದ ಕಲ್ಪಿಸಿ ತಾಂತ್ರಿಕ ಜ್ಞಾನವನ್ನು ವಿನಿಯಮಮಾಡಿಕೊಳ್ಳಲು ಕೃಷಿ/ತೋಟಗಾರಿಕೆ ಮೇಳಗಳನ್ನು ಆಯೋಜಿಸುವುದು. ಹಾಗೂ ಕೃಷಿ ಜಾತ್ರೆ ಮತ್ತು ಅಂದೋಲಗಳನ್ನು ಆಯೋಜಿಸಿ ಉತ್ತಮ ಕಾರ್ಯನಿರ್ವಹಿಸಿರುತ್ತಾರೆ.

**ಶ್ರೀ ಎಂ. ಗಂಗಾಧರ್,**
ರಾಜಸ್ವ ನಿರೀಕ್ಷಕರು,
ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಮೂಡಿಗೆರೆ ಚಿಕ್ಕಮಗಳೂರು.



**<u>ಸರ್ಕಾರಿ ಸೇವೆಯಲ್ಲಿ ಶ್ರೀಯುತರ ಪ್ರಮುಖ ಸಾಧನೆಗಳು:-</u>**

ಸರ್ಕಾರಿ ಸ್ವತ್ತುಗಳಾದ ಕೆರೆ, ಗೋಮಾಳ, ಸ್ಮಶಾನ ಹಾಗೂ ಇತರೆ ಜಮೀನುಗಳ ಉತ್ತುವರಿ ಬಗ್ಗೆ ಕಾಳಜಿವಹಿಸಿ ಹೋಬಳಿಯಲ್ಲಿ ಒಟ್ಟು 100 ಎಕರೆ ಸರ್ಕಾರಿ ಜಮೀನುಗಳನ್ನು ವಶಪಡಿಸಿಕೊಳ್ಳಲು ಶ್ರಮಿಸಿರುತ್ತಾರೆ. ಇವರು ಕಳೆದ 8 ವರ್ಷಗಳಿಂದ ಮೂಡಿಗೆರೆ ತಾಲ್ಲೂಕಿನ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದು, ನೌಕರರ ಜೊತೆ ಉತ್ತಮ ಬಾಂಧವ್ಯ ಹೊಂದಿರುತ್ತಾರೆ.

ತಮ್ಮ ಸಂಬಳದಲ್ಲಿ ಉಳಿತಾಯ ಮಾಡಿದ ಹಣದಿಂದ ಪ್ರತಿ ವರ್ಷ 15 ಕಡು ಬಡತನದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳನ್ನು ಗುರುತಿಸಿ, ಅವರಿಗೆ ವಿದ್ಯಾಭ್ಯಾಸಕ್ಕೆ ಸಹಕರಿಸಿರುತ್ತಾರೆ.

ಸದರಿಯವರು ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಮತ್ತು ಜಿಲ್ಲಾ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿ ಪಡೆದಿರುತ್ತಾರೆ.

ಶ್ರೀ ಜಿ.ಎಂ. ಸಣ್ಣಮುದ್ದಯ್ಯ,
ಚುಣಾವಣಾ ಶಿರಸ್ತೆದಾರರು,
ತುಮಕೂರು ಜಿಲ್ಲಾಧಿಕಾರಿಗಳ ಕಛೇರಿ,
ತುಮಕೂರು.



ತುಮಕೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿ ಸತತ ಆಯ್ಕೆ ಹಾಗೂ ಕೇಂದ್ರ ಸಂಘದ ಗೌರವಾಧ್ಯಕ್ಷರಾಗಿ ಸೇವೆಸಲ್ಲಿಸಿರುವ ಇವರು ತುಮಕೂರು ಜಿಲ್ಲಾ ಸರ್ಕಾರಿ ನೌಕರರ ಭವನದ ನವೀಕರಣ, ಸಮುದಾಯಭವನ, ಗ್ರಂಥಾಲಯ ಕೊಠಡಿಗಳ ನಿರ್ಮಾಣ, ಜಿಲ್ಲಾದ್ಯಂತ 10 ಶಾಖೆಗಳ ಭವನ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಜಿಲ್ಲಾ ಶಾಖೆ ವತಿಯಿಂದ ಪ್ರತಿವರ್ಷವೂ ಅಂದರೆ 18 ವರ್ಷಗಳಿಂದ ಎಸ್.ಎಸ್.ಎಲ್.ಸಿ ಮತ್ತು ಪಿ.ಯೂ.ಸಿ.ಯಲ್ಲಿ 90ಕ್ಕಿಂತ ಹೆಚ್ಚು ಅಂಕಗಳಿಸಿದ ನೌಕರರ ಹಾಗೂ ಸಾರ್ವಜನಿಕರ ಮಕ್ಕಳನ್ನು ಪ್ರೋತ್ಸಾಹಿಸುವ ಪ್ರತಿಭಾ ಪುರಸ್ಕಾರ, ಬೇಸಿಗೆ ಶಿಬಿರ, ಕಂಪ್ಯೂಟರ್ ತರಬೇತಿ ಶಿಬಿರ ಪ್ರಕೃತಿ

ಚಿಕಿತ್ಸೆ ಹಾಗೂ ಯೋಗ ತರಬೇತಿ ಶಿಬಿರಗಳನ್ನು ಆಯೋಜಿಸಿ, ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಜಿಲ್ಲೆಯಾದ್ಯಂತ ಆಂಗ್ಲ ಭಾಷೆ ತರಬೇತಿ ಶಿಬಿರವನ್ನು ಏರ್ಪಡಿಸಿ ಯಶಸ್ವಿಗೊಳಸಿದ ಗರಿಮೆಗೆ ಪಾತ್ರರಾಗಿರುತ್ತಾರೆ. ಸಂಘದ ವತಿಯಿಂದ ಶ್ರೀ ಸಿದ್ದಗಂಗಾ ಶ್ರೀಗಳು ಶತಾಯುಷಿಗಳಾದ ಸಂದರ್ಭದಲ್ಲಿ ಜಿಲ್ಲಾ ಸರ್ಕಾರಿ ನೌಕರರ ಒಂದು ದಿನದ ವೇತನವನ್ನು ಶ್ರೀಗಳು ನಡೆಸುತ್ತಿರುವ ಅನ್ನದಾಸೋಹ ಕಾರ್ಯಕ್ರಮಕ್ಕೆ 75ಲಕ್ಷರೂಗಳನ್ನು ಹಾಗೂ 69ನೇ ಅಖಿಲ ಭಾರತ ಕನ್ನಡ ಸಮ್ಮೇಳನಕ್ಕೆ 65ಲಕ್ಷರೂಗಳ ಕೊಡುಗೆ ಹಾಗೂ ಕನ್ನಡ ಭವನ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಿರುತ್ತಾರೆ. ಜಿಲ್ಲೆಯ 22ಕ್ಕುಗ್ರಾಮಗಳ ಸರ್ಕಾರಿ ಶಾಲೆಗಳಿಗೆ ವಿದ್ಯುತ್ ಕಲ್ಪಿಸುವ "ಬೆಳಕು" ಯೋಜನೆ ಅನುಷ್ಠಾನದಲ್ಲಿ ಪ್ರಮುಖ ಪಾತ್ರವಹಿಸಿ ಜಿಲ್ಲಾ ನೌಕರರಿಗೆ ವಿಮೆ, ವೈದ್ಯಕೀಯ ತಪಾಸಣಾ ಶಿಬಿರ ಹಾಗೂ ಕವಿಗೋಷ್ಠಿಗಳನ್ನು ಏರ್ಪಡಿಸಿ ಯಶಸ್ವಿಗೊಳಸಿರುತ್ತಾರೆ. ಕಂದಾಯ ಇಲಾಖೆ ಕಡತ ನಿರ್ವಹಣೆ ಹಾಗೂ ಲೆಕ್ಕ ಪತ್ರ ನಿರ್ವಹಣೆಗೆ ಪ್ರಶಂಸೆಗೆ ಒಳಗಾಗಿದ್ದಾರೆ. 1988ರಲ್ಲಿ ಇವರಿಗೆ ಕಂದಾಯ ಸಚಿವರಿಂದ ಪ್ರಶಸ್ತಿ ಪುರಸ್ಕೃತರಾಗಿರುತ್ತಾರೆ. 2002ರಲ್ಲಿ ಸಂಘದ ಜಾಗದಲ್ಲಿ ಸುಸಜ್ಜಿತ ಕೊಠಡಿಗಳನ್ನು ನಿರ್ಮಿಸಿ, ಹಾಗೆಯೇ ಸರ್ಕಾರಿ ನೌಕರರ ಆರ್ಥಿಕ ಸಹಾಯಕ್ಕಾಗಿ ನೌಕರರ ಪತ್ತಿನ ಸಹಕಾರ ಸಂಘವನ್ನು ಸ್ಥಾಪನೆ ಮಾಡಿದ್ದು, ಜೊತೆಗೆ ರಾಜ್ಯ ಸರ್ಕಾರದ ಪುಸ್ತಕ ಪ್ರಾಧಿಕಾರದ ವತಿಯಿಂದ ಸಿರಿಗನ್ನಡ ಪುಸ್ತಕ ಮನೆ ಎನ್ನುವ ವಾಚಾನಾಲಯವನ್ನು "ಪ್ರತಿಪದ" ಎಂಬ ಸಾರ್ವಜನಿಕ ವೇದಿಕೆ ನಡೆಸಿರುತ್ತಾರೆ. ನೌಕರರ ಜಂಟಿ ಸಮಾಲೋಚನಾ ಸಭೆಯಲ್ಲಿ 5 ಬಾರಿ ಸದಸ್ಯರಾಗಿದ್ದು, ನೌಕರರ ಹಲವು ಸಮಸ್ಯೆಗಳನ್ನು ಇತ್ಯರ್ಥಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುತ್ತಾರೆ.

ಇಲಾಖೆಯ ಕಾನೂನು ಕಟ್ಟಳೆಗಳನ್ನು ಚೆನ್ನಾಗಿ ಅರಿತಿರುವ ಇವರು ಉತ್ತಮ ವಾಗ್ಮಿ.

**ಶ್ರೀ ಎಂ.ಸಿ. ಗಂಗಾಧರ**
ಹಿರಿಯ ಉಪನಿರ್ದೇಶಕರು,
ಆಹಾರ ನಾಗರೀಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ
ಆಯುಕ್ತರ ಕಛೇರಿ, ಬೆಂಗಳೂರು.




**ಸರ್ಕಾರಿ ಸೇವೆಯಲ್ಲಿ ಶ್ರೀಯುತರ ಪ್ರಮುಖ ಸಾಧನೆಗಳು:–**

ಆಹಾರ ಸಾಮಾಗ್ರಿಗಳನ್ನು ಪ್ರತಿ ತಿಂಗಳ ನಿರ್ದಿಷ್ಟವಾದ ದಿನಾಂಕದಂದು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಪಡಿತರ ನ್ಯಾಯ ಬೆಲೆ ಅಂಗಡಿಗಳಿಗೆ ಕೇಂದ್ರೀಕೃತ ಹಂಚಿಕೆಯ ಸಾಫ್ಟ್ ವೇರ್ ಸಿದ್ದಪಡಿಸುವುದರ ಮೂಲಕ ಕೇಂದ್ರ ಕಛೇರಿಯಿಂದಲೇ ತಲುಪುವಂತೆ ಇಲಾಖೆಯಲ್ಲಿ ವ್ಯವಸ್ಥೆ ಮಾಡಿರುತ್ತಾರೆ.

ಇಲಾಖೆಯು ಸಗಟು ದಾಸ್ತಾನು ಮತ್ತು ಸಾಗಾಣಿಕೆಯನ್ನು ಕ್ರಮಬದ್ಧಗೊಳಸಲು ಶ್ರಮಿಸುತ್ತಿದೆ. ಭಾರತ ಆಹಾರ ನಿಗಮದ ಗೋದಾಮಿನಿಂದ ತಾಲ್ಲುಕು ಸಗಟು ಗೋದಾಮುಗಳಿಗೆ ಹಿಂದಿನ ತಿಂಗಳ 10 ರಿಂದ 30 ನೇ ತಾರೀಖಿನ ಒಳಗಾಗಿ ಎತ್ತುವಳ ಮಾಡಲು ನಿರ್ದೇಶನಗಳನ್ನು ನೀಡಿ ಸುಲಭವಾಗಿ ಲೆಕ್ಕಮಾಡಲು ಸಹಾಯವಾಗುವಂತೆ ಗೋದಾಮಿನಲ್ಲಿ ಆಹಾರ ಧಾನ್ಯವನ್ನು ವೈಜ್ಞಾನಿಕವಾಗಿ ಜೋಡಿಸಿ ಸಂಪೂರ್ಣವಾಗಿ ದಾಸ್ತಾನನ್ನು ಪ್ರತೀ ಮಾಹೆ ಪಡೆದು ಜಿಲ್ಲಾಧಿಕಾರಿಗಳು ನೇಮಿಸುವ ವಿಶೇಷ ತಂಡಗಳಿಂದ ಅದನ್ನು ಪರಿಶೀಲಿಸಿ ನಂತರವೇ ನ್ಯಾಯ ಬೆಲೆ ಅಂಗಡಿಗಳಿಗೆ ಆಹಾರ ಧಾನ್ಯವನ್ನು ವಿತರಿಸಲು ಸಗಟು ಮಳಿಗೆಗಳಿಗೆ ಸೂಚಿಸಿರುತ್ತಾರೆ.

ಈ ಹಿಂದೆ ಹೆಚ್ಚಿನ ಸೀಮೆಎಣ್ಣೆಯನ್ನು ನಗರ ಪ್ರದೇಶಗಳಿಗೆ ಮತ್ತು ಕಡಿಮೆ ಸೀಮೆಎಣ್ಣೆಯನ್ನು ಗ್ರಾಮಾಂತರ ಪ್ರದೇಶಗಳಿಗೆ ನೀಡಲಾಗುತ್ತಿದ್ದನ್ನು, ಸರಿಪಡಿಸಿ ಜುಲೈ 2013 ಮಾಹೆಯಿಂದ ರಾಜ್ಯಾದ್ಯಂತ ಸೀಮೆಎಣ್ಣೆ ವಿತರಣೆಯನ್ನು ಹಾಗೂ ದರದಲ್ಲೂ ಏಕರೂಪತೆ ಜಾರಿಗೆ ತಂದಿರುತ್ತಾರೆ.

ಹೆಚ್ಚಿನ ಸಂಖ್ಯೆಯ ಅರ್ಹ ಪಡಿತರ ಚೀಟಿದಾರರು ಸೀಮೆಎಣ್ಣೆಯನ್ನು (ಗ್ಯಾಸ್ ಸೌಕರ್ಯವಿದ್ದರೂ) ಪಡೆಯುತ್ತಿದ್ದನ್ನು ಪರಿಶೀಲಿಸಿ ಅಂತಹ ಸುಮಾರು 11 ಲಕ್ಷ ಪಡಿತರ ಚೀಟಿಗಳನ್ನು ದತ್ತಾಂಶದ ಸಹಾಯದಿಂದ ಆಗಸ್ಟ್ 2013 ರಿಂದ ರದ್ದುಗೊಳಸಲಾಗಿದೆ.

ಜುಲೈ 2013 ಮಾಹೆಯಿಂದ ರಾಜ್ಯದಲ್ಲಿ "ಅನ್ನ ಭಾಗ್ಯ" ಕಾರ್ಯಕ್ರಮವನ್ನು ಜಾರಿಗೆ ಗೊಳಿಸಲು ಕೇಂದ್ರ ಸರ್ಕಾರದ ಹಂಚಿಕೆಯೊಂದಿಗೆ ಭಾರತ ಸರ್ಕಾರದ ಎಕನಾಮಿಕ್ ಕಾಸ್ಟ್ ಮತ್ತು ಛತ್ತೀಸ್ ಘಡ ರಾಜ್ಯದಿಂದ ಅಕ್ಕಿ ಖರೀದಿಗೆ ಕ್ರಮ. ಪ್ರತೀ ಮಾಹೆ 75 ರಿಂದ 80 ಸಾವಿರ ಮೆ.ಟನ್ ಅಕ್ಕಿ ಸಂಗ್ರಹ, ದಾಸ್ತಾನು ಮತ್ತು ವಿತರಣೆಗೆ ಕ್ರಮ ವಹಿಸಿ ಇಲಾಖೆಯ ಎಲ್ಲಾ ಪಡಿತರ ಚೀಟಿಗಳ ದತ್ತಾಂಶ ಸಿದ್ಧಪಡಿಸಲು ಎನ್.ಐ.ಸಿ ಜೊತೆಯಲ್ಲಿ ಪೂರ್ಣ ಯೋಜನೆ ಸಿದ್ಧಪಡಿಸಿ ಮತ್ತು ದತ್ತಾಂಶದ ಮಾಹಿತಿಯನ್ನು ಇಲಾಖೆಯ ವೆಬ್ ಸೈಟನಲ್ಲಿ ಅಳವಡಿಸಲು ಕ್ರಮ ವಹಿಸಿರುತ್ತಾರೆ.

ಪಡಿತರ ಚೀಟಿಗಾಗಿ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸುಲಭವಾಗುವಂತೆ ದತ್ತಾಂಶವನ್ನು ಸಿದ್ಧಪಡಿಸಲು ಬೇಕಾದ ಎಲ್ಲಾ ಕ್ರಮ ವಹಿಸಿ, ಪ್ರಸ್ತುತ ಇಲಾಖೆಯಲ್ಲಿ ಪಡಿತರ ಚೀಟಿ ಪಡೆಯಲು ಆನ್ ಲೈನ್ ವ್ಯವಸ್ಥೆ ಮಾಡಿರುತ್ತಾರೆ.

**ಕೆ.ರಘುರಾಮ್ ಭಂಡಾರಿ**
**ವಿಶೇಷಾಧಿಕಾರಿ (ಬ್ಯಾಂಕಿಂಗ್) ಹಾಗೂ**
**ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ,**
**ಆರ್ಥಿಕ ಇಲಾಖೆ.**



**<u>ಸರ್ಕಾರಿ ಸೇವೆಯಲ್ಲಿ ಶ್ರೀಯುತರ ಪ್ರಮುಖ ಸಾಧನೆಗಳು:-</u>**

ಕರ್ನಾಟಕ ರಾಜ್ಯದಲ್ಲಿ 545 ಹೊಸ ಬ್ಯಾಂಕ್ ಶಾಖೆಗಳನ್ನು ತೆರೆಯಲು ಕ್ರಮ ಕೈಗೊಂಡಿರುತ್ತಾರೆ. ಇದರಿಂದ ಬ್ಯಾಂಕಿಂಗ್ ಸಂಕೀರ್ಣ ವ್ಯವಸ್ಥೆಯು ವಿಸ್ತರಣೆಹೊಂದಿದ್ದು, ಪ್ರತಿ ಶಾಖೆಯು ಸರಾಸರಿ 5 ಜನರಿಗೆ ನೇರವಾಗಿ ಉದ್ಯೋಗ ಒದಗಿಸುವಲ್ಲಿ ಸಹಕಾರಿಯಾಗಿರುತ್ತಾರೆ. ಕಂದಾಯ ಇಲಾಖೆಯಲ್ಲಿ ಅಧೀನ ಕಾರ್ಯದರ್ಶಿಯಾಗಿ ಸೇವೆಸಲ್ಲಿಸುವಾಗ ಪ್ರಕೃತಿ ವಿಕೋಪ ಪರಿಹಾರ, ಒರಿಸ್ಸಾದಲ್ಲಿ ಬೀಸಿದ ಚಂಡಮಾರುತದಿಂದ ನಿರಾಶ್ರಿತರಿಗೆ ಮನೆಗಳನ್ನು ನಿರ್ಮಿಸಲು ಖಖಖಇಖ ನೊಂದಿಗೆ ಒಪ್ಪಂದ. ರಾಜೀವ್ ಗಾಂಧೀ ರಾಷ್ಟ್ರೀಯ ಏಕತಾ ಪ್ರಶಸ್ತಿಗೆ ನಾನು ನಾಮಾಂಕಿತಗೊಂಡಿರುತ್ತಾರೆ.

ಅಲ್ಲದೇ ಕರ್ನಾಟಕ ಸರ್ಕಾರ ಸಚಿವಾಲಯದ ವಿವಿಧ ಇಲಾಖೆಗಳಲ್ಲಿ ಗಮನಾರ್ಹ ಸೇವೆಯನ್ನು ಸಲ್ಲಿಸಿ ಕ್ಷೇತ್ರೀಯ ಇಲಾಖೆಗಳಿಗೆ ಯಾವುದೇ ರೀತಿಯ ತೊಡಕಾಗದಂತೆ ಸುಗಮ ಆಡಳಿತಕ್ಕೆ ಶ್ರಮಿಸಿರುತ್ತಾರೆ.

**ಚಿತ್ರದುರ್ಗಾದಲ್ಲಿ ಉಗ್ರಾಣ ನಿಗಮ ಹಾಗೂ ಜಿಲ್ಲಾಧಿಕಾರಿ ಅಧಿಕಾರಿಗಳಿಗೆ ಸಕಾಲದ ಬಗ್ಗೆ ತರಬೇತಿ ಕಾರ್ಯಕ್ರಮ:-**

1) ವಿಸ್ತುತವಾಗಿ ಸಕಾಲದ ಬಗ್ಗೆ ಮಾಹಿತಿ ನೀಡಲಾಯಿತು
2) ಸಕಾಲದ ಮೊದಲು ಹಾಗು ನಂತರದ ವ್ಯತ್ಯಸಗಳನ್ನು ತಿಳಿಸಲಾಯಿತು
3) ಸಕಾಲ ಅಧಿನಿಯಮ,ಅದರಡಿ ಬರುವ ಸೇವೆಗಳ ವಿವರ , ಕಾಲಮಿತಿಯಲ್ಲಿ ಸೇವೆ ನಿರ್ವಹಣೆ, ಸಕಾಲ ತಂತ್ರಾಂಶದ ಬಳಕೆ ಬಗ್ಗೆ ಮನವರಿಕೆ ಮಾಡಿಕೊಡಳಾಗಿತ್ತು.
4) ಆಡಳಿತಾತ್ಮ ತಂತ್ರಾಂಶ ವ್ಯವಸ್ಥೆಯ ನಿರ್ವಹಣೆ www.kgsc.kar.nic.in/gsc_rpt ಅದರ ಪ್ರಯೋಜನದ ಬಗ್ಗೆ ಮಾಹಿತಿ ನೀಡಲಾಯಿತು. ಹಾಗಯೇ www.kgsc.kar.nic.in/officer ಜಿಎಸ್ ಸಿ ಹಾಗೂ ಸ್ಥಿತಿ ಗತಿಗಳ ನಿರ್ವಹಿಸುವ ಪರಿಯನ್ನು ವಿವರಿಸಲಾಯಿತು.

5) ಅಧಿನಿಯಮದ ಪಾಲನೆ, ದಾಖಲತಿ ಪಟ್ಟಿ ನಿರ್ವಹಣೆ, ಪಾತ್ರ ಮತ್ತು ಹೊಣೆಗಾರಿತನ , ಸಕಾಲ ಕರೆಕೇಂದ್ರ, ತಂತ್ರಾಂಶದಲ್ಲಿ ಕಡತ/ಪತ್ರ ನಿರ್ವಹಣೆ ಇತರೆ ವಿಷಯಗಳ ಬಗ್ಗೆ ಮಾಹಿತಿ ಹಾಗು ತಂತ್ರಾಂಶಗಳ ಬಗ್ಗೆತರಬೇತಿ ನೀಡಲಾಯಿತು.



**ಧಾರವಾಡದಲ್ಲಿ ತಹಸಿಲ್ದಾರರಿಗೆ ಸಕಾಲ ಬಗ್ಗೆ  ಜಾಗೃತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು**



**ಧಾರವಾಡದಲ್ಲಿ ದೇಶಪಾಂಡೆ ಫೌಂಡೇಷನ್** ಹಮ್ಮಿಕೊಂಡಿದ್ದ ಡಿ ಡಿ 201 ಕಾರ್ಯಕ್ರಮದಲ್ಲಿ ಸಕಾಲದ ಬಗ್ಗೆ ಬಂದಂತಹ ಗಣ್ಯರಿಗೆ ಸಕಾಲ ಬಗ್ಗೆ ಜಾಗೃತಿ ಮೂಡಿಸಲಾಯಿತು.



ಉಡುಪಿಯಲ್ಲಿ ಹಮ್ಮಿಕೊಂಡಿದ್ದ **ಪ್ರತಿಭಾ ಕಾರಂಜಿ** ಕಾರ್ಯಕ್ರಮದ ದೃಶ್ಯ ಹಾಗೂ ಪ್ರಶಸ್ತಿ ಪಡೆದ ಚಿತ್ರಗಳು






ದಕ್ಷಿಣ ಕನ್ನಡದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಾ ಕಾರಂಜಿ ಕಾರ್ಯಕ್ರಮದ  ದೃಶ್ಯ ಹಾಗೂ ಪ್ರಶಸ್ತಿ ಪಡೆದ ಚಿತ್ರಗಳು



ಕಾರಂಜಿ ಕಾರ್ಯಕ್ರಮದಲ್ಲಿ ವಿಜೇತ ಶಾಲಾ ಮಕ್ಕಳಿಗೆ ಶಾಲಾ ಮುಖ್ಯಸ್ಥರು  ಪ್ರಮಾಣ ಪತ್ರ ನೀಡುತ್ತಿರುವುದು








ಗದಗದಲ್ಲಿ  ಹಮ್ಮಿಕೊಂಡಿದ ಪ್ರತಿಭಾ ಕಾರಂಜಿ ಸ್ಪರ್ದೆಯಲ್ಲಿ ಪುರಸ್ಕಾರ ಪಡೆದ ಚಿತ್ರಗಳು






ಹಾವೇರಿಯಲ್ಲಿ ಹಮ್ಮಿಕೊಂಡಿದ ಪ್ರತಿಭಾ ಕಾರಂಜಿ ಸ್ಪರ್ದೆಯಲ್ಲಿ ಪುರಸ್ಕಾರ ಪಡೆದ ಚಿತ್ರಗಳು








ಚಿಕ್ಕಬಳ್ಳಾಪುರದಲ್ಲಿ ಹಮ್ಮಿಕೊಂಡಿದ ಪ್ರತಿಭಾ ಕಾರಂಜಿ ಸ್ಪರ್ದೆಯಲ್ಲಿ ಪುರಸ್ಕಾರ ಪಡೆದ ಚಿತ್ರಗಳು




ಸಕಾಲ
ಸಕಾಲ


ಸಕಾಲ



ಬೆಂಗಳೂರು ನಗರದಲ್ಲಿ ಹಮ್ಮಿಕೊಂಡಿದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಸಕಾಲದ ಬಗ್ಗೆ ಜಾಗೃತಿ ಏರ್ಪಡಿಸಲಾಗಿತ್ತು

ಉತ್ತರ ಕನ್ನಡದಲ್ಲಿ ಹಮ್ಮಿಕೊಂಡಿದ ಪ್ರತಿಭಾ ಕಾರಂಜಿ ಸ್ಪರ್ದೆಯಲ್ಲಿ ಪುರಸ್ಕಾರ ಪಡೆದ ಚಿತ್ರಗಳು



**ಬೆಂಗಳೂರು, ಜನವರಿ 10:** ಮದ್ಯವರ್ತಿಗಳ ಹಾವಳಿಯಿಂದ ಶೋಷಣೆಗೊಳಗಾಗಿದ್ದ ಗ್ರಾಮೀಣ ಭಾಗದ ಅನಕ್ಷರಸ್ಥ ಜನರನ್ನು ಸಕಾಲ ಯೋಜನೆ ಜಾರಿಯಿಂದ ತಪ್ಪಿಸಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಟಿ.ಬಿ.ಜಯಚಂದ್ರ ತಿಳಿಸಿದರು.

ನಗರದಲ್ಲಿ ಇಂದು ಮೈಸೂರಿನ ಆಡಳಿತ ತರಬೇತಿ ಸಂಸ್ಥೆ ಮತ್ತು ಸಕಾಲ ಮಿಷನ್ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ 'ಸಕಾಲ ಸೇವೆಗಳನ್ನು ಜಾರಿಗೊಳಿಸುತ್ತಿರುವ 42 ಇಲಾಖೆಗಳ ಅಧಿಕಾರಿಗಳಿಗಾಗಿ ಸಾರ್ವಜನಿಕ ಸೇವೆಗಳ ವಿತರಣೆ ಕುರಿತ ಪ್ರಾಂತೀಯ ಮಟ್ಟದ ಕಾರ್ಯಾಗಾರವನ್ನು' ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.




ರಾಜ್ಯದಲ್ಲಿ ಸರ್ಕಾರಿ ಸೇವೆಗಳ ವಿತರಣಾ ವ್ಯವಸ್ಥೆಯ ಸುಧಾರಣೆಯ ಬಗ್ಗೆ ಕಾರ್ಯನೀತಿ ರೂಪಿಸುವವರಲ್ಲಿ ಸರ್ವಾನುಮತದ ಒಪ್ಪಿಗೆಯಿದೆ. ಕಳೆದ 8 ತಿಂಗಳಲ್ಲಿ ಸೇವೆಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ ಎಂದು ಸಚಿವರು ನುಡಿದರು. ಸ್ವೀಕೃತವಾದ ಅರ್ಜಿಗಳ ಪೈಕಿ ಶೇ.98 ಸೇವೆಗಳ ವಿತರಣೆಯನ್ನು ಮಾಡಲಾಗಿದ್ದು, ಈ ಕಾರ್ಯವನ್ನು ಗುರುತಿಸಿ ಕೇಂದ್ರ ಸರ್ಕಾರದ ಅತ್ಯುತ್ತಮ ಇ-ಆಡಳಿತ ಯೋಜನೆಗೆ ಬೆಳ್ಳಿ ವಿಭಾಗದಲ್ಲಿ ಪ್ರಶಸ್ತಿ ಲಭಿಸಿದೆ ಎಂದು ತಿಳಿಸಿದರು. ತಳಮಟ್ಟದಿಂದ ಪ್ರಜಾತಂತ್ರವನ್ನು ಬಲಪಡಿಸಲು ಇಂತಹ ಯೋಜನೆಗಳು ಸಹಕಾರಿ ಎಂದ ಸಚಿವರು ಭ್ರಷ್ಟಾಚಾರವನ್ನೂ ಸಹ ತಡೆಗಟ್ಟಬಹುದಾಗಿದೆ ಎಂದರು. ಆಡಳಿತ ತರಬೇತಿ ಸಂಸ್ಥೆ ಕೈಗೊಂಡಿರುವ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮದ ಬಗ್ಗೆ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ ಮಹಾನಿರ್ದೇಶಕರಾದ ಡಾ: ಅಮಿತಾ ಪ್ರಸಾದ್ ಮಾತನಾಡಿ ಉತ್ತಮ ಆಡಳಿತದ ಪರಿಕಲ್ಪನೆಯಿಂದ ಜನರಲ್ಲಿ ಸರ್ಕಾರದ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಮೂಡಿಸಬಹುದು ಎಂದರು. ಉತ್ತರದಾಯಿತ್ವ, ಜವಾಬ್ದಾರಿ, ಪಾರದರ್ಶಕತೆ ಮತ್ತು ಜನರ ಸಹಭಾಗಿತ್ವವನ್ನು ಒಳಗೊಂಡಂತೆ ದಕ್ಷತೆ ಮತ್ತು ವಿಳಂಬ ರಹಿತ ಸೇವೆಗಳ ವಿತರಣೆಯ ಬಗ್ಗೆ ಹೆಚ್ಚಿನ ಮಹತ್ವ ನೀಡಲಾಗುತ್ತಿದೆ ಎಂದು ಡಾ:ಅಮಿತಾ ಪ್ರಸಾದ್ ತಿಳಿಸಿದರು. ಈ ನಿಟ್ಟಿನಲ್ಲಿ ದೇಶದಲ್ಲಿ ಉತ್ತಮ ಆಡಳಿತ ನೀಡುತ್ತಿರುವ ರಾಜ್ಯಗಳಲ್ಲಿ ಒಂದು ಎಂದು ಕರ್ನಾಟಕ ಗುರುತಿಸಿಕೊಂಡಿದೆ. ಆಡಳಿತದಲ್ಲಿ ಇನ್ನಷ್ಟು ಸುಧಾರಣೆ ತರಲು ಅಧಿಕಾರಿಗಳ ಮನೋಭಾವದಲ್ಲಿ ಬದಲಾವಣೆ ಆಗಬೇಕು. ನಾವು ಇಲ್ಲಿ ಜನರ ಸೇವೆಗಾಗಿ ಇರುವುದು ಎಂಬ ಅಂಶವನ್ನು ಮನಗಂಡರೆ ಈ ಬದಲಾವನೆ ಸಾಧ್ಯವಾಗುತ್ತದೆ ಎಂದ ಅವರು, ಗುಣಮಟ್ಟವನ್ನು ಕಾಯ್ದುಕೊಳ್ಳುವತ್ತಲ್ಲೂ ಹೆಚ್ಚಿನ ಒತ್ತು ನೀಡಬೇಕಿದೆ ಎಂದು ತಿಳಿಸಿದರು. ಇನ್ನು 2 ವರ್ಷಗಳ ಕಾಲ ಸಕಾಲದ ಸೇವೆಗಳನ್ನು ಹೆಚ್ಚಿಸದೆ, ಈಗಿರುವ ಸೇವೆಗಳನ್ನು ಸುಸ್ಥಿರಗೊಳಿಸಬೇಕು. ನಂತರ ಫೀಡ್‌ಬ್ಯಾಕ್ ಪಡೆದು ಸೇವೆಗಳನ್ನು ಸೇರಿಸಿದರೆ ಒಳಿತು ಎಂದು ಡಾ: ಅಮಿತಾ ಪ್ರಸಾದ್ ಅಭಿಪ್ರಾಯಪಟ್ಟರು.

ಆಡಳಿತ ತರಬೇತಿ ಸಂಸ್ಥೆಯಿಂದ 15,000 ಅಧಿಕಾರಿ/ನೌಕರರಿಗೆ ಉಪಗ್ರಹ ಆಧಾರಿತ ತರಬೇತಿಯನ್ನು ನೀಡಲಾಗಿದೆ ಎಂದು ಅವರು ವಿವರಿಸಿದರು. ಆಡಳಿತದಲ್ಲಿ ಪರಿವರ್ತನೆ ತರಲು ಚೀನಾ, ದಕ್ಷಿಣ ಆಫ್ರಿಕಾ, ಸಿಂಗಾಪುರ ಮುಂತಾದ ದೇಶಗಳಲ್ಲಿ ಅಧಿಕಾರಿಗಳು ಜವಾಬ್ದಾರಿ ಹೊತ್ತದ್ದರಿಂದ ಆಯಾ ದೇಶಗಳಲ್ಲಿ ಉತ್ತಮ ಆಡಳಿತವನ್ನು ಒದಗಿಸಲಾಗುತ್ತಿದೆ

ಎಂದವರು ಉದಾಹರಣೆಯನ್ನು ನೀಡಿ, ನಮ್ಮಲ್ಲಿಯೂ ಅಧಿಕಾರಿ/ನೌಕರರು ಮನಸ್ಸು ಮಾಡಿದರೆ ಉತ್ತಮ ಆಡಳಿತ ನೀಡಲು ಸಾಧ್ಯವೆಂದರು.

ಸಕಾಲ ಅನುಷ್ಠಾನದ ಅನುಭವವನ್ನು ಸಕಾಲ ಮಿಷನ್ ನಿರ್ದೇಶಕರು ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರನಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಡಾ: ಶಾಲಿನಿ ರಜನೀಶ್ ಹಂಚಿಕೊಂಡರು.

ಹೆಚ್ಚುವರಿ ಮಿಷನ್ ನಿರ್ದೇಶಕರಾದ ಶ್ರೀ ಆರ್.ಮನೋಜ್ ಸಕಾಲ ಮತ್ತು ಐ.ಟಿ ನಿರವು ಕುರಿತಂತೆ ಮಾತನಾಡಿದರು. ಜನವರಿ 20 ಹಾಗೂ 21ರಂದು ಕೊಪ್ಪಳದ ಗವಿಸಿದ್ದೇಶ್ವರ ಜಾತ್ರೆಯಲ್ಲಿ ಸಕಾಲದ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು ಅದವ ಒಂದು ದೃಶ್ಯ:-



ಸಕಾಲ ಜನಜಾಗೃತಿ ಕಾರ್ಯಕ್ರಮವನ್ನು ದಿನಾಂಕ: **18-01-2014** ರಂದು ಹೊಳೆನರಸೀಪುರ ತಾಲ್ಲೂಕು, ಹಳ್ಳಿಮೈಸೂರು ಹೋಬಳಿ, ನಾಡಕಛೇರಿ ವ್ಯಾಪ್ತಿಯಲ್ಲಿ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಹೊಳೆನರಸೀಪುರ, ರಾಜಸ್ವ ನಿರೀಕ್ಷಕರು ಹಳ್ಳಿಮೈಸೂರು, ವಿಷಯ ನಿರ್ವಾಹಕರು ಹಾಗು ಎಲ್ಲಾ ಗ್ರಾಮ ಲೆಕ್ಕಾಧಿಕಾರಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಜನಗಳಿಗೆ **ಸಕಾಲ ಕಾಯಿದೆ** ಬಗ್ಗೆ ಸಂಪೂರ್ಣ ಮಾಹಿತಿ ತಿಳುವಳಿಕೆ ಕೊಟ್ಟು, ಇದೇ ಸಮಾರಂಬದಲ್ಲಿ ಜನರಿಂದ ಅಹವಾಲುಗಳನ್ನು ಸ್ವೀಕರಿಸಿ, ಅವರ ಸಮಸ್ಯೆಗಳನ್ನು ಆಲಿಸಿ ಸ್ಥಳದಲ್ಲೇ ಉತ್ತರಿಸಲಾಯಿತು.





ಸಕಾಲದ ಬಗ್ಗೆ ಹಾಸನ ಸಹಾಯ ಕೇಂದ್ರವು ಏರ್ಪಡಿಸಿದ್ದ ಜಾಗೃತಿ ಕಾರ್ಯ ಕ್ರಮದ ದೃಶ್ಯ:

ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಶಾಲೆಯಲ್ಲಿ ಸಕಾಲ ಸಹಾಯ ಕೇಂದ್ರ ಹಮ್ಮಿಕೊಂಡ ಜಾಗೃತಿ ಕಾರ್ಯಕ್ರಮದ ದೃಶ್ಯ:



## ಪತ್ರಿಕಾ ವರದಿಗಳು

# ನೌಕರರ ವಿಳಂಬ ನೀತಿಯೂ ದೊಡ್ಡ ತಪ್ಪು: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ನೌಕರರು ವಿಳಂಬ ಧೋರಣೆ ಅನುಸರಿಸುವುದು ಅಪ್ರಾಮಾಣಿಕತೆಯಷ್ಟೇ ದೊಡ್ಡ ತಪ್ಪು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಭಾನುವಾರ ರಾಜಭವನದಲ್ಲಿ ಆಯೋಜಿಸಿದ್ದ 'ಸರ್ವೋತ್ತಮ ಸೇವಾ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಆಡಳಿತದಲ್ಲಿ ಪಾರದರ್ಶಕತೆ ಮತ್ತು ಪ್ರಾಮಾಣಿಕತೆ ಇಲ್ಲದಿದ್ದರೆ ಆಗುವಂತಹ ಅನಾಹುತಗಳು ವಿಳಂಬ ನೀತಿಯಿಂದಲೂ ಆಗುತ್ತವೆ' ಎಂದರು.

ಪಾರದರ್ಶಕತೆ ಮತ್ತು ಪ್ರಾಮಾಣಿಕತೆ ಆಡಳಿತದ ಬೆನ್ನೆಲುಬಾಗಿರಬೇಕು. ಇದರ ಜೊತೆಯಲ್ಲೇ ತ್ವರಿತವಾಗಿ ಕೆಲಸ ಮಾಡುವ ವ್ಯವಸ್ಥೆ ಜಾರಿಯಾಗಬೇಕು. ಆಗ ಜನರಿಗೆ ಸರ್ಕಾರದ ಮೇಲೆ ವಿಶ್ವಾಸ ಮೂಡುತ್ತದೆ. ಸರ್ಕಾರಿ ನೌಕರರ ಬಗ್ಗೆ ಗೌರವ ಭಾವನೆ ಬರುತ್ತದೆ ಎಂದು ಹೇಳಿದರು.

ತಂತ್ರಜ್ಞಾನದ ಬಳಕೆಯೂ ಸೇರಿದಂತೆ ಸರ್ಕಾರಿ ಆಡಳಿತ ಯಂತ್ರದಲ್ಲಿ ಹಲವು ಸುಧಾರಣೆಗಳು ಜಾರಿಗೆ ಬಂದಿವೆ. ಆದರೂ, ಸರ್ಕಾರಿ ಕಚೇರಿಗಳಲ್ಲಿ ಜನರ ಕೆಲಸ ವಿಳಂಬವಾಗಿಯೇ ಆಗುತ್ತಿದೆ. ಈ ಬಗ್ಗೆ ಪ್ರಶ್ನಿಸಿದರೆ, ಅಧಿಕಾರಿಗಳು ಮತ್ತು ನೌಕರರು ಸಿಬ್ಬಂದಿ ಕೊರತೆಯ ಉತ್ತರ ನೀಡುತ್ತಾರೆ. ಉದ್ದೇಶಪೂರ್ವಕ ವಿಳಂಬಕ್ಕೆ ಕಾರಣ ಹುಡುಕುವುದರಲ್ಲೇ ನೌಕರರು ತಲ್ಲೀನರಾಗುವುದು ಸರಿಯಲ್ಲ ಎಂದು ಕಿವಿಮಾತು ಹೇಳಿದರು.




ರಾಜಭವನದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ರಾಜ್ಯಮಟ್ಟದ 'ಸರ್ವೋತ್ತಮ ಸೇವಾ ಪ್ರಶಸ್ತಿ' ಸ್ವೀಕರಿಸಿದ ಸರ್ಕಾರಿ ಅಧಿಕಾರಿಗಳು, ನೌಕರರ ಜೊತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಪ್ರಧಾನ ಕಾರ್ಯದರ್ಶಿ ಶಾಲಿನಿ ರಜನೀಶ್, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಕೌಶಿಕ್ ಮುಖರ್ಜಿ, ರಾಜ್ಯಪಾಲ ಎಚ್.ಆರ್.ಭಾರದ್ವಾಜ್, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಲ್.ಬೈರಪ್ಪ — ಪ್ರಜಾವಾಣಿ ಚಿತ್ರ

ಕೆಲವು ಸಂದರ್ಭಗಳಲ್ಲಿ ಪ್ರಾಮಾಣಿಕರಿಗೆ ಪ್ರಶಸ್ತಿ ದೊರೆಯದೇ ಇರಬಹುದು. ಅಪ್ರಾಮಾಣಿಕರಿಗೂ ಪ್ರಶಸ್ತಿ, ಪುರಸ್ಕಾರಗಳು ಸಲ್ಲಬಹುದು. ಆದರೆ, ಪ್ರಶಸ್ತಿಗಿಂತಲೂ ಆತ್ಮಸಾಕ್ಷಿಗೆ ಅನುಸಾರವಾಗಿ ಕೆಲಸ ಮಾಡುವುದನ್ನು ರೂಢಿಸಿಕೊಳ್ಳಬೇಕು. ಸರ್ಕಾರಿ ಸೇವೆಯಲ್ಲಿ ಪ್ರಶಸ್ತಿ ಪಡೆದವರು ಇತರೆ ನೌಕರರಿಗೆ ಮಾದರಿ ಆಗಬೇಕು ಎಂದು ಸಲಹೆ ಮಾಡಿದರು.

### 12 ಮಂದಿಗೆ ಪ್ರಶಸ್ತಿ

ಪ್ರಸಕ್ತ ವರ್ಷ ಪ್ರಶಂಸನೀಯ ಸೇವೆ ಸಲ್ಲಿಸಿದ ರಾಜ್ಯ ಸರ್ಕಾರದ ವಿವಿಧ ಶ್ರೇಣಿಯ 12 ಮಂದಿ ಅಧಿಕಾರಿಗಳು ಮತ್ತು ನೌಕರರಿಗೆ ರಾಜ್ಯಮಟ್ಟದ 'ಸರ್ವೋತ್ತಮ ಸೇವಾ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪ್ರಶಸ್ತಿಯು ₹ 25 ಸಾವಿರ ನಗದು, ಶಾಲು ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ.

**ಮುಖ್ಯಮಂತ್ರಿಗೆ ಶ್ಲಾಘನೆ:** ರಾಜ್ಯಪಾಲ ಎಚ್.ಆರ್.ಭಾರದ್ವಾಜ್ ಮಾತನಾಡಿ, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಬ್ಬ ಅನುಭವಿ ರಾಜಕಾರಣಿ. ರಾಜ್ಯದಲ್ಲಿ ಭ್ರಷ್ಟಾಚಾರರಹಿತ ಮತ್ತು ಪಾರದರ್ಶಕ ಆಡಳಿತ ನೀಡುವ ದಿಕ್ಕಿನಲ್ಲಿ ಅವರು ಸಾಗುತ್ತಿದ್ದಾರೆ' ಎಂದು ಶ್ಲಾಘಿಸಿದರು.

'ಸಿದ್ದರಾಮಯ್ಯ ಅವರ ಬಗ್ಗೆ ನಿಮ್ಮ ಅಭಿಪ್ರಾಯ ಏನು ಎಂದು ಮಾಧ್ಯಮದವರು ಆಗಾಗ ನನ್ನನ್ನು ಪ್ರಶ್ನಿಸುತ್ತಾರೆ. ಹಣಕಾಸು ಸಚಿವರಾಗಿ ಸಿದ್ದರಾಮಯ್ಯ ಅವರು ಮಾಡಿರುವ ಕೆಲಸಗಳ ಬಗ್ಗೆ ನಾನು ಅರಿತಿದ್ದೇನೆ. ಅವರು ಒಬ್ಬ ಸಮರ್ಥ ಆಡಳಿತಗಾರ ಮತ್ತು ಪ್ರಾಮಾಣಿಕ ಮುಖ್ಯಮಂತ್ರಿ ಎಂಬುದು ನನ್ನ ಭಾವನೆ' ಎಂದರು.

ಪ್ರಜಾಪ್ರಭುತ್ವದಲ್ಲಿ ರಾಜಕೀಯ ಆಡಳಿತ ವ್ಯವಸ್ಥೆ ಮಾತ್ರ ಆಗಾಗ ಬದಲಾಗುತ್ತಿರುತ್ತದೆ. ಕಾರ್ಯಾಂಗವು ಪ್ರಜಾಪ್ರಭುತ್ವದ ಶಾಶ್ವತ ಅಂಗ. ಅದು ಬದಲಾಗುವುದಿಲ್ಲ. ಈಗ ಕರ್ನಾಟಕದಲ್ಲಿ ಒಳ್ಳೆಯ ಕಾರಣಗಳಿಗಾಗಿ ರಾಜಕೀಯ ಆಡಳಿತದಲ್ಲಿ ಬದಲಾವಣೆ ಆಗಿದೆ. ಜನರಿಗೆ ನೀಡಿರುವ ಭರವಸೆಗಳನ್ನು ಸರ್ಕಾರ ಯಾವತ್ತೂ ಮರೆಯಬಾರದು ಎಂದು ಕಿವಿಮಾತು ಹೇಳಿದರು.

'ಸಚಿವ ಸಂಪುಟದ ಸಲಹೆಯ ಮೇಲೆ ನಾನು ಕೆಲಸ ಮಾಡುತ್ತೇನೆ. ಅಧಿಕಾರಿಗಳ ಸಲಹೆ ಸೂಚನೆ ಮೇಲೆ ಸಚಿವ ಸಂಪುಟ ಕೆಲಸ ಮಾಡುತ್ತದೆ. ಒಬ್ಬರ ಕೆಲಸ ಮತ್ತೊಬ್ಬರ ಸಾಧನೆಗೆ ಪೂರಕವಾಗಿ ಇರುತ್ತದೆ. ಆಡಳಿತದ ಚುಕ್ಕಾಣಿ ಹಿಡಿದಿರುವವರು ಇಲಾಖಾ ಕಾರ್ಯದರ್ಶಿಗಳ ಸಲಹೆಗಳನ್ನು ತಳ್ಳಿಹಾಕಬಾರದು. ಸರ್ಕಾರದ ಎಲ್ಲ ಕೆಲಸಗಳೂ ಸಾರ್ವಜನಿಕ ಹಿತಾಸಕ್ತಿಯನ್ನೇ ಮೂಲ ಉದ್ದೇಶವನ್ನಾಗಿ ಇರಿಸಿಕೊಂಡಿರಬೇಕು' ಎಂದರು.

ಮುಖ್ಯ ಕಾರ್ಯದರ್ಶಿ ಕೌಶಿಕ್ ಮುಖರ್ಜಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಪ್ರಧಾನ ಕಾರ್ಯದರ್ಶಿ ಶಾಲಿನಿ ರಜನೀಶ್, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಲ್.ಬೈರಪ್ಪ ಮತ್ತಿತರರು ಉಪಸ್ಥಿತರಿದ್ದರು.

# 'ಸಕಾಲದಲ್ಲಿ ಸೇವೆ ತಡವಾದರೆ ದೂರು ನೀಡಿ ಪರಿಹಾರ ಪಡೆಯಿರಿ'

**ವ್ಯವಸ್ಥೆ ಒಳಗಿದ್ದು ಧ್ವನಿ ಎತ್ತಿ**

**ಸಕಾಲದಲ್ಲೂ ಕೆಲವು ಸಣ್ಣ ದೋಷಗಳಿವೆ. ಆದರೆ ಆ ದೋಷ, ಗೊಂದಲಮಯ ವ್ಯವಸ್ಥೆಯನ್ನು ನಿವಾರಿಸಲು ಮೊದಲು ಜನತೆ ಸಕಾಲ ಬಳಕೆಗೆ ಮುಂದಾಗಬೇಕು. ವ್ಯವಸ್ಥೆ ಹೊರಗಿದ್ದು ಸಮಸ್ಯೆ ಬಗ್ಗೆ ಮಾತನಾಡುವುದಕ್ಕಿಂತ, ವ್ಯವಸ್ಥೆ ಒಳಗಿದ್ದು ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಬೇಕು. ಆದರಂತೆ ಸಕಾಲದ ಬಳಕೆ ಹೆಚ್ಚಿದರೆ ಅದರಲ್ಲಿರುವ ಸಮಸ್ಯೆಗಳೂ ನಿವಾರಣೆಯಾಗುತ್ತವೆ. ಜತೆಗೆ ಈಗಿರುವ ಸೇವೆಗಳನ್ನೂ ವಿಸ್ತರಿಸಬಹುದು.**

। ಸಂತೋಷ ನರಗುಂದ

**ಹುಬ್ಬಳ್ಳಿ:** ಸಕಾಲದಲ್ಲಿ ನಿಗದಿತ ವೇಳೆಯೊಳಗೆ ಸೇವೆ ಪಡೆಯಬಹುದು. ತಡವಾದರೆ ಅದರ ವಿರುದ್ಧ ದೂರು ನೀಡಿ ಪರಿಹಾರ ಪಡೆದುಕೊಳ್ಳಬಹುದು. ಸರ್ಕಾರಿ ಕಚೇರಿಗಳಲ್ಲಿ ಲಂಚ ನೀಡಿ ಸೇವೆ ಪಡೆಯುವ ವ್ಯವಸ್ಥೆ ನಿರ್ಮೂಲನೆ ಮಾಡಲು 'ಸಕಾಲ' ಸಹಕಾರಿಯಾಗಿದೆ ಎಂದು ರಾಷ್ಟ್ರೋತ್ಥಾನ ಸಂಕಲ್ಪ ಟ್ರಸ್ಟ್ ಸಂತೋಷ ನರಗುಂದ ಅಭಿಪ್ರಾಯ ವ್ಯಕ್ತಪಡಿಸಿದರು.

ಹುಬ್ಬಳ್ಳಿ ಮಿನಿ ವಿಧಾನಸೌಧದ ಸಭಾಭವನದಲ್ಲಿ ಗುರುವಾರ ಏರ್ಪಡಿಸಿದ್ದ ಸಕಾಲ ಜನಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಬೇರೆ ರಾಜ್ಯಗಳಲ್ಲಿ ಈ ಸಕಾಲ ವ್ಯವಸ್ಥೆ ಇದ್ದರೂ ಕರ್ನಾಟಕದಲ್ಲಿರುವಷ್ಟು ಅನುಕೂಲತೆಗಳು, ಸೇವೆಗಳು, ಐಟಿ ಸೌಲಭ್ಯ ಅಲ್ಲಿ ಲಭ್ಯವಿಲ್ಲ. ಜತೆಗೆ ಕರ್ನಾಟಕದಲ್ಲಿ 50 ಸೇವೆಗಳನ್ನು ಈಗಾಗಲೇ ಆನ್‌ಲೈನ್ ಸೌಲಭ್ಯಕ್ಕೆ ಒಳಪಡಿಸಲಾಗಿದೆ. ಆದ್ದರಿಂದ ಜನತೆ ಇದರ ಪ್ರಯೋಜನ ಪಡೆಯಬೇಕು' ಎಂದರು.



ಹುಬ್ಬಳ್ಳಿಯ ಮಿನಿ ವಿಧಾನಸೌಧದ ಸಭಾಭವನದಲ್ಲಿ ಗುರುವಾರ ಏರ್ಪಡಿಸಿದ್ದ ಸಕಾಲ ಜನಜಾಗೃತಿ ಕಾರ್ಯಕ್ರಮದಲ್ಲಿ ರಾಷ್ಟ್ರೋತ್ಥಾನ ಸಂಕಲ್ಪ ಟ್ರಸ್ಟ್ ಸಂತೋಷ ನರಗುಂದ ಮಾಹಿತಿ ನೀಡಿದರು.

ನಮ್ಮ ವ್ಯವಸ್ಥೆಯಲ್ಲಿರುವ ಭ್ರಷ್ಟಾಚಾರ ಹೊಡೆದೋಡಿಸಲು ಕ್ರಾಂತಿ ಬೇಡ, ಲಂಚ ನೀಡುವುದಿಲ್ಲ ಎಂಬ ಸಂಕಲ್ಪ ಬೇಕು. ಆದ್ದರಿಂದ ಪ್ರತಿಯೊಬ್ಬರೂ ಯಾವುದೇ ಸೇವೆ ಪಡೆಯುವಾಗ ಲಂಚ ನೀಡುವುದಿಲ್ಲ ಎಂಬ ಸಂಕಲ್ಪ ಮಾಡಬೇಕು' ಎಂದು ಹೇಳಿದರು.

'ಸಕಾಲದಲ್ಲಿ ಸೇವೆ ಪಡೆಯಲು ಅರ್ಜಿ ಹಾಕಿದಾಗ 12 ಸಂಖ್ಯೆಗಳುಳ್ಳ ಟೋಕನ್ ನೀಡಲಾಗುತ್ತದೆ. ಬಳಕೆದಾರರು ಆ ಸಂಖ್ಯೆಯನ್ನು ಮರೆಯದೇ ಪಡೆದುಕೊಳ್ಳಬೇಕು. ಅದರಿಂದ ಸೇವೆಯಲ್ಲಿ ತೊಂದರೆಯಾದಾಗ, ತಡವಾದಾಗ ದೂರು ನೀಡಲು ಅನುಕೂಲವಾಗುತ್ತದೆ. ಅಧಿಕಾರಿಗಳು ಆ ಸಂಖ್ಯೆಯನ್ನು ನೀಡಲು ನಿರಾಕರಿಸಿದರೆ ಸಹಾಯವಾಣಿ (080-44554455) ಸಂಪರ್ಕಿಸಿ ನಿಮ್ಮ ಸಮಸ್ಯೆ ತಿಳಿಸಬೇಕು. ಆಗ ಸಂಬಂಧಪಟ್ಟ ಅಧಿಕಾರಿಗಳು ನಿಮ್ಮ ಸಮಸ್ಯೆಗೆ ಪರಿಹಾರ ಒದಗಿಸುತ್ತಾರೆ' ಎಂದರು.

'ಇದೊಂದು ಸರ್ಕಾರಿ ಯೋಜನೆಯಾಗಿದ್ದು ಜನತೆ ಈ ಕುರಿತು ಮಾಹಿತಿ ಪಡೆದುಕೊಳ್ಳಬೇಕು' ಎಂದ ಅವರು, ಸಕಾಲ ಬಳಕೆ, ವ್ಯವಸ್ಥೆ, ಪ್ರಕ್ರಿಯೆ ಕುರಿತು ತಿಳಿಸಿದರು. ಧಾರವಾಡ ಜಿಲ್ಲಾ ಐಟಿ ಸಂಯೋಜಕ ಶ್ರೀಕಾಂತ, ಇತರರು ಉಪಸ್ಥಿತರಿದ್ದರು.

# ಕರ್ನಾಟಕ ಸರ್ಕಾರದ 'ಸಕಾಲ' ಕ್ಕೆ ರಾಷ್ಟ್ರೀಯ ಪ್ರಶಸ್ತಿ

Posted by: Mahesh    Updated: Tuesday, January 7, 2014, 11:55 [IST]

ಬೆಂಗಳೂರು, ಜ. 7: ಕರ್ನಾಟಕ ಸರ್ಕಾರದ ಇ ಆಡಳಿತ ಸೇವೆಯ ಮಹತ್ವದ ಯೋಜನೆ ಕಾಲಮಿತಿಯಲ್ಲಿ ಸೇವೆ ಒದಗಿಸುವ 'ಸಕಾಲ' ಯೋಜನೆಗೆ 2013-14ನೆ ಸಾಲಿನ ಇ-ಆಡಳಿತ ರಾಷ್ಟ್ರ ಪ್ರಶಸ್ತಿ ಲಭಿಸಿದೆ. ರಾಜ್ಯ ಸರ್ಕಾರದ 'ಸಕಾಲ' ಯೋಜನೆ ಪ್ರಶಸ್ತಿಗೆ ಆಯ್ಕೆಯಾಗಿರುವುದಾಗಿ ಕೇಂದ್ರ ಸರಕಾರದ ಅಧೀನ ಕಾರ್ಯದರ್ಶಿ, ರಾಜ್ಯ ಸರಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹಾಗೂ 'ಸಕಾಲ' ಯೋಜನಾ ನಿರ್ದೇಶಕಿ ಡಾ.ಶಾಲಿನಿ ರಜನೀಶ್ ಗೆ ತಿಳಿಸಿದ್ದಾರೆ.

ನಾಗರಿಕ ಕೇಂದ್ರಿತ ಸೇವಾ ಪೂರೈಕೆಯಲ್ಲಿ ವಿಶಿಷ್ಟ ಸಾಧನೆಯ ವರ್ಗದಲ್ಲಿ ಅದಕ್ಕೆ ಬೆಳ್ಳಿಯ ಪದಕ ದೊರೆತಿದೆ. ಕೇರಳದ ಕೊಚ್ಚಿಯಲ್ಲಿ ಜ. 30 ಹಾಗೂ 31ರಂದು ನಡೆಯುವ ಇ-ಆಡಳಿತದ ಕುರಿತ 17ನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. ಭಾರತದ ಇತ್ತೀಚಿನ ಚರಿತ್ರೆಯಲ್ಲಿ ನಾಗರಿಕರಿಗೆ ಸರಕಾರಿ ಇಲಾಖೆಗಳ ಸೇವೆಯನ್ನು ಕಾಲಬದ್ಧವಾಗಿ ಒದಗಿಸುವ ಶಾಸನಾತ್ಮಕ ಭರವಸೆ ನೀಡಲಾಗಿದೆ. ಇದನ್ನು ಕರ್ನಾಟಕದಲ್ಲಿ 'ಸಕಾಲ' ಎಂಬ ಹೆಸರಿನಿಂದ ಕರೆಯಲಾಗುತ್ತಿದೆ.

ದೇಶದ 14 ರಾಜ್ಯಗಳಲ್ಲಿ ಈ ಕಾಯ್ದೆ ಜಾರಿಯಲ್ಲಿದ್ದು, ಕೇಂದ್ರೀಯ ಕಾಯ್ದೆಯೊಂದರ ಪ್ರಸ್ತಾವವೂ ಇದೆ. ಕರ್ನಾಟಕದಲ್ಲಿ ನೂರಕ್ಕೂ ಹೆಚ್ಚು ಸೇವೆಗಳು ಸಕಾಲದ ವ್ಯಾಪ್ತಿಯಲ್ಲಿದ್ದು, ಕಾಲಬದ್ಧವಾಗಿ ಸೇವೆಯೊದಗಿಸಲು ವಿಫಲರಾದ ಅಧಿಕಾರಿಗಳಿಗೆ ದಂಡ ವಿಧಿಸಲಾಗುತ್ತದೆ. ಕಚೇರಿಗಳಲ್ಲಿ ಸಿಬ್ಬಂದಿಯ ತೀವ್ರ ಕೊರತೆಯ ನಡುವೆಯೂ ರಾಜ್ಯ ಈ ಒಂದು ಸಾಧನೆ ನಡೆಸಿರುವುದು ಹೆಮ್ಮೆಯ ವಿಷಯವಾಗಿದೆ.

ಸಕಾಲ: ಕರ್ನಾಟಕ ನಾಗರಿಕ ಸೇವಾ ಖಾತರಿ ಅಧಿನಿಯಮ -2012 ಅಥವಾ ಸಕಾಲ ಯೋಜನೆ ಏ.2ರಿಂದ ಬೆಂಗಳೂರು ಸೇರಿದಂತೆ ರಾಜ್ಯದ 30 ಜಿಲ್ಲೆಗಳಲ್ಲಿ ಅನುಷ್ಠಾನಕ್ಕೆ ಬಂದಿದೆ. ನಾಗರಿಕರಿಗೆ ವಿಳಂಬವಿಲ್ಲದೆ ಸರ್ಕಾರಿ ಸೇವೆಗಳನ್ನು ಒದಗಿಸುವ ದೃಷ್ಟಿಯಿಂದ ಸರ್ಕಾರ ಯೋಜನೆಗೆ ಅಂದಿನ ಮುಖ್ಯಮಂತ್ರಿ ಡಿವಿ ಸದಾನಂದ ಗೌಡ ಅವರು ಚಾಲನೆ ನೀಡಿದ್ದರು.

ನಾಗರಿಕರಿಗೆ ವಿವಿಧ ರೀತಿಯ ಸೇವೆಗಳನ್ನು ಪೂರೈಸುವ 11 ಇಲಾಖೆ-ಕಂದಾಯ, ಶಿಕ್ಷಣ, ಆರ್ಥಿಕ ಇಲಾಖೆ, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಆಹಾರ ಮತ್ತು ನಾಗರಿಕ ಪೂರೈಕೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸ್ಥಳೀಯ ಸಂಸ್ಥೆಗಳು, ಕಾರ್ಮಿಕ ಇಲಾಖೆ, ಸಾರಿಗೆ ಇಲಾಖೆ ಮತ್ತು ಆರೋಗ್ಯ ಇಲಾಖೆಗಳ ಒಟ್ಟು 151 ಸೇವೆಗಳನ್ನು ಈ ಕಾಯ್ದೆಯ ವ್ಯಾಪ್ತಿಯಲ್ಲಿ ತರಲಾಗಿದೆ. ಇನ್ನಷ್ಟು ಇಲಾಖೆಗಳನ್ನು ಸಕಾಲ ವ್ಯಾಪ್ತಿಗೆ ಸೇರಿಸಲಾಗುತ್ತಿದೆ.




ಸೇವೆ ಟ್ರ್ಯಾಕ್ ಮಾಡಿ: ಅರ್ಜಿದಾರರು ತಮ್ಮ ಮೊಬೈಲ್ ಸಂಖ್ಯೆ ನೀಡಿದಲ್ಲಿ ಅವರಿಗೆ ಎಸ್‌ಎಂಎಸ್ ಮೂಲಕ ಅರ್ಜಿಯ ಪ್ರಗತಿಯ ಕುರಿತು ವರದಿ ದೊರಕುತ್ತದೆ. ಮೊಬೈಲ್ ಇಲ್ಲದಿದ್ದಲ್ಲಿ ಅರ್ಜಿದಾರರು ವೆಬ್ ಸೈಟ್ ಮೂಲಕ ತಮ್ಮ ಅರ್ಜಿಯ ಪ್ರಗತಿಯನ್ನು ಪರಿಶೀಲಿಸಬಹುದಾಗಿದೆ. ಅಥವಾ ಸಕಾಲ ದ ಕಾಲ್ ಸೆಂಟರ್ ಗೆ ಕರೆಮಾಡಿ ಅರ್ಜಿ ಪ್ರಗತಿ ಬಗ್ಗೆ ವಿವರ ಪಡೆಯಬಹುದು. [ಸಕಾಲಕ್ಕೆ ಸಖತ್ ತಯಾರಿ!]

ಸಂಪರ್ಕ ವಿಳಾಸ: ದೂರವಾಣಿ ಸಂಖ್ಯೆ 080-44554455 ಗೆ ಕರೆಮಾಡಿ

• ಈ ಕಾಯ್ದೆಯ ವೆಬ್ ವಿಳಾಸ www.sakala.kar.nic.in

• ಇ-ಮೇಲ್ ವಿಳಾಸ sakala@kar.in ಅಂತರ್ಜಾಲ ಮುಖಾಂತರವೂ ಸಾರ್ವಜನಿಕರು ಈ ಕಾಯ್ದೆಯ ಸೌಲಭ್ಯ ಪಡೆದುಕೊಳ್ಳಬಹುದಾಗಿದೆ

ಸಕಾಲ ಸೇವೆಗಳು ಮೊಬೈಲ್ ನಲ್ಲಿ : ಈ ವ್ಯವಸ್ಥೆಯನ್ನು ಮಾನ್ಯ ಮುಖ್ಯಮಂತ್ರಿಗಳು 21ರಂದು ಬೆಂಗಳೂರಿನ ವಿಧಾನಸೌಧದಲ್ಲಿ ಉದ್ಘಾಟಿಸಿದರು. ಇದರಲ್ಲಿ ನಾಗರಿಕರು ತಮ್ಮ ಸರಕಾರಿ ಸೇವೆಗಳ ಅರ್ಜಿ ಸ್ಥಿತಿಯನ್ನು ತಿಳಿಯಬಹುದು.



ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

# ‘ಸಕಾಲ’ಕ್ಕೆ ಕಾರ್ಪೊರೇಟ್ ಸಹಕಾರ

Sat, 01/18/2014 - 01:00

**ಬೆಂಗಳೂರು:** ‘ಸಕಾಲ’ ಯೋಜನೆ ಬಗ್ಗೆ ಗ್ರಾಮೀಣ ಜನರಿಗೆ ಅರಿವು ಮೂಡಿಸಲು ಸರ್ಕಾರದೊಂದಿಗೆ ಕೈಜೋಡಿಸುವುದಾಗಿ ಕಾರ್ಪೊರೇಟ್ ಸಂಸ್ಥೆಗಳು ಒಪ್ಪಿಗೆ ಸೂಚಿಸಿವೆ. ನವದೆಹಲಿಯ ಇನ್‌ಸ್ಟಿಟ್ಯೂಟ್ ಆಫ್ ಡೈರೆಕ್ಟರ್ಸ್ ವತಿಯಿಂದ ಶುಕ್ರ-ವಾರ ನಗರದಲ್ಲಿ ಏರ್ಪಡಿಸಿದ್ದ ಕಾರ್ಪೊ-ರೇಟ್ ಸಂಸ್ಥೆಗಳ ಸಾಮಾಜಿಕ ಜವಾ-ಬ್ದಾರಿ ಕುರಿತ ಅಂತರರಾಷ್ಟ್ರೀಯ ಸಮ್ಮೇ-ಳ-ನದಲ್ಲಿ ಸಕಾಲ ಮಿಷನ್ ನಿರ್ದೇಶಕಿ ಡಾ. ಶಾಲಿನಿ ರಜನೀಶ್ ಅವರ ಮನವಿಗೆ ಸಮ್ಮತಿ ವ್ಯಕ್ತವಾಯಿತು.

ಕಾರ್ಪೊರೇಟ್ ಉದ್ಯೋಗಿಗಳು ಸಕಾಲ ಮಿತ್ರರಾಗಿ ಸ್ವಯಂಸೇವೆ ಮಾಡಬೇಕು. ಗ್ರಾಮಗಳ ದತ್ತು, ಹಳ್ಳಿಗಳಲ್ಲಿ ಸಹಾಯ ಕೇಂದ್ರ ಸ್ಥಾಪನೆ, ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಗಳ ಮೇಲ್ವಿಚಾರಣೆಗೆ ಕಿಯಾಸ್ಕ್ ಸ್ಥಾಪಿಸಲು ಸಂಸ್ಥೆಗಳು ನೆರವು ನೀಡುವಂತೆ ಶಾಲಿನಿ ಮನವಿ ಮಾಡಿದರು.

ಮುದ್ರಣ, ವಿದ್ಯುನ್ಮಾನ ಮಾಧ್ಯಮ-ಗಳು, ಕಿರುಹೊತ್ತಿಗೆ, ಕ್ಯಾಲೆಂಡರ್-ಗಳು ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ ಸಕಾಲದ ಬಗ್ಗೆ ಜನರಿಗೆ ಅರಿವು ಮೂಡಿಸಲು ಪ್ರಯತ್ನಿಸುವುದಾಗಿ ತಿಳಿಸಿದ ಕಾರ್ಪೊರೇಟ್ ಸಂಸ್ಥೆಗಳು, ಗ್ರಾಮೀಣ ಭಾಗಗಳ ಸೈಬರ್ ಸೆಂಟರ್‌ಗಳಲ್ಲಿ ಸಂಪರ್ಕಗಳನ್ನು ಹೆಚ್ಚಿ-ಸಲು ಕಂಪ್ಯೂಟರ್, ಲ್ಯಾಪ್-ಟಾಪ್, ಪ್ರಿಂಟರ್ ಹಾಗೂ ಯು.ಪಿ.ಎಸ್‌ಗಳನ್ನು ನೀಡುವುದಾಗಿ ಹೇಳಿದವು. ಡಿಎಲ್‌ಎಫ್, ಮಹೀಂದ್ರ, ಮಹಿಳಾ ಉದ್ಯಮಿಗಳ ಒಕ್ಕೂಟ, ಆಫ್ರಿಕಾದ ಅಂತರರಾಷ್ಟ್ರೀಯ ವ್ಯಾಪಾರ ವೇದಿಕೆ ಮತ್ತಿತರ ಕಾರ್ಪೊರೇಟ್ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

# ವಿಧಾನಸೌಧವೂ ಸಕಾಲ ವ್ಯಾಪ್ತಿಗೆ: ಸಿಎಂ

*ಉದಯವಾಣಿ– ಶು., ೨೪ ಜನವರೀ, ೨೦೧೪*

- [ಫೋಟೋ ವೀಕ್ಷಿಸಿ]

ವಿಧಾನಸೌಧವೂ ಸಕಾಲ ವ್ಯಾಪ್ತಿಗೆ: ಸಿಎಂ

ವಿಧಾನಪರಿಷತ್ತು: ರಾಜ್ಯ ಸಚಿವಾಲಯವನ್ನು ಶೀಘ್ರದಲ್ಲೇ 'ಸಕಾಲ' ವ್ಯಾಪ್ತಿಗೆ ತರಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಕೋಟಾ ಶ್ರೀನಿವಾಸ ಪೂಜಾರಿ ಪ್ರಶ್ನೆಗೆ ಪೂರಕವಾಗಿ ಪ್ರತಿಪಕ್ಷ ನಾಯಕ ಡಿ.ವಿ.ಸದಾನಂದಗೌಡ, ಮೇಲು ಹಂತದ ಕಚೇರಿಗಳನ್ನು ಸಕಾಲ ವ್ಯಾಪ್ತಿಗೆ ತಂದರೆ ಶೇ.70ರಷ್ಟು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಸಾಧ್ಯ. ಮಾರ್ಚ್ ಅಂತ್ಯದ ವೇಳೆಗೆ ಸಚಿವಾಲಯವನ್ನು ಸಕಾಲ ವ್ಯಾಪ್ತಿಗೆ ತನ್ನಿ ಎಂದು ಆಗ್ರಹಿಸಿದರು. ಇದ್ದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಆದಷ್ಟು ಶೀಘ್ರ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ವಿಧಾನಸೌಧ, ವಿಕಾಸಸೌಧ, ಬಹುಮಹಡಿ ಕಟ್ಟಡದಲ್ಲಿರುವ ಕಚೇರಿಗಳು ಸೇರಿದಂತೆ ಸಚಿವಾಲಯದ ಎಲ್ಲ ಕಚೇರಿಗಳನ್ನು ಸಕಾಲ ವ್ಯಾಪ್ತಿಗೆ ತರಲು ಸರ್ಕಾರ ಸಿದ್ಧವಿದೆ. ಈ ವಿಚಾರದಲ್ಲಿ ಯಾರೇ ಅಡ್ಡಿ ಪಡಿಸಿದರೂ, ಒತ್ತಡ ಹೇರಿದರೂ ಅದನ್ನು ಲೆಕ್ಕಿಸಿದೆ ಕ್ರಮ ಕೈಗೊಳ್ಳಲಾಗುವುದು. ಈ ನಿಟ್ಟಿನಲ್ಲಿ ಹಿಂದೆ ಸರಿಯುವ ಅಥವಾ ವಿಳಂಬ ಮಾಡುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಈಗಾಗಲೇ 46 ಇಲಾಖೆಗಳು ಮತ್ತು ಸಂಸ್ಥೆಗಳ 447 ಸೇವೆಗಳನ್ನು ಸಕಾಲ ವ್ಯಾಪ್ತಿಗೆ ತರಲಾಗಿದೆ. ಸಚಿವಾಲಯದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ 21 ಸೇವೆಗಳು ಮತ್ತು ಆರ್ಥಿಕ ಇಲಾಖೆಯ 6 ಸೇವೆಗಳನ್ನು ಸಕಾಲದಡಿ ತರಲಾಗಿದೆ. ಇನ್ನುಳಿದ ಸಚಿವಾಲಯ ಇಲಾಖೆಗಳಿಂದ ಪ್ರಸ್ತಾವನೆಗಳನ್ನು ನಿರೀಕ್ಷಿಸಲಾಗಿದೆ. ಸಚಿವಾಲಯವನ್ನು ಸಕಾಲ ವ್ಯಾಪ್ತಿಗೆ ತಂದು ಒಂದು ಸಾವಿರ ಸೇವೆಗಳನ್ನು ಸೇರಿಸಬೇಕಾಗುತ್ತದೆ. ವಿವಿಧ ಇಲಾಖೆಗಳ 477 ಸೇವೆಗಳನ್ನು ಸಕಾಲ ವ್ಯಾಪ್ತಿಗೆ ತರುವ ಮೂಲಕ ಶೇ.50ರಷ್ಟು ಗುರಿ ಸಾಧಿಸಲಾಗಿದೆ. ಬಾಕಿ ಶೇ.50 ಸೇವೆಗಳನ್ನು ಸಕಾಲಕ್ಕೆ ಸೇರಿಸಲು ಆದಷ್ಟು ಶೀಘ್ರ ಕ್ರಮ ಕೈಗೊಳ್ಳಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದರು

## ಅನುಬಂಧ –ಎ

ಸಕಾಲ ಮಿಷನ್  ಈಗ ಐ ಎಸ್ ಒ ಪ್ರಮಾಣಿಕರಣದ ಸಲುವಾಗಿ ಐ ಎಸ್ ಒ ಆಡಿಟ್ ನ ಹಂತವನ್ನು ಪೂರ್ಣಗೊಳಿಸಿ ಐ ಎಸ್ ಒ ಪ್ರಮಾಣ ಪತ್ರವನ್ನು ಗಳಿಸಿದೆ. ಪ್ರಮಾಣ ಪತ್ರವನ್ನು ಇಲ್ಲಿ ಲಗತ್ತಿಸಲಾಗಿದೆ.



# Certificate of Registration

Intertek

This is to certify that the quality management system of

## Sakala Mission

**Room No. 612, 6th Floor, M. S. Building, Ambedkar Veedhi,**
**Bangalore - 560001, Karnataka, India**

has been assessed and registered by Intertek as conforming to the requirements of:

## ISO 9001:2008

The quality management system is applicable to

*Co-ordination Activities in SAKALA MISSION covering most sought after 'Sakala Services' in departments of Revenue, Commercial Taxes, Food and Civil supplies, Transport, BBMP (Urban Development Department).*

| | |
|---|---|
| Certificate Number: | 0008897-00 |
| Issue Date: | 05 February 2014 |
| Certificate Expiry Date: | 04 February 2017 |

NABCB
QM033

*Authorised Signature: Ekta Malhotra*
*Intertek India Private Limited – Mumbai, India*

In the issuance of this certificate, Intertek assumes no liability to any party other than to the Client, and then only in accordance with the agreed upon Certification Agreement. This certificate's validity is subject to the organization maintaining their system in accordance with Intertek's requirements for systems certification. Validity may be confirmed via email at certificate.validation@intertek.com or by scanning the code to the right with a smartphone.

The certificate remains the property of Intertek, to whom it must be returned upon request.

CT-ISO22000:2005-NABCB-EN-A4-20.Oct.2012

## ಅನುಬಂಧ –ಬಿ

## ಹೊಸತಾಗಿ ಸೇರ್ಪಡೆಯಾಗಿರುವ ಸೇವೆಗಳ ಪಟ್ಟಿ

ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ರ (ಕರ್ನಾಟಕ ಅಧಿನಿಯಮ 01, 2012) ಇದರ ಪ್ರಕರಣ 4 ರಲ್ಲಿನ ಹಾಗೂ ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ 1899 (**KA. III. 1899**) ರ ಪ್ರಕರಣ 21 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸದರಿ ಅಧಿನಿಯಮದ ಅನುಸೂಚಿಯನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಿದೆ. ಅದು ಯಾವುದೆಂದರೆ:–

2. ಶೀರ್ಷಿಕೆ "2 – ಸಾರಿಗೆ ಇಲಾಖೆ" ಯ ಕ್ರಮ ಸಂಖ್ಯೆ: 11 ರ ಸೇವೆಗಳ ನಂತರ ಈ ಕೆಳಕಂಡ ಸೇವೆಗಳ ನಮೂದುಗಳನ್ನು ಸೇರಿಸಿ ಓದಿಕೊಳ್ಳತಕ್ಕದ್ದು ಎಂದರೆ :–

| ಕ್ರ.ಸಂ | ಸೇವೆಗಳ ಪಟ್ಟಿ | ಹೆಸರಿಸಲಾದ ಅಧಿಕಾರಿ | ಹೆಸರಿಸಲಾದ ಅಧಿಕಾರಿಗೆ ಗೊತ್ತು ಮಾಡಿದ ಕಾಲ | ಸಕ್ಷಮ ಅಧಿಕಾರಿ | ಸಕ್ಷಮ ಅಧಿಕಾರಿಯು ವಿಲೆ ಮಾಡುವುದಕ್ಕೆ ಕಾಲ ಮಿತಿ | ಮೇಲ್ಮನವಿ ಪ್ರಾಧಿಕಾರ | ಮೇಲ್ಮನವಿ ಪ್ರಾಧಿಕಾರಿಯು ವಿಲೆ ಮಾಡುವುದಕ್ಕೆ ಕಾಲಮಿತಿ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 12 | ಕಲಿಕೆ ಪರವಾನಗಿ ನಕಲು | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 07 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 13 | ಚಾಲನಾ ಪರವಾನಗಿಯಲ್ಲಿ ಹೊಸ ವರ್ಗವನ್ನು ಸೇರ್ಪಡೆ ಮಾಡುವಿಕೆ | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 30 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 14 | ಕಲಿಕೆಯ ಪರವಾನಗಿಯಲ್ಲಿ ವಿಳಾಸ ಬದಲಾವಣೆ ಟಿಪ್ಪಣಿ | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 07 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 15 | ಚಾಲಕರಿಗೆ ಪಿಎಸ್‌ವಿ ಬ್ಯಾಡ್ಜ್ ವಿತರಣೆ | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 30 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 16 | ಚಾಲಕನ ನಕಲು ಬ್ಯಾಡ್ಜ್ ವಿತರಣೆ | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 30 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 17 | ಚಾಲನಾ ತರಬೇತಿ ಶಾಲೆ ಸ್ಥಾಪನೆಗೆ ಪರವಾನಗಿ | ಪ್ರಾ.ಸಾ.ಅ | 45 ಕೆಲಸದ ದಿನಗಳು | ಉ.ಸಾ.ಆ | 30 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 18 | ಚಾಲನಾ ತರಬೇತಿ ಶಾಲೆಯ ಪರವಾನಗಿ ನವೀಕರಣ | ಪ್ರಾ.ಸಾ.ಅ | 30 ಕೆಲಸದ ದಿನಗಳು | ಉ.ಸಾ.ಆ | 30 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 19 | ನಿರ್ವಾಹಕರ ಪರವಾನಗಿ ಮತ್ತು ಬ್ಯಾಡ್ಜ್ ನೀಡುವಿಕೆ | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 30 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |

| | | | | | | | |
|---|---|---|---|---|---|---|---|
| 20 | ನಿರ್ವಾಹಕರ ಪರವಾನಗಿ ನವೀಕರಣ | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 30 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 21 | ನಿರ್ವಾಹಕರ ಪರವಾನಗಿಯಲ್ಲಿ ವಿಳಾಸ ಬದಲಾವಣೆಯ ಟಿಪ್ಪಣಿ | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 15 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 22 | ನಿರ್ವಾಹಕರ ಪರವಾನಗಿ ಮತ್ತು ಬ್ಯಾಡ್ಜ್‌ನ ನಕಲು | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 15 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 23 | ಅಂತರ ರಾಷ್ಟ್ರೀಯ ಚಾಲನಾ ಪರವಾನಗಿ | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 07 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 24 | ತಾತ್ಕಾಲಿಕ ನೋಂದಣಿ | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 7 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 25 | ಇತರ ರಾಜ್ಯ ವಾಹನ ಸಂಬಂಧಪಟ್ಟಂತೆ ಹೊಸ ನೋಂದಣಿ ಅಸೈನ್‌ಮೆಂಟ್ | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 45 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 26 | ಮಾಲೀಕತ್ವ ವರ್ಗಾವಣೆ | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 30 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 27 | ವಾಹನ ಮಾಲೀಕರ ಸಾವಿನ ನಂತರ ಮಾಲೀಕತ್ವದ ವರ್ಗಾವಣೆ ಟಿಪ್ಪಣಿ | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 60 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 28 | ಸಾರ್ವಜನಿಕ ಹರಾಜಿನಲ್ಲಿ ಖರೀದಿಸಿದ ವಾಹನದ ಮಾಲೀಕತ್ವದ ವರ್ಗಾವಣೆ (ಕರ್ನಾಟಕ ರಾಜ್ಯ) | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 30 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 29 | ರಿಜಿಸ್ಟರ್ ಸಾರ (ಎಕ್ಸ್‌ಟ್ರಾಕ್ಟ್) | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 07 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 15 ಕೆಲಸದ ದಿನಗಳು |
| 30 | ಹೈಪೋಥಿಕೇಷನ್ ಪ್ರವೇಶ/ಬಾಡಿಗೆ/ಖರೀದಿ/ ಗುತ್ತಿಗೆ ಒಪ್ಪಂದ | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 15 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |
| 31 | ಕ್ಲಿಯರೆನ್ಸ್/ತೆರವು ಪ್ರಮಾಣ ಪತ್ರ ವಿತರಣೆ | ಪ್ರಾ.ಸಾ.ಅ./ ಸ.ಪ್ರಾ.ಸಾ.ಅ. | 30 ಕೆಲಸದ ದಿನಗಳು | ಉ.ಸಾ.ಆ | 15 ಕೆಲಸದ ದಿನಗಳು | ಜಂ.ಸಾ.ಆ. | 30 ಕೆಲಸದ ದಿನಗಳು |

**13. ಶೀರ್ಷಿಕೆ "13 – ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀನುಗಾರಿಕೆ)" ಯ ಕ್ರಮ ಸಂಖ್ಯೆ: 3 ರ ಸೇವೆಗಳ ನಂತರ ಈ ಕೆಳಕಂಡ ಸೇವೆಗಳ ನಮೂದುಗಳನ್ನು ಸೇರಿಸಿ ಓದಿಕೊಳ್ಳತಕ್ಕದ್ದು ಎಂದರೆ :–**

| ಕ್ರ.ಸಂ | ಸೇವೆಗಳ ಪಟ್ಟಿ | ಹೆಸರಿಸಲಾದ ಅಧಿಕಾರಿ | ಹೆಸರಿಸಲಾದ ಅಧಿಕಾರಿಗೆ ಗೊತ್ತು ಮಾಡಿದ ಕಾಲ | ಸಕ್ಷಮ ಅಧಿಕಾರಿ | ಸಕ್ಷಮ ಅಧಿಕಾರಿಯು ವಿಲೆ ಮಾಡುವುದಕ್ಕೆ ಕಾಲ ಮಿತಿ | ಮೇಲ್ಮನವಿ ಪ್ರಾಧಿಕಾರ | ಮೇಲ್ಮನವಿ ಪ್ರಾಧಿಕಾರಿಯು ವಿಲೆ ಮಾಡುವುದಕ್ಕೆ ಕಾಲಮಿತಿ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 4 | ಮೀನುಮರಿ ಖರೀದಿಗೆ ಸಹಾಯಧನ ನೀಡುವುದು | ಮೀನುಗಾರಿಕೆ ಸಹಾಯಕ ನಿರ್ದೇಶಕರು, ಶ್ರೇಣಿ–2 | 70 ಕೆಲಸದ ದಿನಗಳು | ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು/ಮೀನುಗಾರಿಕೆ ಸಹಾಯಕ ನಿರ್ದೇಶಕರು, ಶ್ರೇಣಿ–1 | 15 ಕೆಲಸದ ದಿನಗಳು | ಮೀನುಗಾರಿಕೆ ಉಪ ನಿರ್ದೇಶಕರು | 30 ಕೆಲಸದ ದಿನಗಳು |
| 5 | ಮೀನುಗಾರಿಕೆ ಕಿಟ್ ವಿತರಣೆಗೆ ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡುವುದು | ಮೀನುಗಾರಿಕೆ ಸಹಾಯಕ ನಿರ್ದೇಶಕರು, ಶ್ರೇಣಿ–2 | 60 ಕೆಲಸದ ದಿನಗಳು | ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು/ಮೀನುಗಾರಿಕೆ ಸಹಾಯಕ ನಿರ್ದೇಶಕರು, ಶ್ರೇಣಿ–1 | 15 ಕೆಲಸದ ದಿನಗಳು | ಮೀನುಗಾರಿಕೆ ಉಪ ನಿರ್ದೇಶಕರು | 30 ಕೆಲಸದ ದಿನಗಳು |
| 6 | ಮೀನುಮರಿ ಉತ್ಪಾದನ ಮತ್ತು ಪಾಲನ ಕೇಂದ್ರಗಳ ನೋಂದಣಿ ಮಾಡುವುದು | ಮೀನುಗಾರಿಕೆ ಸಹಾಯಕ ನಿರ್ದೇಶಕರು, ಶ್ರೇಣಿ–2 | 60 ಕೆಲಸದ ದಿನಗಳು | ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು/ಮೀನುಗಾರಿಕೆ ಸಹಾಯಕ ನಿರ್ದೇಶಕರು, ಶ್ರೇಣಿ–1 | 15 ಕೆಲಸದ ದಿನಗಳು | ಮೀನುಗಾರಿಕೆ ಉಪ ನಿರ್ದೇಶಕರು | 30 ಕೆಲಸದ ದಿನಗಳು |
| 7 | ಅಲಂಕಾರಿಕ ಮೀನು ಉತ್ಪಾದನ ಮತ್ತು ಪಾಲನ ಕೇಂದ್ರಗಳ ಮತ್ತು ಅಂಗಡಿಗಳ ನೋಂದಣಿ ಮಾಡುವುದು | ಮೀನುಗಾರಿಕೆ ಸಹಾಯಕ ನಿರ್ದೇಶಕರು, ಶ್ರೇಣಿ–2 | 60 ಕೆಲಸದ ದಿನಗಳು | ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು/ಮೀನುಗಾರಿಕೆ ಸಹಾಯಕ ನಿರ್ದೇಶಕರು, ಶ್ರೇಣಿ–1 | 15 ಕೆಲಸದ ದಿನಗಳು | ಮೀನುಗಾರಿಕೆ ಉಪ ನಿರ್ದೇಶಕರು | 30 ಕೆಲಸದ ದಿನಗಳು |
| 8 | ಸಂಕಷ್ಟದಲ್ಲಿರುವ ಮೀನುಗಾರರಿಗೆ ಪರಿಹಾರ ನೀಡುವುದು | ಮೀನುಗಾರಿಕೆ ಸಹಾಯಕ ನಿರ್ದೇಶಕರು, ಶ್ರೇಣಿ–2 | 90 ಕೆಲಸದ ದಿನಗಳು | ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು/ಮೀನುಗಾರಿಕೆ ಸಹಾಯಕ ನಿರ್ದೇಶಕರು, ಶ್ರೇಣಿ–1 | 15 ಕೆಲಸದ ದಿನಗಳು | ಮೀನುಗಾರಿಕೆ ನಿರ್ದೇಶಕರು | 30 ಕೆಲಸದ ದಿನಗಳು |
| 9 | ಜೀವರಕ್ಷಕ ಸಾಧನಗಳ ಖರೀದಿಗೆ ಸಹಾಯಧನ ನೀಡಲು ಫಲಾನುಭವಿಗಳ ಪಟ್ಟಿಗೆ ಅನುಮೋದನೆ ನೀಡುವುದು | ಮೀನುಗಾರಿಕೆ ಸಹಾಯಕ ನಿರ್ದೇಶಕರು, ಶ್ರೇಣಿ–2 | 60 ಕೆಲಸದ ದಿನಗಳು | ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು/ಮೀನುಗಾರಿಕೆ ಸಹಾಯಕ ನಿರ್ದೇಶಕರು, ಶ್ರೇಣಿ–1 | 15 ಕೆಲಸದ ದಿನಗಳು | ಮೀನುಗಾರಿಕೆ ಉಪ ನಿರ್ದೇಶಕರು | 30 ಕೆಲಸದ ದಿನಗಳು |

15. ಶೀರ್ಷಿಕೆ "15 – ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಡಿ ಬರುವ "ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ" ಯನ್ನು ಉಪಶೀರ್ಷಿಕೆ – I ಎಂದು ಓದಿಕೊಂಡು, ನಂತರ "ಅರಣ್ಯ" ಇಲಾಖೆಯ ಈ ಕೆಳಕಂಡ ಸೇವೆಗಳ ನಮೂದುಗಳನ್ನು ಸೇರಿಸಿ ಓದಿಕೊಳ್ಳತಕ್ಕದ್ದು ಎಂದರೆ :–

## II - "ಅರಣ್ಯ"

| ಕ್ರ.ಸಂ | ಸೇವೆಗಳ ಪಟ್ಟಿ | ಹೆಸರಿಸಲಾದ ಅಧಿಕಾರಿ | ಹೆಸರಿಸಲಾದ ಅಧಿಕಾರಿಗೆ ಗೊತ್ತು ಮಾಡಿದ ಕಾಲ | ಸಕ್ಷಮ ಅಧಿಕಾರಿ | ಸಕ್ಷಮ ಅಧಿಕಾರಿಯು ವಿಲೆ ಮಾಡುವುದಕ್ಕೆ ಕಾಲ ಮಿತಿ | ಮೇಲ್ಮನವಿ ಪ್ರಾಧಿಕಾರ | ಮೇಲ್ಮನವಿ ಪ್ರಾಧಿಕಾರಿಯು ವಿಲೆ ಮಾಡುವುದಕ್ಕೆ ಕಾಲಮಿತಿ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ಸಾರ್ವಜನಿಕರಿಗೆ ಸಸಿಗಳ ವಿತರಣೆ ಮಾಡುವುದು, ಆದೇಶ ನೀಡುವುದು | ವಲಯ ಅರಣ್ಯಾಧಿಕಾರಿ | 7 ಕೆಲಸದ ದಿನಗಳು | ವಲಯ ಅರಣ್ಯಾಧಿಕಾರಿ | 7 ಕೆಲಸದ ದಿನಗಳು | ಉಪ ಅರಣ್ಯ ಸಂರಕ್ಷಣಾಧಿಕಾರಿ/ ಸಹಾಯಕ ಅರಣ್ಯ ಸಂರಕ್ಷಣಾಧಧಿಕಾರಿ | 7 ಕೆಲಸದ ದಿನಗಳು |
| 2 | ವನ್ಯಪ್ರಾಣಿ ಹಾವಳಿಯಿಂದ ಬೆಳೆನಾಶ ಪರಿಹಾರ, ಆದೇಶ ನೀಡುವುದು | ವಲಯ ಅರಣ್ಯಾಧಿಕಾರಿ | 30 ಕೆಲಸದ ದಿನಗಳು | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ /ಉಪ ಅರಣ್ಯ ಸಂರಕ್ಷಣಾಧಿಕಾರಿ/ ಅರಣ್ಯ ಸಂರಕ್ಷಣಾಧಿಕಾರಿ | 30 ಕೆಲಸದ ದಿನಗಳು | ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)/ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) | 30 ಕೆಲಸದ ದಿನಗಳು |
| 3 | ವನ್ಯಪ್ರಾಣಿಗಳ ಹಾವಳಿಯಿಂದ ಸಾಕುಪ್ರಾಣಿಗಳ ಪ್ರಾಣ ಹಾನಿ ಪರಿಹಾರ, ಆದೇಶ ನೀಡುವುದು | ವಲಯ ಅರಣ್ಯಾಧಿಕಾರಿ | 15 ಕೆಲಸದ ದಿನಗಳು | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ /ಉಪ ಅರಣ್ಯ ಸಂರಕ್ಷಣಾಧಿಕಾರಿ/ ಅರಣ್ಯ ಸಂರಕ್ಷಣಾಧಿಕಾರಿ/ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ | 25 ಕೆಲಸದ ದಿನಗಳು | ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)/ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) | 30 ಕೆಲಸದ ದಿನಗಳು |
| 4 | ವನ್ಯಪ್ರಾಣಿಗಳ ಹಾವಳಿಯಿಂದ ಮಾನವನ ಪ್ರಾಣ ಹಾನಿ ಮತ್ತು ಶಾಶ್ವತ ಅಂಗವಿಕಲತೆ ಪರಿಹಾರ, ಆದೇಶ ನೀಡುವುದು | ವಲಯ ಅರಣ್ಯಾಧಿಕಾರಿ | 15 ಕೆಲಸದ ದಿನಗಳು | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ /ಉಪ ಅರಣ್ಯ ಸಂರಕ್ಷಣಾಧಿಕಾರಿ/ ಅರಣ್ಯ ಸಂರಕ್ಷಣಾಧಿಕಾರಿ/ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ | 20 ಕೆಲಸದ ದಿನಗಳು | ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)/ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) | 30 ಕೆಲಸದ ದಿನಗಳು |
| 5 | ಮರಗಳ ಕಟಾವಣೆ ಮಾಡಲು ಅನುಮತಿ ನೀಡುವುದು. | ವಲಯ ಅರಣ್ಯಾಧಿಕಾರಿ / ಉಪ ಅರಣ್ಯ ಸಂರಕ್ಷಣಾಧಿಕಾರಿ (**Tree Officer)** | 90 ಕೆಲಸದ ದಿನಗಳು | ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ವೃಕ್ಷ ಪ್ರಾಧಿಕಾರ (Tree Autority ) | 90 ಕೆಲಸದ ದಿನಗಳು | ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ | 30 ಕೆಲಸದ ದಿನಗಳು |
| 6 | ಸಾರಿಗೆ ರಹದಾರಿ(Transport Permit) | ವಲಯ ಅರಣ್ಯಾಧಿಕಾರಿ/ಉಪ ಅರಣ್ಯ ಸಂರಕ್ಷಣಾಧಿಕಾರಿ | 42 ಕೆಲಸದ ದಿನಗಳು | ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ | 60 ಕೆಲಸದ ದಿನಗಳು | ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ | 30 ಕೆಲಸದ ದಿನಗಳು |

## ಅನುಬಂಧ – ಸಿ

## ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 – ಜಾರಿಗೊಳಿಸಿರುವ ಇಲಾಖೆಗಳ ಪಟ್ಟಿ

| ಕ್ರಮ ಸಂಖ್ಯೆ | ಸಚಿವಾಲಯ ಇಲಾಖೆ | | ಇಲಾಖೆ/ ಕ್ಷೇತ್ರ ಇಲಾಖೆ/ಸಂಸ್ಥೆಗಳು | ಸೇವೆಗಳ ಸಂಖ್ಯೆ | | | | | | |
|---|---|---|---|---|---|---|---|---|---|---|
| | | | | ಏಪ್ರಿಲ್ 2012 | ಡಿಸೆಂಬರ್ 2012 | ಆಗಸ್ಟ್ 2013 | ಸೆಪ್ಟೆಂಬರ್ 2013 | ನವೆಂಬರ್ 2013 | ಜನವರಿ–2014 | ಒಟ್ಟು |
| 1 | ನಗರಾಭಿವೃದ್ಧಿ ಇಲಾಖೆ | 1 | ಬೃಹತ ಬೆಂಗಳೂರು ಮಹಾನಗರಪಾಲಿಕೆ | 6 | 1 | – | – | – | – | 7 |
| | | 2 | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | 2 | 1 | – | – | – | – | 3 |
| | | 3 | ಸ್ಥಳೀಯ ಪ್ರಾಧಿಕಾರಿ [ಪೌರಾಡಳಿತ] | 20 | – | – | – | – | – | 20 |
| | | 4 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ | – | 12 | – | – | – | – | 12 |
| 2 | ಸಾರಿಗೆ | 5 | ಸಾರಿಗೆ | 9 | 02 | – | – | – | 20 | 31 |
| 3 | ಆಹಾರ ಮತ್ತು ನಾಗರಿಕ ಸರಬರಾಜು | 6 | ಆಹಾರ ಮತ್ತು ನಾಗರಿಕ ಸರಬರಾಜು | 4 | – | – | – | – | – | 4 |
| 4 | ಕಂದಾಯ ಇಲಾಖೆ | 7 | ಕಂದಾಯ | 24 | 25 | – | – | – | – | 49 |
| 5 | ಒಳಾಡಳಿತ | 8 | ಪೋಲಿಸ್ | 12 | 11 | – | – | – | – | 23 |
| | | 9 | ಅಗ್ನಿ ಶಾಮಕ | | | | – | – | – | |
| 6 | ಶಿಕ್ಷಣ | 10 | ಪದವಿಪೂರ್ವ ಶಿಕ್ಷಣ | 6 | – | – | – | – | – | 6 |
| | | 11 | ಸಾರ್ವಜನಿಕ ಶಿಕ್ಷಣ | 6 | 6 | 20 | – | – | – | 32 |
| | | 12 | ನಿರ್ದೇಶಕರು, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು | – | 1 | – | – | – | – | 1 |
| | | 13 | ಸಾರ್ವಜನಿಕ ಗ್ರಂಥಾಲಯ | – | – | 02 | – | – | – | 02 |
| | | 14 | ಉನ್ನತ ಶಿಕ್ಷಣ–ಕಾಲೇಜು ಶಿಕ್ಷಣ ಇಲಾಖೆ | – | – | 18 | – | – | – | 18 |
| | | 15 | ತಾಂತ್ರಿಕ ಶಿಕ್ಷಣ ಇಲಾಖೆ | – | – | 10 | – | – | – | 10 |
| | | 16 | ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು | – | – | 14 | – | – | – | 14 |
| | | 17 | ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗ | – | – | 12 | – | – | – | 12 |
| | | 18 | ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗ | – | – | 11 | – | – | – | 11 |
| | | 19 | ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗ | – | – | 5 | – | – | – | 5 |
| | | 20 | ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗ | – | – | 6 | – | – | – | 6 |
| 7 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 21 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 4 | – | – | – | – | – | 4 |
| | | 22 | ಔಷಧಗಳ ನಿಯಂತ್ರಣ | 5 | – | – | – | – | – | 5 |
| | | 23 | ಆಯುಷ್ | 3 | – | – | – | – | – | 3 |
| 8 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 24 | ಜಿಲ್ಲಾ ಪಂಚಾಯತ್ /ಗ್ರಾಮಪಂಚಾಯತ್ | 10 | 1 | – | 1 | – | – | 12 |

| ಕ್ರಮ ಸಂಖ್ಯೆ | ಸಚಿವಾಲಯ ಇಲಾಖೆ | | ಇಲಾಖೆ/ ಕ್ಷೇತ್ರ ಇಲಾಖೆ/ಸಂಸ್ಥೆಗಳು | ಸೇವೆಗಳ ಸಂಖ್ಯೆ | | | | | | |
|---|---|---|---|---|---|---|---|---|---|---|
| | | | | ಏಪ್ರಿಲ್ 2012 | ಡಿಸೆಂಬರ್ 2012 | ಆಗಸ್ಟ್ 2013 | ಸೆಪ್ಟೆಂಬರ್ 2013 | ನವೆಂಬರ್ 2013 | ಜನವರಿ–2014 | ಒಟ್ಟು |
| 9 | ಆರ್ಥಿಕ | 25 | ವಾಣಿಜ್ಯ ತೆರಿಗೆ | 10 | – | – | – | – | – | 10 |
| | | 26 | ಅಬಕಾರಿ ಇಲಾಖೆ | – | – | 6 | – | – | – | 6 |
| 10 | ಕಾರ್ಮಿಕ | 27 | ಕಾರ್ಮಿಕ | 13 | – | – | – | – | – | 13 |
| | | 28 | ಇ.ಎಸ್.ಐ.ಎಸ್. | 5 | – | – | – | – | – | 5 |
| | | 29 | ಕಾರ್ಖಾನೆಗಳು, ಬಾಯ್ಲರುಗಳ | 7 | 2 | – | – | – | – | 9 |
| 11 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 30 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 5 | – | – | – | – | – | 5 |
| 12 | ವಸತಿ | 31 | ಕರ್ನಾಟಕ ಗೃಹ ಮಂಡಳಿ | – | 3 | – | – | – | – | 3 |
| | | 32 | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ | – | 3 | – | – | – | – | 3 |
| 13 | ಪಶುಸಂಗೋಪನೆ ಮತ್ತು ಮೀನುಗಾರಿಕೆ | 33 | ಮೀನುಗಾರಿಕೆ | – | 3 | – | – | – | 6 | 9 |
| 14 | ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ | 34 | ಲೋಕೋಪಯೋಗಿ | – | 2 | – | – | – | – | 2 |
| 15 | ಅರಣ್ಯ ,ಪರಿಸರ ಮತ್ತು ಜೀವಿಶಾಸ್ತ್ರ [ಪರಿಸರ] | 35 | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರ ಮಂಡಳಿ | – | 5 | – | – | – | – | 5 |
| | | 36 | ಅರಣ್ಯ | – | – | – | – | – | 06 | 06 |
| 16 | ವಾಣಿಜ್ಯ ಮತ್ತು ಕೈಗಾರಿಕೆ | 37 | ಕೈಗಾರಿಕೆ | – | 7 | – | – | 03 | – | 10 |
| 17 | ಕನ್ನಡ ಸಂಸ್ಕೃತಿ ಮತ್ತು ವಾರ್ತಾ | 38 | ಕನ್ನಡ ಮತ್ತು ಸಂಸ್ಕೃತಿ | – | 5 | – | – | – | – | 5 |
| | | 39 | ಪತ್ರಾಗಾರ | – | 1 | – | – | – | – | 1 |
| | | 40 | ವಾರ್ತಾ ಇಲಾಖೆ | – | 2 | – | – | – | – | 2 |
| 18 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | 41 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | – | 21 | – | – | – | – | 21 |
| 19 | ಸಹಕಾರ ಇಲಾಖೆ | 42 | ಕರ್ನಾಟಕ ರಾಜ್ಯ ಉಗ್ರಾಣ ನಿಗಮ | – | – | 1 | 2 | – | – | 3 |
| | | 43 | ಕೃಷಿ ಮಾರಾಟ ಇಲಾಖೆ | – | – | – | 27 | – | – | 27 |
| | | 44 | ಸಹಕಾರ ಸಂಘಗಳ ನಿಬಂಧಕರ ಕಛೇರಿ | – | – | – | 9 | – | – | 9 |
| 20 | ತೋಟಗಾರಿಕೆ ಇಲಾಖೆ | 45 | ರೇಷ್ಮೇ ಇಲಾಖೆ | – | – | 5 | 5 | – | – | 10 |
| 21 | ಜಲಸಂಪನ್ಮೂಲ ಇಲಾಖೆ | 46 | ಜಲಸಂಪನ್ಮೂಲ ಇಲಾಖೆ | – | – | – | – | 22 | – | 22 |
| 22 | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | 47 | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | – | – | – | – | 3 | – | 3 |
| **ಒಟ್ಟು** | | | | **151** | **46** | **110** | **44** | **28** | **32** | **479** |

# ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ –2011

## ಸಕಾಲದ ಪ್ರಮುಖ 100 ಸೇವೆಗಳು

**ಸಕಾಲ**

**ಇಂದು... ನಾಳೆ... ಇನ್ನಿಲ್ಲ – ಹೇಳಿದ ದಿನ ತಪ್ಪೊಲ್ಲ**

**ಅರ್ಜಿಯ ಸ್ಥಿತಿಗಳನ್ನು ತಿಳಿಯಲು ಮೊಬೈಲ್‌ನಿಂದ *505*807# ನಂಬರ್‌ಗೆ ಕರೆಮಾಡಿ**

ಮಾಹಿತಿ / ದೂರುಗಳಿಗಾಗಿ ಸಂಪರ್ಕಿಸಿ
© 080-44554455
Website
www.sakala.kar.nic.in
E-mail
sakala@nic.in
Mobile Web
mobile.karnataka.gov.in

| ಕ್ರ. ಸಂ. | ಇಲಾಖೆ & ಸೇವೆ | ಹೆಸರಿಸಲಾದ ಅಧಿಕಾರಿ | ಗೊತ್ತು ಮಾಡಿದ ಕಾಲ |
|---|---|---|---|
| | **ಕಂದಾಯ ಇಲಾಖೆ** | | |
| 1 | ಎಲ್ಲಾ ವಿಧದ ಜಾತಿ ಪ್ರಮಾಣ ಪತ್ರಗಳು | ತಹಸೀಲ್ದಾರ್ | 21 |
| 2 | ಎಲ್ಲಾ ವಿಧದ ಆದಾಯ ಪ್ರಮಾಣ ಪತ್ರಗಳು | ತಹಸೀಲ್ದಾರ್ | 21 |
| 3 | ವಾಸಸ್ಥಳ ಪ್ರಮಾಣ ಪತ್ರ | ತಹಸೀಲ್ದಾರ್ | 7 |
| 4 | ಸಂಧ್ಯಾ ಸುರಕ್ಷಾ | ತಹಸೀಲ್ದಾರ್ | 70 ದಿನ |
| 5 | ಖಾತಾ ಬದಲಾವಣೆ (ವಿವಾದ ರಹಿತ) | ತಹಸೀಲ್ದಾರ್ | 60 ದಿನ |
| 6 | ನಿರ್ಗತಿಕ ವಿಧವಾ ವೇತನದ ಅರ್ಜಿ ಅನುಮೋದನೆ | ತಹಸೀಲ್ದಾರ್ | 70 ದಿನ |
| 7 | ಪಹಣಿ ತಿದ್ದುಪಡಿ | ಅಸಿಸ್ಟೆಂಟ್ ಕಮೀಷನರ್ | 40 ದಿನ |
| 8 | ಸಣ್ಣ ಮತ್ತು ಮಾರ್ಜಿನಲ್ ರೈತರ ಪ್ರಮಾಣ ಪತ್ರ | ತಹಸೀಲ್ದಾರ್ | 7 ದಿನ |
| 9 | ಹಕ್ಕುಗಳ ಪ್ರಮಾಣ ಪತ್ರದ ದಾಖಲೆ | ತಹಸೀಲ್ದಾರ್ | 30 ದಿನ |
| 10 | ಜೀವಂತವಿರುವ ಕುಟುಂಬ ಸದಸ್ಯರ ಪ್ರಮಾಣ ಪತ್ರ | ತಹಸೀಲ್ದಾರ್ | 7 ದಿನ |
| 11 | ಅಂಗವಿಕಲ ವೇತನ ಅರ್ಜಿ ಅನುಮೋದನೆ | ತಹಸೀಲ್ದಾರ್ | 70 ದಿನ |
| 12 | ಪರಿವರ್ತನೆಯ ಉದ್ಧೃತ | ತಹಸೀಲ್ದಾರ್ | 7 ದಿನ |
| 13 | ನಿವಾಸಿ ಪ್ರಮಾಣ ಪತ್ರ | ತಹಸೀಲ್ದಾರ್ | 7 ದಿನ |
| | **ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ** | | |
| 14 | ಈಗಿನ ಪಡಿತರ ಚೀಟಿಯಲ್ಲಿ ಮಾರ್ಪಾಡು | ಸಂಬಂಧಪಟ್ಟ ಆಹಾರ ಪರಿವೀಕ್ಷಕರು | 7 ದಿನ |
| | **ವಾಣಿಜ್ಯ ತೆರಿಗೆ ಇಲಾಖೆ** | | |
| 15 | ಕೇಂದ್ರ ಮಾರಾಟಗಳ ತೆರಿಗೆ ಅಧಿನಿಯಮದಡಿಯಲ್ಲಿ ಸಿ ನಮೂನೆಗಳನ್ನು ನೀಡುವುದು 1956. | ಅಧಿಕಾರ ವ್ಯಾಪ್ತಿ ಸ್ಥಳೀಯ ವ್ಯಾಟ್ ಅಧಿಕಾರಿ (ಎಲ್‌ವಿಒ)/ ವ್ಯಾಟ್ ಸಬ್ ಆಫೀಸರ್ (ವಿ.ಎಸ್.ಒ) | 10 ದಿನ |
| 16 | ಕೇಂದ್ರ ಮಾರಾಟಗಳ ತೆರಿಗೆ ಅಧಿನಿಯಮದಡಿಯಲ್ಲಿ ಎಫ್ ನಮೂನೆಗಳನ್ನು ನೀಡುವುದು | ಅಧಿಕಾರ ವ್ಯಾಪ್ತಿ ಸ್ಥಳೀಯ ವ್ಯಾಟ್ ಅಧಿಕಾರಿ (ಎಲ್‌ವಿಒ)/ ವ್ಯಾಟ್ ಸಬ್ ಆಫೀಸರ್ (ವಿ.ಎಸ್.ಒ) | 10 ದಿನ |
| 17 | ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003ರಡಿಯಲ್ಲಿ ನೋಂದಣಿಯನ್ನು ನೀಡುವುದು | ಅಧಿಕಾರ ವ್ಯಾಪ್ತಿ ಸ್ಥಳೀಯ ವ್ಯಾಟ್ ಅಧಿಕಾರಿ (ಎಲ್‌ವಿಒ)/ ವ್ಯಾಟ್ ಸಬ್ ಆಫೀಸರ್ (ವಿ.ಎಸ್.ಒ) | 25 ದಿನ |
| 18 | ಕೇಂದ್ರ ಮಾರಾಟಗಳ ತೆರಿಗೆ ಅಧಿನಿಯಮದಡಿಯಲ್ಲಿ ಹೆಚ್ ನಮೂನೆಗಳನ್ನು ನೀಡುವುದು | ಅಧಿಕಾರ ವ್ಯಾಪ್ತಿ ಸ್ಥಳೀಯ ವ್ಯಾಟ್ ಅಧಿಕಾರಿ (ಎಲ್‌ವಿಒ)/ ವ್ಯಾಟ್ ಸಬ್ ಆಫೀಸರ್ (ವಿ.ಎಸ್.ಒ) | 10 ದಿನ |
| | **ಸಾರಿಗೆ ಇಲಾಖೆ** | | |
| 19 | ವಾಹನ ನೋಂದಣಿ | ಪ್ರಾದೇಶಿಕ ಸಾರಿಗೆ ಅಧಿಕಾರಿ (ಆರ್.ಟಿ.ಒ) /ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ (ಎ.ಆರ್.ಟಿ.ಒ) | 30 ದಿನ |
| 20 | ಕಲಿಕಾ ಲೈಸೆನ್ಸ್ | ಪ್ರಾದೇಶಿಕ ಸಾರಿಗೆ ಅಧಿಕಾರಿ (ಆರ್.ಟಿ.ಒ)/ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ (ಎ.ಆರ್.ಟಿ.ಒ) | 7 ದಿನ |
| | **ನೋಂದಣಿ ಮತ್ತು ಮುದ್ರಾಂಕ ಇಲಾಖೆ** | | |
| 21 | ಭೂಮಿ/ಆಸ್ತಿ ನೋಂದಣಿ | ಸಬ್–ರಿಜಿಸ್ಟ್ರಾರ್ | 1 ದಿನ |
| | **ಸಾರಿಗೆ ನಿಗಮ** | | |
| 22 | ಶಾಲಾ ಮಕ್ಕಳಿಗಾಗಿ ಬಸ್ ಪಾಸ್ ವಿತರಣೆ | ಡಿಪೋ ಮ್ಯಾನೇಜರ್ | 7 ದಿನ |
| | **ಬಿಎಂಟಿಸಿ** | | |
| 23 | ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಪಾಸ್ ವಿತರಣೆ | ಡಿಪೊ ಮ್ಯಾನೇಜರ್ | 7 ದಿನ |
| | **ಒಳಡಾಳಿತ ಇಲಾಖೆ** | | |
| 24 | ರಸೀದಿ, ದೂರು ಅರ್ಜಿಗಳ ವಿಲೇವಾರಿ | ಎಸ್.ಹೆಚ್.ಓ/ಸಿ.ಪಿ.ಐ | 45 ದಿನ |
| 25 | ಪಾಸ್ ಪೋರ್ಟ್ ಸತ್ಯಾಪನೆಗಾಗಿ ನಿರಾಕ್ಷೇಪಣಾ ಪತ್ರ | ಪಿ.ಐ (ಡಿ.ಎಸ್.ಬಿ) ಜಿಲ್ಲೆಗಳಲ್ಲಿ | 20 ದಿನ |
| 26 | ಪಿರ್ಯಾದುದಾರರಿಗೆ ಎಫ್.ಐ.ಆರ್ ಪ್ರತಿಯನ್ನು ನೀಡುವುದು | ಎಸ್.ಹೆಚ್.ಓ | ನೋಂದಣಿಯಾದ ತಕ್ಷಣ |
| 27 | ದಾಖಲೆಗಳು, ಮೊಬೈಲ್ ಫೋನ್ ಇತ್ಯಾದಿ ಕಳುವಾಗಿರುವ ಬಗ್ಗೆ | ಎಸ್.ಹೆಚ್.ಓ | 1 ದಿನ |
| | **ನಗರ ಸಭೆಗಳು** | | |
| 28 | ಜನನ, ಮರಣ ಮತ್ತು ಸತ್ತು ಹುಟ್ಟಿದ ಮಗುವಿನ ಪ್ರಮಾಣ ಪತ್ರಗಳನ್ನು ವಿತರಿಸುವುದು | ಆರೋಗ್ಯ ನಿರೀಕ್ಷಕರು | 3 ದಿನ |
| 29 | ಖಾತಾ ಉದ್ಧೃತ/ಪ್ರಮಾಣ ಪತ್ರ | ಕಂದಾಯ ಅಧಿಕಾರಿ | 3 ದಿನ |
| | **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ** | | |
| 30 | ಅಕುಶಲ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುವುದು (ಎಂ.ಜಿ.ಎನ್.ಆರ್.ಇ.ಜಿ.ಎಸ್) | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಗ್ರಾಮ ಪಂಚಾಯತಿ ಕಾರ್ಯದರ್ಶಿ | 15 ದಿನ |
| 31 | ಕುಡಿಯುವ ನೀರಿನ ನಿರ್ವಹಣೆ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಗ್ರಾಮ ಪಂಚಾಯತಿ ಕಾರ್ಯದರ್ಶಿ | 03 ದಿನ |
| 32 | ಬೀದಿ ದೀಪಗಳ ನಿರ್ವಹಣೆ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಗ್ರಾಮ ಪಂಚಾಯತಿ ಕಾರ್ಯದರ್ಶಿ | 03 ದಿನ |
| 33 | ಕರನಿರ್ಧರಣಾ ಪಟ್ಟಿಯ ಬದಲಾವಣೆ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಗ್ರಾಮ ಪಂಚಾಯತಿ ಕಾರ್ಯದರ್ಶಿ | 45 ದಿನಗಳು |
| 34 | ಗ್ರಾಮ ನೈರ್ಮಲ್ಯ ನಿರ್ವಹಣೆ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಗ್ರಾಮ ಪಂಚಾಯತಿ ಕಾರ್ಯದರ್ಶಿ | 07 ದಿನಗಳು |
| | **ಪುರಸಭೆಗಳು** | | |
| 35 | ಜನನ, ಮರಣ ಮತ್ತು ಸತ್ತು ಹುಟ್ಟಿದ ಮಗುವಿನ ಪ್ರಮಾಣ ಪತ್ರಗಳನ್ನು ವಿತರಿಸುವುದು | ಆರೋಗ್ಯ ನಿರೀಕ್ಷಕರು | 3 ದಿನ |
| 36 | ಖಾತಾ ಉದ್ಧೃತ/ಪ್ರಮಾಣ ಪತ್ರ | ಕಂದಾಯ ಅಧಿಕಾರಿ | 3 ದಿನ |
| | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ** | | |
| 37 | ವಯೋಪ್ರಮಾಣ ಪತ್ರವನ್ನು ನೀಡುವುದು | ವೈದ್ಯಾಧಿಕಾರಿಗಳು | 3 ದಿನ |
| 38 | ಬಿಡುಗಡೆ ಪ್ರಮಾಣ ಪತ್ರ ಮತ್ತು ಸಂತಾನ ಹರಣ ಶಸ್ತ್ರ ಚಿಕಿತ್ಸೆಯ ಪ್ರಮಾಣ ಪತ್ರವನ್ನು ನೀಡುವುದು | ವೈದ್ಯಾಧಿಕಾರಿಗಳು | 1 ದಿನ |
| | **ಭೂ ಮಾಪನ ಮತ್ತು ಭೂ ಕಂದಾಯ ಇಲಾಖೆ** | | |
| 39 | ಸರ್ವೆ ವಿಭಾಗದಲ್ಲಿ ನಕಲು ಪ್ರತಿಗಳನ್ನು ನೀಡುವುದು (ಆಕಾರ್ ಬಂದ್) | ಸರ್ವೆ ಸೂಪರ್‌ವೈಸರ್ | 07 ದಿನಗಳು |
| 40 | ಸರ್ವೆ ವಿಭಾಗದಲ್ಲಿ ನಕಲು ಪ್ರತಿಗಳನ್ನು ನೀಡುವುದು (ಅಟ್ಲಾಸ್) | ಸರ್ವೆ ಸೂಪರ್‌ವೈಸರ್ | 07 ದಿನಗಳು |
| | **ಈಶಾನ್ಯ ಸಾರಿಗೆ** | | |
| 41 | ಶಾಲಾ ಮಕ್ಕಳಿಗಾಗಿ ಬಸ್ ಪಾಸ್ ವಿತರಣೆ | ಡಿಪೋ ಮ್ಯಾನೇಜರ್ | 7 ದಿನ |
| | **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ ಪೌರ ನಿಗಮಗಳು** | | |
| 42 | ಜನನ, ಮರಣ ಮತ್ತು ಸತ್ತು ಹುಟ್ಟಿದ ಮಗುವಿನ ಪ್ರಮಾಣ ಪತ್ರಗಳನ್ನು ವಿತರಿಸುವುದು | ವಲಯ ಸಹಾಯಕ ಆಯುಕ್ತರು/ವೈದ್ಯಾಧಿಕಾರಿ/ ಪರಿಸರ ಅಭಯಂತರರು/ ಆರೋಗ್ಯ ನಿರೀಕ್ಷಕರು/ ಸಹಾಯಕ ಆರೋಗ್ಯ ಅಧಿಕಾರಿ | ವಿದ್ಯುನ್ಮಾನ ಮಾಧ್ಯಮದಲ್ಲಿ ಲಭ್ಯವಿರುವ ಘಟನಾ ವಿವರಗಳಿಗಾಗಿ 3 ಕೆಲಸದ ದಿನ |
| 43 | ಖಾತಾ ಉದ್ಧೃತ/ಪ್ರಮಾಣ ಪತ್ರವಲಯ | ಸಹಾಯಕ ಆಯುಕ್ತರು | ವಿದ್ಯುನ್ಮಾನ ಮಾಧ್ಯಮದಲಿ ಲಭ್ಯವಿರುವ ಘಟನಾ ವಿವರಗಳಿಗಾಗಿ 3 ಕೆಲಸದ ದಿನ |
| | **ಕಾರ್ಮಿಕ ಇಲಾಖೆ** | | |
| 44 | ಕಟ್ಟಡ ಮತ್ತು ಇತರ ಕಟ್ಟಡ ಕಾರ್ಮಿಕರ ನೋಂದಣಿ | ಕಾರ್ಮಿಕ ಪರಿವಿಕ್ಷಕರು/ಹಿರಿಯ ಕಾರ್ಮಿಕ ಪರೀವಿಕ್ಷಕರು | 15 ದಿನ |
| 45 | ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸ್ಥಾಪನೆಗಳ ಅಧಿನಿಯಮ 1961ರಡಿಯಲ್ಲಿ ನೋಂದಣಿ | ಕಾರ್ಮಿಕ ಪರಿವಿಕ್ಷಕರು/ಹಿರಿಯ ಕಾರ್ಮಿಕ ಪರೀವಿಕ್ಷಕರು | 15 ದಿನ |
| 46 | ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸ್ಥಾಪನೆಗಳ ಅಧಿನಿಯಮ 1961ರಡಿಯಲ್ಲಿ ನೋಂದಣಿಯ ನವೀಕರಣ | ಕಾರ್ಮಿಕ ಪರಿವಿಕ್ಷಕರು/ಹಿರಿಯ ಕಾರ್ಮಿಕ ಪರೀವಿಕ್ಷಕರು | 15 ದಿನ |
| | **ಮಹಿಳಾ ಮತ್ತು ಮಕ್ಕಳ ಕಲ್ಯಾಣಿ ಇಲಾಖೆ** | | |
| 47 | ಹಿರಿಯ ನಾಗರೀಕರಿಗೆ ಗುರುತಿನ ಚೀಟಿ ವಿತರಣೆ | ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು | 7 ದಿನ |
| 48 | ವಿಕಲ ಚೇತನ ವ್ಯಕ್ತಿಗಳಿಗೆ ಅಶಕ್ತ ಪ್ರಮಾಣ ಪತ್ರ ಮತ್ತು ಗುರುತಿನ ಚೀಟಿ | ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು | 7 ದಿನ |
| | **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ** | | |
| 49 | ನೋಂದಣಿಯಾದ ದಿನಾಂಕದಿಂದ ಒಂದು ಕ್ಯಾಲೆಂಡರ್ ವರ್ಷದೊಳಗೆ ನೋಂದಣಿ ಕೇಂದ್ರಗಳಲ್ಲಿ ಜನನ, ಮರಣ ಮತ್ತು ಸತ್ತು ಹುಟ್ಟಿದ ಮಗುವಿನ ಪ್ರಮಾಣ ಪತ್ರಗಳನ್ನು ವಿತರಿಸುವುದು | ಆರೋಗ್ಯ ಇಲಾಖೆಯ ವೈದ್ಯಾಧಿಕಾರಿ, ಉಪ ಆರೋಗ್ಯ ಅಧಿಕಾರಿ ಮತ್ತು ದೊಡ್ಡ ಆಸ್ಪತ್ರೆಗಳ ಸೂಪರಿಂಟೆಂಡೆಂಟುರುಗಳು | 3 ದಿನ |
| 50 | ಖಾತಾ ಉದ್ಧೃತ/ಪ್ರಮಾಣ ಪತ್ರ | ಸಹಾಯಕ ಕಂದಾಯ ಅಧಿಕಾರಿ | 3 ದಿನ |
| 51 | ನೋಂದಣಿಯಾದ ದಿನಾಂಕದಿಂದ ಒಂದು ಕ್ಯಾಲೆಂಡರ್ ವರ್ಷದ ನಂತರ ನೋಂದಣಿ ಕೇಂದ್ರಗಳಲ್ಲಿ ಜನನ, ಮರಣ ಮತ್ತು ಸತ್ತು ಹುಟ್ಟಿದ ಮಗುವಿನ ಪ್ರಮಾಣ ಪತ್ರಗಳನ್ನು ವಿತರಿಸುವುದು | ಸಹಾಯಕ ಅಂಕಿಅಂಶ ಅಧಿಕಾರಿ | 3 ದಿನ |
| 52 | ಖಾತಾ ವರ್ಗಾವಣೆ | ಸಹಾಯಕ ಕಂದಾಯ ಅಧಿಕಾರಿ | 30 ದಿನ |
| 53 | ಏಕ ವಾಸ ಘಟಕದ ನಿವಾಸಕ್ಕಾಗಿ 2400 ಚ.ಅಡಿ ಅಳತೆಯ ವರೆಗಿನ ನಿವೇಶನಗಳಲ್ಲಿ ಕಟ್ಟಡ ಯೋಜನೆಯ ಮಂಜೂರಾತಿ (ಗಣಕೀಕೃತವಲ್ಲದ) | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ | 30 ದಿನ |
| 54 | ನಿಯಮಗಳ ಮೇರೆಗೆ ನಿರ್ದಿಷ್ಟಪಡಿಸಿದ ಪ್ರವರ್ಗದ ವಾಣಿಜ್ಯ ಲೈಸೆನ್ಸ್ ಅನ್ನು ನೀಡುವುದು | ಆರೋಗ್ಯ ಇಲಾಖೆಯ ವೈದ್ಯಾಧಿಕಾರಿ, ಉಪ ಆರೋಗ್ಯ ಅಧಿಕಾರಿ | 30 ದಿನ |
| 55 | ಖಾತಾ ನೋಂದಣಿ | ಸಹಾಯಕ ಕಂದಾಯ ಅಧಿಕಾರಿ | 30 ದಿನ |
| | **ಪಟ್ಟಣ ಪಂಚಾಯತ್‌ಗಳು** | | |
| 56 | ಜನನ, ಮರಣ ಮತ್ತು ಸತ್ತು ಹುಟ್ಟಿದ ಮಗುವಿನ ಪ್ರಮಾಣ ಪತ್ರಗಳನ್ನು ವಿತರಿಸುವುದು | ಆರೋಗ್ಯ ನಿರೀಕ್ಷಕರು | 3 ದಿನ |
| 57 | ಖಾತಾ ಉದ್ಧೃತ/ಪ್ರಮಾಣ ಪತ್ರ | ಕಂದಾಯ ಅಧಿಕಾರಿ | 3 ದಿನ |
| | **ಪದವಿ ಪೂರ್ವ ಶಿಕ್ಷಣ ಇಲಾಖೆ** | | |
| 58 | 2ನೇ ಪಿಯುಸಿ ಅಂತಿಮ ಪರೀಕ್ಷೆಯ ಉತ್ತರ ಪತ್ರಿಕೆಗಳ ಫೋಟೋ ಪ್ರತಿಗಳು | ಉಪ ನಿರ್ದೇಶಕರು | 15 ದಿನ |
| | **ವಾಯುವ್ಯ ಸಾರಿಗೆ** | | |
| 59 | ಶಾಲಾ ಮಕ್ಕಳಿಗಾಗಿ ಬಸ್ ಪಾಸ್ ವಿತರಣೆ | ಡಿಪೋ ಮ್ಯಾನೆಜರ್ | 7 ದಿನ |
| | **ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ** | | |
| 60 | ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಐಇಎಂ ಭಾಗ–1ರ ಸ್ವೀಕೃತಿ ಪತ್ರ ನೀಡುವಿಕೆ | ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕೆ ಕೇಂದ್ರ | 1 ದಿನ |
| 61 | ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಐಇಎಂ ಭಾಗ–2ರ ಸ್ವೀಕೃತಿ ಪತ್ರ ನೀಡುವಿಕೆ | ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕೆ ಕೇಂದ್ರ | 1 ದಿನ |
| | **ಸಾರ್ವಜನಿಕ ಶಿಕ್ಷಣ ಇಲಾಖೆ** | | |
| 62 | ಡೂಪ್ಲಿಕೇಟ್ ಅಂಕಪಟ್ಟಿ/ತಾತ್ಕಾಲಿಕ ಅಂಕಪಟ್ಟಿಯನ್ನು ನೀಡುವುದು–ಎಸ್.ಎಸ್.ಎಲ್.ಸಿ | ಬೆಳಗಾಂ, ಮೈಸೂರು ಗುಲ್ಬರ್ಗಾ ಪ್ರಕರಣದಲ್ಲಿ ಜಂಟಿ ನಿರ್ದೇಶಕರ ಕಚೇರಿಯಲ್ಲಿ ಡಿ.ಡಿ.ಪಿ.ಐ. | 30 ದಿನ |
| 63 | ಶಾಲೆಗಾಗಿ ನೋಂದಣಿಯ ನವೀಕರಣ | 1ರಿಂದ 7ನೇ ತರಗತಿಯವರೆಗೆ ಬಿ.ಇ.ಓ/ 8ರಿಂದ 10ನೇ ತರಗತಿಯವರೆಗೆ ಡಿ.ಡಿ.ಪಿ.ಐ (ಆಡಳಿತ) | 60 ದಿನ |
| | **ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ** | | |
| 64 | ಅಪಾರ್ಟ್‌ಮೆಂಟುಗಳನ್ನು ಹೊರತುಪಡಿಸಿ ನಿವಾಸದ ಕಟ್ಟಡಗಳಿಗಾಗಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗಾಗಿ ಹೊಸ ಸಂಪರ್ಕವನ್ನು/ಹೆಚ್ಚುವರಿ ಸಂಪರ್ಕವನ್ನು ಕಲ್ಪಿಸುವುದಕ್ಕೆ ಅನುಮತಿ | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ | 7 ದಿನ |
| | **ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗ** | | |
| 65 | ತಾತ್ಕಾಲಿಕ ಪದವಿ ಪ್ರಮಾಣ ಪತ್ರ ನೀಡುವುದು (ಪಿ.ಡಿ.ಸಿ) | ಕುಲ ಸಚಿವರು (ಪರೀಕ್ಷಾಂಗ) | 6 ದಿನ |
| | **ಔಷಧಗಳ ನಿಯಂತ್ರಣ ಇಲಾಖೆ** | | |
| 66 | ಮಾರಾಟದ ಸ್ಥಾಪನೆಗಾಗಿ ಪರವಾನಗಿ ವಿತರಣೆ | ಸಹಾಯಕ ಔಷಧಗಳ ನಿಯಂತ್ರಕರು | 30 ದಿನ |
| 67 | ಲೈಸೆನ್ಸ್‌ನ ನವೀಕರಣ | ಸಹಾಯಕ ಔಷಧಗಳ ನಿಯಂತ್ರಕರು | 30 ದಿನ |
| | **ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷೆ ಮತ್ತು ಆರೋಗ್ಯ ಇಲಾಖೆ** | | |
| 68 | ವಾರ್ಷಿಕ ಪರಿವೀಕ್ಷಣೆಯ ಮೇಲೆ ಬಾಯ್ಲರ್ ಪ್ರಮಾಣ ಪತ್ರವನ್ನು ನೀಡುವುದು | ಸಹಾಯಕ ನಿರ್ದೇಶಕರು/ ಹಿರಿಯ ಸಹಾಯಕ ನಿರ್ದೇಶಕರು/ ಉಪ ನಿರ್ದೇಶಕರು | 17 ದಿನ |
| | **ಸಾರ್ವಜನಿಕ ಗ್ರಂಥಾಲಯ ಇಲಾಖೆ** | | |
| 69 | ಗ್ರಂಥಾಲಯ ಸದಸ್ಯತ್ವ ನೋಂದಣಿ | ಸಂಬಂಧಿಸಿದ ಗ್ರಂಥಾಲಯ ಸಿಬ್ಬಂದಿ | 20 ದಿನಗಳು |
| | **ಕರ್ನಾಟಕ ಗೃಹ ಮಂಡಳಿ** | | |
| 70 | ಹಂಚಿಕೆಯಾದ ಆಸ್ತಿ (ಮನೆ)/ನಿವೇಶನ/ ಮಳಿಗೆ)ಗಳಿಕೆ ಕ್ರಯಪತ್ರ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಯೋಜನಾ ಕಚೇರಿ ಮುಖ್ಯಸ್ಥರು | 30 ದಿನ |
| | **ಅಗ್ನಿ ಶಾಮಕ ಇಲಾಖೆ** | | |
| 71 | ಬೆಂಕಿ ಆಕಸ್ಮಿಕದ ತುರ್ತು ಕರೆಗಳಿಗೆ ಪ್ರತಿಕ್ರಿಯೆ | ಅಗ್ನಿಶಾಮಕ ಠಾಣಾಧಿಕಾರಿ | 1 ಗಂಟೆ |
| | **ಇ.ಎಸ್.ಐ.ಎಸ್ (ವೈದ್ಯಕೀಯ) ಸೇವೆಗಳ ನಿರ್ದೇಶನಾಲಯ** | | |
| 72 | ಒಳರೋಗಿಗಳ ವೈದ್ಯಕೀಯ ಮರುಪಾವತಿ ಬಿಲ್ಲುಗಳ ಸಲ್ಲಿಕೆ | ಆಡಳಿತಾತ್ಮಕ ವೈದ್ಯಕೀಯ ಅಧಿಕಾರಿ | 15 ದಿನ |
| | **ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ** | | |
| 73 | ಬಿಡಿಎ ಬಡಾವಣೆಗಳಲ್ಲಿ ಅಥವಾ ಬಿಡಿಎ ಅನುಮೋದಿತ ಖಾಸಗಿ ಬಡಾವಣೆಗಳಲ್ಲಿನ ಆಸ್ತಿಗಳ ಮಾರಾಟದ/ದಾನದ ಪ್ರಕರಣಗಳಲ್ಲಿ ಖಾತಾ ವರ್ಗಾವಣೆ | ಕಂದಾಯ ಅಧಿಕಾರಿ ಪೂರ್ವ,ಪಶ್ಚಿಮ, ಉತ್ತರ,ದಕ್ಷಿಣ | 30 ದಿನ |
| 74 | ಬಿಬಿಎಂಪಿಗೆ ವರ್ಗಾಯಿಸದೆ ಇರುವ ಬಿಡಿಎ ಬಡಾವಣೆಗಳಲ್ಲಿ ಮತ್ತು ಬಿಡಿಎ ಅನುಮೋದಿತ ಖಾಸಗಿ ಬಡಾವಣೆಗಳಲ್ಲಿನ ಆಸ್ತಿಗಳಿಗೆ ಖಾತಾ ಪತ್ರವನ್ನು ಪಡೆಯುವುದು | ಕಂದಾಯ ಅಧಿಕಾರಿ ಪೂರ್ವ,ಪಶ್ಚಿಮ, ಉತ್ತರ,ದಕ್ಷಿಣ | 15 ದಿನ |
| | **ರೇಷ್ಮೆ ಇಲಾಖೆ** | | |
| 75 | ರೇಷ್ಮೆ ಬೆಳೆಗಾರರಿಗೆ ಪಾಸ್ ಬುಕ್ ನೀಡುವುದು | ರೇಷ್ಮೆ ವಿಸ್ತರಣಾಧಿಕಾರಿ | 15 ದಿನ |
| | **ಮೀನುಗಾರಿಕೆ ಇಲಾಖೆ** | | |
| 76 | ಬೋಟುಗಳ ನೋಂದಣಿ/ ಪರವಾನಿಗೆಯನ್ನು | ಮೀನುಗಾರಿಕೆ ಸಹಾಯಕ ನಿರ್ದೇಶಕರು | 15 ದಿನ |
| | **ಆಯುಷ್** | | |
| 77 | ವೈದ್ಯಕೀಯ ಪ್ರಮಾಣ ಪತ್ರ ವಿತರಣೆ | ವೈದ್ಯಾಧಿಕಾರಿಗಳು | 5 ದಿನ |
| | **ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು** | | |
| 78 | ಅಂಕಪಟ್ಟಿಗಳ ವಿತರಣೆ | ಪ್ರಾಂಶುಪಾಲರು | 3 ದಿನ |
| | **ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ** | | |
| 79 | ಹಸಿರು ಪ್ರವರ್ಗ ಸ್ಥಾಪನಾ ಸಮ್ಮತಿ ಪತ್ರ/ವಿಸ್ತರಣೆ ಸಮ್ಮತಿ ಪತ್ರ (ಜಲಕಾಯ್ದೆ 1874 ಮತ್ತು ವಾಯುಕಾಯ್ದೆ 1981) | ಪ್ರಾದೇಶಿಕ ಅಧಿಕಾರಿ | 30 ದಿನ |
| | **ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗ** | | |
| 80 | ಸಿಬ್ಬಂದಿ/ವಿದ್ಯಾರ್ಥಿಗಳ ಅರ್ಜಿಗಳನ್ನು ಮೇಲಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು | ನಿರ್ದೇಶಕರು | 2 ದಿನ |
| 81 | ವ್ಯಾಸಂಗ ಪ್ರಮಾಣ ಪತ್ರ | ನಿರ್ದೇಶಕರು | 2 ದಿನ |
| | **ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ** | | |
| 82 | ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿನ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ರಸ್ತೆ ಅಗೆತಕ್ಕೆ ಅನುಮತಿ ನೀಡುವಿಕೆ | ಸಹಾಯಕ ಕಾರ್ಯಪಾಲಕ ಅಭಯಂತರರು | 15 ದಿನ |
| | **ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗ** | | |
| 83 | ಅರ್ಹತಾ ಪ್ರಮಾಣಪತ್ರ ನೀಡುವುದು | ಉಪಕುಲಸಚಿವರು | 6 ದಿನ |
| 84 | ಮರು ಪ್ರವೇಶ ಅನುಮೋದನೆ ನೀಡುವುದು | ಉಪಕುಲಸಚಿವರು | 6 ದಿನ |
| | **ಉನ್ನತ ಶಿಕ್ಷಣ ಇಲಾಖೆಯ– 'ಕಾಲೇಜು ಶಿಕ್ಷಣ ಇಲಾಖೆ'** | | |
| 85 | ವಿದ್ಯಾರ್ಹತೆ ಪ್ರಮಾಣ ಪತ್ರ | ಪ್ರಾಂಶುಪಾಲರು | 5 ದಿನ |
| 86 | ವರ್ಗಾವಣೆ ಪ್ರಮಾಣ ಪತ್ರ ರವಾನೆ | ಪ್ರಾಂಶುಪಾಲರು | 6 ದಿನ |
| 87 | ವೈದ್ಯಕೀಯ ವೆಚ್ಚ ಮಂಜೂರಾತಿ | ನಿರ್ದೇಶಕರು | 60 ದಿನ |
| | **ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ** | | |
| 88 | ಘೋಷಿತ ಕೊಳಚೆ ಪ್ರದೇಶಗಳಲ್ಲಿ ನಿವಾಸಿಗಳ ಮನೆ ನಿರ್ಮಿಸಿಕೊಂಡವರಿಗೆ ಹಕ್ಕು ಪತ್ರ ಪಡೆದವರು ಸರ್ಕಾರ ನಿಗಧಿಪಡಿಸಿದ ಹಣ ಪಾವತಿಸಿದ ಫಲಾನುಭವಿಗಳ ಶುದ್ಧ ಕ್ರಯಪತ್ರ | ಕಾರ್ಯಪಾಲಕ ಅಭಿಯಂತರರು | 30 ದಿನ |
| | **ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ** | | |
| 89 | ಅಧ್ಯರ್ಪಿತ ರಜೆಯ ವೇತನ ಮಂಜೂರಾತಿ | ಸರ್ಕಾರದ ಅಧೀನ ಕಾರ್ಯದರ್ಶಿ | 3 ದಿನ |
| 90 | ಹಬ್ಬದ ಮುಂಗಡ ಮಂಜೂರಾತಿ | ಸರ್ಕಾರದ ಅಧೀನ ಕಾರ್ಯದರ್ಶಿ | 7 ದಿನ |
| | **ವಾರ್ತಾ ಇಲಾಖೆ** | | |
| 91 | ಚಲನಚಿತ್ರಗಳ ಚಿತ್ರೀಕರಣಕ್ಕೆ ಅನುಮತಿ ನೀಡುವುದು | ಉಪನಿರ್ದೇಶಕರು, ಚಲನಚಿತ್ರ ಶಾಖೆ | 15 ದಿನ |
| | **ಆಯುಕ್ತಾಲಯ ಬೆಂಗಳೂರು ಮತ್ತು ಮೈಸೂರು** | | |
| 92 | ವೈದ್ಯಕೀಯ ವೆಚ್ಚ ಮರುಪಾವತಿ | ಜಿಲ್ಲಾ ಉಪನಿರ್ದೇಶಕರು | 30 ದಿನ |
| 93 | ವಾಹನ ಖರೀದಿ/ಜಿ.ಪಿ.ಎಫ್/ಕೆ.ಜಿ.ಐ.ಡಿ/ ಕಂಪ್ಯೂಟರ್ ಮತ್ತು ಇತರೆ ಮುಂಗಡಗಳು | ಜಿಲ್ಲಾ ಉಪನಿರ್ದೇಶಕರು | 30 ದಿನ |
| | **ಪತ್ರಗಾರ ಇಲಾಖೆ** | | |
| 94 | ಸಾರ್ವಜನಿಕರು ಕೋರಿರುವ ಹಳೆಯ ದಾಖಲಾತಿಗಳು ಡಿಜಿಟೈಸೇಷನ್ ಪ್ರತಿಗಳು ಮತ್ತು ಮೈಕ್ರೊಫಿಲಂ ಸುರುಳಿಯಲ್ಲಿನ ಪ್ರತಿಗಳು ಹಾಗೂ ಸಂರಕ್ಷಿಸಲ್ಪಟ್ಟ ಇತರೆ ದಾಖಲಾತಿಗಳ ಪ್ರತಿಯನ್ನು ಒದಗಿಸುವುದು | ಸಹಪತ್ರ ಪಾಲಕರು | 15 ದಿನ |
| | **ಕನ್ನಡ ಮತ್ತು ಸಂಸ್ಕೃತಿ ಇಲಾಖೆ** | | |
| 95 | ಕಲಾವಿದರಿಗೆ ರೈಲ್ವೆ ರಿಯಾಯಿತಿ ಶಿಫಾರಸ್ಸು ಪತ್ರ ನೀಡಿಕೆ | ಸಹಾಯಕ ನಿರ್ದೇಶಕರು | 3 ದಿನ |
| | **ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗ** | | |
| 96 | ವೇತನ ಪ್ರಮಾಣ ಪತ್ರ | ಹಣಕಾಸು ಅಧಿಕಾರಿಗಳು | 3 ದಿನ |
| | **ಕರ್ನಾಟಕ ರಾಜ್ಯ ಉಗ್ರಾಣ ನಿಗಮ** | | |
| 97 | ರೈತರು ಮತ್ತು ಇತರೆ ದಾಸ್ತಾನುದಾರರ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯದಲ್ಲಿ ಉಗ್ರಾಣ ಮಳಿಗೆಗಳನ್ನು ಸ್ಥಾಪಿಸುವುದು ಹಾಗೂ ಕೃಷಿ ಉತ್ಪನ್ನಗಳು, ಬೀಜಗಳು, ಗೊಬ್ಬರ ಮತ್ತು ಕೃಷಿ ಸಲಕರಣೆಗಳು ಹಾಗೂ ಇತರೆ ಅಧಿಸೂಚಿತ ಸರಕುಗಳನ್ನು ವೈಜ್ಞಾನಿಕವಾಗಿ ದಾಸ್ತಾನು ಮಾಡುವುದು. | ಉಗ್ರಾಣ ವ್ಯವಸ್ಥಾಪಕರು | 15 ದಿನ |
| | **ಸಹಕಾರ ಸಂಘಗಳ ನಿಬಂಧಕರು** | | |
| 98 | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರಡಿ ಸಹಕಾರ ಸಂಘಗಳ ಕುರಿತಂತೆ ತಿದ್ದುಪಡಿ | ಉಪವಿಭಾಗೀಯ ಸಹಾಯಕ ನಿಬಂಧಕರು | 89 ದಿನಗಳು |
| | **ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ** | | |
| 99 | ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆ | ಸಹಾಯಕ ನಿರ್ದೇಶಕರು, ಸರ್ಕಾರಿ ಕೇಂದ್ರ | 15 ದಿನ |
| | **ಅಬಕಾರಿ ಇಲಾಖೆ** | | |
| 100 | ಅವಧಿಬದ್ಧ ಉನ್ನತೀಕರಣದ ಅನುಮೋದನೆ ಗ್ರೂಪ್–ಎ ಅಧಿಕಾರಿಗಳು | ಅಧೀನ ಕಾರ್ಯದರ್ಶಿ | 15 ದಿನ |

# ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ - 2011




## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

| ಕ್ರ.ಸಂ. | ಇಲಾಖೆಯ ಮುಖ್ಯ ಸೇವೆಗಳ ಪಟ್ಟಿ | ಹೆಸರಿಸಲಾದ ಅಧಿಕಾರಿ | ಹೆಸರಿಸಲಾದ ಅಧಿಕಾರಿಗೆ ಗೊತ್ತುಮಾಡಿದ ಕಾಲ (ಕೆಲಸದ ದಿನಗಳು) |
|---|---|---|---|
| 1 | ಕಟ್ಟಡ ಲೈಸೆನ್ಸ್ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಗ್ರಾಮ ಪಂಚಾಯತಿ ಕಾರ್ಯದರ್ಶಿ | 60 |
| 2 | ಸಾಮಾನ್ಯ ಲೈಸೆನ್ಸ್ (ವಾಣಿಜ್ಯ ಲೈಸೆನ್ಸ್) | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಗ್ರಾಮ ಪಂಚಾಯತಿ ಕಾರ್ಯದರ್ಶಿ | 45 |
| 3 | ಕುಡಿಯುವ ನೀರಿನ ನಿರ್ವಹಣೆ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಗ್ರಾಮ ಪಂಚಾಯತಿ ಕಾರ್ಯದರ್ಶಿ | 03 |
| 4 | ಬೀದಿ ದೀಪಗಳ ನಿರ್ವಹಣೆ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಗ್ರಾಮ ಪಂಚಾಯತಿ ಕಾರ್ಯದರ್ಶಿ | 03 |
| 5 | ಗ್ರಾಮ ನೈರ್ಮಲ್ಯ ನಿರ್ವಹಣೆ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಗ್ರಾಮ ಪಂಚಾಯತಿ ಕಾರ್ಯದರ್ಶಿ | 07 |
| 6 | ದಸ್ತಾವೇಜುಗಳನ್ನು ನೀಡುವುದು | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಗ್ರಾಮ ಪಂಚಾಯತಿ ಕಾರ್ಯದರ್ಶಿ | 30 |
| 7 | ಅಕುಶಲ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸುವುದು | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಗ್ರಾಮ ಪಂಚಾಯತಿ ಕಾರ್ಯದರ್ಶಿ | 15 |
| 8 | ಎಸ್ಕಾಂಗೆ ನಿರಾಕ್ಷೇಪಣಾ ಪ್ರಮಾಣ ಪತ್ರ | ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಗ್ರಾಮ ಪಂಚಾಯತಿ ಕಾರ್ಯದರ್ಶಿ | 45 |

ಇಂದು... ನಾಳೆ... ಇನ್ನಿಲ್ಲ- ಹೇಳಿದ ಸಮಯ (ದಿನ) ತಪ್ಪೊಲ್ಲ

ಹೆಚ್ಚಿನ ಮಾಹಿತಿಗೆ ನಮ್ಮನ್ನು ಸಂಪರ್ಕಿಸಿ:

**ಸಕಾಲಕ್ಕೆ ಸೇವೆ ನೀಡದಿದ್ದರೆ !!**
ಸರ್ಕಾರಿ ನೌಕರರು ನಾಗರಿಕರಿಗೆ ರೂ.20/- ರಿಂದ ರೂ.500/-ಗಳವರೆಗೆ ಪರಿಹಾರ ಶುಲ್ಕವನ್ನು ತನ್ನ ಸಂಬಳದಿಂದ ಭರಿಸುವುದು

080 44554455
sakala@nic.in
www.sakala.kar.nic.in

"15 ಸಂಖ್ಯೆಯುಳ್ಳ **ಸ್ವೀಕೃತಿ ರಸೀದಿಯನ್ನು** ಕೇಳಿ ಪಡೆಯುವುದು, ಅದು ನಿಮ್ಮ ಹಕ್ಕು"

**2014 ಫೆಬ್ರವರಿ**

| ಭಾ | ಸೋ | ಮಂ | ಬ | ಗು | ಶು | ಶ | ಭಾ | ಸೋ | ಮಂ | ಬ | ಗು | ಶು | ಶ | ಭಾ | ಸೋ | ಮಂ | ಬ | ಗು | ಶು | ಶ |
|---|---|---|---|---|---|---|---|---|---|---|---|---|---|---|---|---|---|---|---|---|
| | | | | | | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 | 23 | 24 | 25 | 26 | 27 | 28 | | | | | | | | |

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು